ದೆಹಲಿ ಕರ್ನಾಟಕ ಸಂಘದ

ಇಪ್ಪತ್ತೆರಡರ ಹೊಸ್ತಿಲಲ್ಲಿ

# ಅಭಿಮತ

ಅಕ್ಟೋಬರ್ 2011 ಬೆಲೆ ರೂ. 1.



## ಜ್ಞಾನಪೀಠದ ಶಿಖರವೇರಿದ ಕನ್ನಡದ 'ಸಿರಿ ಸಂಪಿಗೆ'

# ಗಾಂಧಿ ಜಯಂತಿಯ ಶುಭ ದಿನದಂದು ಕನ್ನಡ ಕಲಿಸುವ ಕೇಂದ್ರದ ಪ್ರಾರಂಭ





"ನಾಳಿನ ಪೀಳಿಗೆಯ ಹೊರನಾಡ ಕನ್ನಡ ಮಕ್ಕಳು ಮಾತೃಭಾಷೆಯನ್ನು ಕಲಿಯುವುದು ಇಂದು ಅತ್ಯಂತ ಅವಶ್ಯಕ. ಮಾತೃ ಭಾಷೆಯನ್ನು ಕಲಿಯುವುದರ ಮೂಲಕ ನಮ್ಮ ನಾಡು, ನುಡಿ, ಸಂಸ್ಕೃತಿಯ ಹಿರಿಮೆಯನ್ನು ಅರಿಯುವುದು ಸೂಕ್ತ. ಇದಕ್ಕೆ ದೆಹಲಿ ಕರ್ನಾಟಕ ಸಂಘ ಮುಂದಾಗಿರುವುದು ಬಹಳ ಹೆಮ್ಮೆಯ ಸಂಗತಿ" ಎಂದು ದೆಹಲಿಯ ಕರ್ನಾಟಕ ಸರ್ಕಾರದ ಹೆಚ್ಚುವರಿ ವಿಶೇಷ ಪ್ರತಿನಿಧಿ ಶ್ರೀ ಬೈಕೆರೆ ನಾಗೇಶ್ ಅವರು ಅಭಿಪ್ರಾಯಪಟ್ಟರು. ಗಾಂಧಿ ಜಯಂತಿಯ ಶುಭ ಸಂದರ್ಭದಲ್ಲಿ ಇದೇ ಅಕ್ಟೋಬರ್ 2ರಂದು ದೆಹಲಿ ಕರ್ನಾಟಕ ಸಂಘವು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸಹಯೋಗದೊಡನೆ ಆಯೋಜಿಸಿದ್ದ ಕನ್ನಡ ಕಲಿಸುವ ಕೇಂದ್ರವನ್ನು ಉದ್ಘಾಟಿಸಿದ ನಾಗೇಶ್ ಅವರು "ಕನ್ನಡ ಕಲಿಯುವ ಮಕ್ಕಳೆಲ್ಲರೂ ಸೇರಿ ನಿಜಕ್ಕೂ ಹಬ್ಬದ ವಾತಾವರಣವನ್ನುಂಟು ಮಾಡಿದೆ. ಗಾಂಧಿ ಜಯಂತಿಯ ದಿನದಂದು ಪ್ರಾರಂಭ ಮಾಡಿರುವುದು ಅರ್ಥಪೂರ್ಣ ಹಾಗೂ ಅಭಿನಂದನೀಯ" ಎಂದು ಹೇಳುತ್ತಾ ಈ ನಿಟ್ಟಿನಲ್ಲಿ ಬೇಕಾದ ಎಲ್ಲ ನೆರವನ್ನೂ ಒದಗಿಸುವುದಾಗಿ ಆಶ್ವಾಸನೆ ಇತ್ತರು.

ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ದೆಹಲಿಯ ಡೆಕ್ಕನ್ ಹೆರಾಲ್ಡ್ ಪತ್ರಿಕೆಯ ಬ್ಯೂರೋ ಮುಖ್ಯಸ್ಥರು ಹಾಗೂ ರಾಜಕೀಯ ವಿದ್ಯಮಾನಗಳ ಸಂಪಾದಕರೂ ಆದ ಶ್ರೀ ಬಿ.ಎಸ್. ಅರುಣ್ ಅವರು ಕನ್ನಡ ದೀಪವನ್ನು ಬೆಳಗಿಸಿದರು. "ಕನ್ನಡ ಮಕ್ಕಳ ಭಾಗವಹಿಸುವಿಕೆ ಕಂಡು ತುಂಬಾ ಸಂತೋಷವಾಗಿದೆ. 'ಬೆಳೆಯುವ ಪೈರು ಮೊಳಕೆಯಲ್ಲಿ' ಎಂಬಂತೆ ಇಂದು ಬೀಜವನ್ನು ಬಿತ್ತಿದ್ದೀರಿ. ಇದು ಸಮೃದ್ಧವಾಗಿ ಬೆಳೆಯಲಿ, ಫಲ ನೀಡಲಿ" ಎಂದು ಆಶಿಸುತ್ತಾ ಇದರ ವ್ಯಾಪ್ತಿ ಮತ್ತಷ್ಟು ವಿಸ್ತಾರವಾಗಿ ಬೆಳೆದು ಅನ್ಯ

ಭಾಷಿಕರೂ ಕನ್ನಡ ಕಲಿಯುವಂತಾಗಲಿ, ಸಂಘ ಇದಕ್ಕೆ ಸೂಕ್ತ ವೇದಿಕೆಯಾಗಲಿ ಎಂದು ಹಾರೈಸಿದರು.

ಮೊದಲಿಗೆ ಕುಮಾರಿ ಪ್ರೇರಣಾ ರಾವ್ ಅವರ ವಿದ್ಯಾದೇವತೆ ಸರಸ್ವತಿ ಹಾಗೂ ವಿದ್ಯಾ ಗಣಪತಿಯ ಪ್ರಾರ್ಥನೆಯೊಂದಿಗೆ ಗ್ರಂಥಾಲಯದಲ್ಲಿ ಕಾರ್ಯಕ್ರಮ ಪ್ರಾರಂಭವಾಯಿತು. ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಸಂಘದ ಅಧ್ಯಕ್ಷರಾದ ಡಾ. ವೆಂಕಟಾಚಲ ಹೆಗಡೆ ಅವರು ಅತಿಥಿಗಳನ್ನು ಸ್ವಾಗತಿಸಿ, ಪ್ರಾಸ್ತಾವಿಕ ನುಡಿಗಳನ್ನಾಡಿದರು. "ದೆಹಲಿ ಕರ್ನಾಟಕ ಸಂಘದ ಬಹುದಿನಗಳ ಕನಸು ನನಸಾಗುತ್ತಿರುವುದು ಬಹಳ ಸಂತಸ ತಂದಿದೆ. ಮಾತೃಭಾಷೆಯನ್ನು ಕಲಿಯುವುದರ ಮೂಲಕ ಜ್ಞಾನದ ವ್ಯಾಪ್ತಿ ಹೆಚ್ಚುತ್ತದೆ. ಗ್ರಂಥಾಲಯದ ಪುಸ್ತಕಗಳ ಮಧ್ಯೆ ಕನ್ನಡದ ಮಕ್ಕಳು ಕಲಿಯುತ್ತಿರುವ ಈ ದಿನ ಸುದಿನ" ಎಂದು ತಮ್ಮ ಸಂತಸವನ್ನು ವ್ಯಕ್ತಪಡಿಸಿದರು. ಕೆಲವು ದಿನಗಳ ಹಿಂದೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮುಖ್ಯಮಂತ್ರಿ ಚಂದ್ರು ಅವರಿಗೆ ಸಲ್ಲಿಸಿದ ಮನವಿಗೆ ಸ್ಪಂದಿಸಿ ಒಟ್ಟು 1.5ಲಕ್ಷ ರೂಪಾಯಿಗಳ ಅನುದಾನದ ಮೊದಲ ಕಂತಾಗಿ 1ಲಕ್ಷ ರೂ ಬಿಡುಗಡೆ ಮಾಡಿದ ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ವೆಂಕಟಾಚಲ ಹೆಗಡೆ ಅವರು ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸಿದರು.

ಈ ಸಮಾರಂಭಕ್ಕೆ ಆಗಮಿಸಿದ್ದ ಬೆಂಗಳೂರಿನ ಲೇಖಕಿ ಶ್ರೀಮತಿ ಸುಕನ್ಯ ಕನರಳ್ಳಿ ಅವರಿಗೆ ಅಧ್ಯಕ್ಷ ವೆಂಕಟಾಚಲ ಹೆಗಡೆ ಅವರು ಹೂಗುಚ್ಛ ನೀಡಿ ಸ್ವಾಗತಿಸಿದರು. ಸುಕನ್ಯ ಅವರು ತಾವು ಅಮೇರಿಕೆಯಲ್ಲಿದ್ದಾಗ ಕನ್ನಡ ತುಂಬಾ ಕಾಡಿದಾಗ ಅಲ್ಲಿ ಸೂಕ್ತವಾದ ಸವಲತ್ತುಗಳು ಸಿಗದಿದ್ದನ್ನು ನೆನಪಿಸಿಕೊಳ್ಳುತ್ತಾ ರಾಷ್ಟ್ರದ ರಾಜಧಾನಿಯಲ್ಲಿ ದೆಹಲಿ ಕರ್ನಾಟಕ ಸಂಘದ ಕಾರ್ಯವ್ಯಾಪ್ತಿಯನ್ನು ಕಂಡು ಹೆಮ್ಮೆಯಾಗಿದೆ ಎಂದರು. ಮಕ್ಕಳಲ್ಲಿ ಕನ್ನಡ ಪ್ರಜ್ಞೆಯನ್ನು ಕಲಿಸುವ ಹಾಗೂ ಬೆಳೆಸುವ ಸಾಮಾಜಿಕ ಹೊಣೆಗಾರಿಕೆಯನ್ನು ಸಂಘ ಸಮರ್ಥವಾಗಿ ನಿರ್ವಹಿಸಲಿ ಎಂದು ಶುಭ ಹಾರೈಸಿದರು.

"ಕನ್ನಡ ಒಂದು ದ್ರಾವಿಡ ಭಾಷೆ" ಎಂಬ ಸಾಕ್ಷ್ಯಚಿತ್ರವನ್ನು ಪ್ರದರ್ಶಿಸಲಾಯಿತು. ಡಾ. ಪುರುಷೋತ್ತಮ ಬಿಳಿಮಲೆ ಅವರು ಮಕ್ಕಳಿಗೆ ಸಾಂಕೇತಿಕವಾಗಿ ಕನ್ನಡ ಕಲಿಸುವ ಮೂಲಕ ತರಬೇತಿ ಕಾರ್ಯಕ್ರಮದ ಶುಭಾರಂಭ ಮಾಡಿದರು. ಪುಟಾಣಿಗಳೆಲ್ಲರೂ ಸಂಭ್ರಮ, ಸಂತಸದಿಂದ ಕನ್ನಡ ಕಲಿಯಲು ಪ್ರಾರಂಭಿಸಿದ್ದು ಭಾಗವಹಿಸಿದ್ದ ಪೋಷಕರೆಲ್ಲರಿಗೂ ಹೆಮ್ಮೆಯ ಸಂಗತಿಯಾಗಿತ್ತು. ಸಂಘದ ಕಾರ್ಯದರ್ಶಿ ಸಿ.ಎಂ. ನಾಗರಾಜ ಅವರು ವಂದಿಸಿದರು. ಸಂಘದ ಉಪಾಧ್ಯಕ್ಷೆ ಉಷಾ ಭರತಾದ್ರಿ ಕಾರ್ಯಕ್ರಮ ನಿರ್ವಹಿಸಿದರು.

**ಉಷಾ ಭರತಾದ್ರಿ**

ಪ್ರತಿ ಶನಿವಾರ ಮತ್ತು ಭಾನುವಾರದಂದು ಕನ್ನಡ ಕಲಿಸಲಾಗುವುದು.
ಕಲಿಯಲು ಹಾಗೂ ಕಲಿಸಲು ಆಸಕ್ತಿವುಳ್ಳವರು ಸಂಪರ್ಕಿಸಿ
011–26109615 / 65643615



ದೆಹಲಿ ಕನ್ನಡಿಗರ ಪರವಾಗಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ, ಉಪಾಧ್ಯಕ್ಷೆ ಉಷಾ ಭರತಾದ್ರಿ ಮತ್ತು ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ಅವರು ಮುಖ್ಯಮಂತ್ರಿ ಶ್ರೀ ಡಿ.ವಿ. ಸದಾನಂದ ಗೌಡ ಅವರನ್ನು ಅಕ್ಟೋಬರ್ 1 ರಂದು ಕರ್ನಾಟಕ ಭವನದಲ್ಲಿ ಅಭಿನಂದಿಸಿದರು. ಕರ್ನಾಟಕ ಸರ್ಕಾರದ ವಿಶೇಷ ಹೆಚ್ಚುವರಿ ಪ್ರತಿನಿಧಿ ಬೈಕೆರೆ ನಾಗೇಶ್ ಮತ್ತು ದೆಹಲಿಯ ಹಿರಿಯ ಕಲಾವಿದರಾದ ಭೀಮರಾವ್ ಮುರಗೋಡ ಅವರು ಜತೆಗಿದ್ದರು.

ಅಭಿಮತ

ಸಂಪುಟ 22 ಸಂಚಿಕೆ 1
ಅಕ್ಟೋಬರ್ 2011, ಬೆಲೆ ರೂ. 1

ಪ್ರಧಾನ ಸಂಪಾದಕರು
ಉಷಾ ಭರತಾದ್ರಿ

ಸಂಪಾದಕ ಮಂಡಳಿ
ಚೆನ್ನು ಎಸ್. ಮಠದ
ರೇಣುಕಾ ಎಸ್. ನಿಡಗುಂದಿ
ಸಂತೋಷ್ ಕುಮಾರ್ ಉಪಾಧ್ಯಾಯ
ಚಂದ್ರಶೇಖರ ಎನ್.ಪಿ.

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ

ಅಧ್ಯಕ್ಷರು
ಡಾ. ವೆಂಕಟಾಚಲ ಜಿ. ಹೆಗಡೆ

ಉಪಾಧ್ಯಕ್ಷರು
ಉಷಾ ಭರತಾದ್ರಿ
ಬಿ.ಕೆ. ಬಸವರಾಜು

ಪ್ರಧಾನ ಕಾರ್ಯದರ್ಶಿ
ಸಿ.ಎಂ. ನಾಗರಾಜ

ಖಜಾಂಚಿ
ಕೆ.ಆರ್. ರಾಮಮೂರ್ತಿ

ಜಂಟಿ ಕಾರ್ಯದರ್ಶಿಗಳು
ಎನ್.ಆರ್. ಶ್ರೀನಾಥ್
ರೇಣುಕಾ ಎಸ್. ನಿಡಗುಂದಿ

ಸಮಿತಿ ಸದಸ್ಯರು
ಆಂಜನಿ ಗೌಡ
ಎಸ್.ಸಿ. ಹೇಮಲತ
ಟಿ.ಎಂ. ಮೈಲಾರಪ್ಪ
ಪಿ.ಸಿ. ಶ್ರೀನಿವಾಸ
ಸಿ.ಆರ್. ಶ್ರೀನಿವಾಸ
ಜಿ.ಜಿ. ಹೆಗಡೆ
ಆನಂದ ಈಶ್ವರಪ್ಪ ಮುರಗೋಡ
ಬಿ. ನಾರಾಯಣ
ಆರ್. ರೇಣುಕುಮಾರ್
ಎಸ್. ಕೃಷ್ಣ ಭಟ್
ಶಶಿಕಾಂತ್ ಪಾಟೀಲ್

ಮುಖಪುಟ ಚಿತ್ರ
ಹಂಪಿ ಯಾಜಿ

**DELHI KARNATAKA SANGHA**
Rao Tularam Marg, Sector-12, R K Puram,
New Delhi-110022.
Phone: 011-26109615. 011-65643615
email:dksangha@gmail.com
website : www.delhikarnatakasangha.com

# ಮನದ ಮಾತು

ನಮ್ಮ ಹೆಮ್ಮೆಯ ಮಾತೃಭಾಷೆ, ಎರಡು ಸಹಸ್ರ ವರ್ಷಗಳ ಸುದೀರ್ಘ ಇತಿಹಾಸ ಹಾಗೂ ಭವ್ಯ ಪರಂಪರೆಯ ಸಂಪನ್ನ ಕನ್ನಡ ನುಡಿ ಮತ್ತೊಂದು ಜ್ಞಾನಪೀಠ ಪುರಸ್ಕಾರದಿಂದ ಮತ್ತಷ್ಟು ಸಮೃದ್ಧವಾಗಿದೆ; ಭಾರತೀಯ ಭಾಷೆಗಳಲ್ಲಿ ಒಟ್ಟು ಎಂಟು ಜ್ಞಾನಪೀಠ ಪ್ರಶಸ್ತಿಗಳನ್ನು ಸ್ವೀಕರಿಸಿದ ಏಕೈಕ ಭಾಷೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇದು ಅತ್ಯಂತ ಸಂಭ್ರಮದ ಸಂಗತಿ. ಪ್ರೊ. ಚಂದ್ರಶೇಖರ ಕಂಬಾರ ಅವರ ಅಮೂಲ್ಯ ಸಾಹಿತ್ಯ ಕೃಷಿಗೆ ಈ ಬಾರಿಯ ಜ್ಞಾನಪೀಠ ಪ್ರಶಸ್ತಿ ಸಂದಿದೆ. ಕಾವ್ಯ, ನಾಟಕ, ಕಾದಂಬರಿ–ಹೀಗೆ ಹತ್ತು ಹಲವು ಸಾಹಿತ್ಯ ಪ್ರಕಾರಗಳಲ್ಲಿ ತಮ್ಮದೇ ಆದ ಸೃಜನಶೀಲ ಪ್ರತಿಭೆಯಿಂದ ಅದ್ಭುತಗಳನ್ನು ಕಂಬಾರರು ಸೃಷ್ಟಿಸಿದ್ದಾರೆ. ವಿಶಿಷ್ಟ ಪ್ರತಿಭೆ, ವಿಭಿನ್ನ ಹಿನ್ನೆಲೆ, ಪಾರಂಪರಿಕ ಸಂಸ್ಕಾರ, ಅಪ್ಪಟ ಜಾನಪದ ಸೊಗಡನ್ನು ತುಂಬಿಕೊಂಡು ಮೈದಳೆದ ತಮ್ಮದೇ ಆದ ಮೋಹಕ ಭಾಷಾ ಶೈಲಿಯಿಂದ ಕಂಬಾರರು ಕೃತಿಗಳನ್ನು ರಚಿಸಿದ್ದಾರೆ. 'ಮರತೇನೆಂದರ ಮರೆಯಲಿ ಹೆಂಗ ಮಾವೋತ್ಸೆ ತುಂಗ' ಎಂದು ಮಾವೋ ಕುರಿತು ಕಂಬಾರರು ಬರೆದಿರುವ ಕವನದ ಸಾಲುಗಳು ಕನ್ನಡಿಗರೆಲ್ಲರ ಮನಗಳಲ್ಲಿ ಸದಾ ಅನುರಣಿಸುತ್ತಿರುತ್ತದೆ. ನಿಜ ಹೇಳಬೇಕೆಂದರೆ ಕಂಬಾರರ ಕವನಗಳನ್ನಾಗಲೀ ನಾಟಕಗಳನ್ನಾಗಲೀ ಕಾದಂಬರಿಗಳನ್ನಾಗಲೀ ಸಹೃದಯ ಓದುಗ 'ಮರತೇನಂದರೂ' ಎಂದೆಂದೂ ಮರೆಯಲಾರ! ಸೊಗಸಾದ ದೇಸಿ ಭಾಷೆ, ಪ್ರಾಚೀನ ಆದರೆ ಅರ್ವಾಚೀನ ವಿಚಾರಧಾರೆ, ಮನಸ್ಸಿನಲ್ಲಿ ಸಂಭ್ರಮದ ಅಲೆಗಳನ್ನು ಉಕ್ಕಿಸುವ ಪಾತ್ರಗಳು ಅವರ ನಾಟಕಗಳನ್ನು ರಾಷ್ಟ್ರಮಟ್ಟದಲ್ಲಿ ಗುರುತಿಸುವಂತೆ ಮಾಡಿವೆ. ರಂಜನೆ, ಬೋಧನೆ, ಪ್ರಚೋದನೆಗಳ ಅಪೂರ್ವ ಸಮ್ಮಿಲನವನ್ನು ಕಂಬಾರರ ಸೃಷ್ಟಿಗಳಲ್ಲಿ ಕಾಣಬಹುದು. ಕಂಬಾರರು ಕೇವಲ ತಮ್ಮ ಲೇಖನಿಯಿಂದ ಸ್ವರ್ಗವನ್ನು ಧರೆಗಿಳಿಸಿದವರಲ್ಲ, ಕ್ಯಾಮೆರಾ ಕಣ್ಣಿನ ಮೂಲಕ ಹಾಗೂ ಸಂಗೀತದ ಶ್ರುತಿಯ ಮೂಲಕವೂ ತಮ್ಮ ಪ್ರತಿಭೆಯಿಂದ ಬೆರಗುಗೊಳಿಸಿದ್ದಾರೆ. ಅವರು ಚಿತ್ರ ನಿರ್ದೇಶಕರು ಹಾಗೂ ಸಂಗೀತ ನಿರ್ದೇಶಕರೂ ಕೂಡ. ಅಷ್ಟೇ ಅಲ್ಲ ಸ್ವತಃ ಹಾಡುಗಾರರೂ ಹೌದು. ಕಂಬಾರರು ಕೇವಲ ಸಾಹಿತ್ಯ ಸೃಷ್ಟಿಯಿಂದಷ್ಟೇ ಅಲ್ಲ ತಮ್ಮ ಅಪೂರ್ವ ಆಡಳಿತ ಪ್ರತಿಭೆಯಿಂದಲೂ ನಾಡಿಗೆ ಅಮೂಲ್ಯ ಕಾಣಿಕೆ ನೀಡಿದ್ದಾರೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯದ ವಿಶಿಷ್ಟ ಕಟ್ಟಡಗಳು, ಇಡೀ ಪರಿಸರದ ಅಚ್ಚುಕಟ್ಟಾದ ವಿನ್ಯಾಸ–ಕಂಬಾರರ ಪರಿಕಲ್ಪನೆಯಲ್ಲಿ ಮೂಡಿ ನಂತರ ನೆಲೆ ನಿಂತವು. ಕನ್ನಡ ವಿಶ್ವವಿದ್ಯಾಲಯದ ಮೊತ್ತ ಮೊದಲ ಕುಲಪತಿಗಳಾಗಿದ್ದ ಕಂಬಾರರು ಈ ವಿಶ್ವವಿದ್ಯಾಲಯ ವಿಶಿಷ್ಟ, ವಿಭಿನ್ನ ಅನ್ನಿಸುವಂತೆ ಪರಿಶ್ರಮಿಸಿದರು. ನಂತರ ಅವರು ದೆಹಲಿಯ ಪ್ರತಿಷ್ಠಿತ ರಾಷ್ಟ್ರೀಯ ನಾಟಕ ಶಾಲೆಯ ಅಧ್ಯಕ್ಷರಾಗಿದ್ದರು. ತದನಂತರ ವಿಧಾನಪರಿಷತ್ತಿನ ಸದಸ್ಯರಾಗಿ ಶಾಸನ ಸಭೆಯಲ್ಲಿ ಕನ್ನಡಪರ ದನಿಯಾದರು. ಬಹುಮುಖ ಪ್ರತಿಭೆಯ ಚಂದ್ರಶೇಖರ ಕಂಬಾರರಿಗೆ 'ಅಭಿಮತ' ದೆಹಲಿ ಕನ್ನಡಿಗರೆಲ್ಲರ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತದೆ; ಇಂತಹ ಅಪೂರ್ವ ಪ್ರತಿಭಾವಂತರಿಗೆ ಜನ್ಮವಿತ್ತ ಕನ್ನಡ ಭುವನೇಶ್ವರಿಗೆ ಅಭಿವಂದನೆಗಳನ್ನು ಸಮರ್ಪಿಸುತ್ತದೆ.

ನಿಮ್ಮ ಪ್ರೀತಿಯ 'ಅಭಿಮತ'ಕ್ಕೆ ಈಗ ಇಪ್ಪತ್ತೆರಡರ ಹರೆಯ. ಪ್ರಸ್ತುತ ಸಂಚಿಕೆ ಇಪ್ಪತ್ತೆರಡನೇ ಸಂಪುಟದ ಮೊದಲ ಸಂಚಿಕೆ. ದೆಹಲಿ ಕರ್ನಾಟಕ ಸಂಘದ ಮುಖಪತ್ರಿಕೆಯಾಗಿ 'ಅಭಿಮತ' ತನ್ನ ಸುದೀರ್ಘ ಪಯಣದಲ್ಲಿ ಎಂದೂ ಬಸವಳಿಯದೆ ಉತ್ಸುಕತೆ, ಲವಲವಿಕೆ, ಜೀವನ ಪ್ರೀತಿ, ನಾಡು ನುಡಿಗಳ ಅಭಿಮಾನ, ರಾಷ್ಟ್ರದ ಬಗೆಗಿನ ಪ್ರೇಮಗಳನ್ನು ಕಾಪಾಡಿಕೊಂಡು ಬಂದಿದೆ. ಇದಕ್ಕೆ ಕಾರಣ ಶುರುವಿನಲ್ಲಿ ಈ ಪತ್ರಿಕೆಯ ಚುಕ್ಕಾಣಿ ಹಿಡಿದಿದ್ದ ಹಿರಿಯ ಚೇತನಗಳು ಹಾಕಿದ ಭದ್ರ ಬುನಾದಿ. ಎಂತಹುದೇ ಸಂದರ್ಭದಲ್ಲಿ ಎಂದೆಂದೂ ಅವಿವೇಕದಿಂದ ವರ್ತಿಸದೆ ಸಮಚಿತ್ತತೆಯನ್ನು ಉಳಿಸಿಕೊಂಡು ದೆಹಲಿ ಕನ್ನಡಿಗರ ಅಂತಸ್ಸಾಕ್ಷಿಯಾಗಿ ಬೆಳೆದು ಬಂದಿದೆ. ಈ ನಿಮ್ಮ ಹೆಮ್ಮೆಯ 'ಅಭಿಮತ' ಇಂದು ದೆಹಲಿ ಕನ್ನಡಿಗರನ್ನು ಮಾತ್ರವಲ್ಲ, ದೇಶದ ಎಲ್ಲೆಡೆ ತಲುಪುತ್ತಿದೆ, ಮೆಚ್ಚುಗೆ ಗಳಿಸಿದೆ. ಅಭಿಮತದ ಈ ಅಪೂರ್ವ ಸಾಧನೆಗೆ ಕಾರಣರಾದ ಹಿರಿಯ ಚೇತನಗಳಿಗೆ ನಮ್ಮ ನಮ್ರ ನಮನ. ಅಲ್ಲದೆ ಪತ್ರಿಕೆಗೆ ಜಾಹೀರಾತು ನೀಡಿ ಪ್ರೋತ್ಸಾಹಿಸುತ್ತಿರುವ ಬ್ಯಾಂಕ್ ಅಧಿಕಾರಿಗಳಿಗೆ ಹಾಗೂ ಕರ್ನಾಟಕ ಫುಡ್ ಸೆಂಟರ್‌ನ ಶೇಖರ್ ಬಂಗೇರಾ ಅವರಿಗೆ ನಮ್ಮ ವಿಶೇಷ ಕೃತಜ್ಞತೆಗಳು. ಜಾಹೀರಾತು ಪ್ರಾಯೋಜಿಸುವಲ್ಲಿ ಅತ್ಯಂತ ಕಾಳಜಿಯಿಂದ ಸ್ಪಂದಿಸಿ, ಸಹಕರಿಸುತ್ತಿರುವ ಶ್ರೀ ಲಕ್ಷ್ಮಣ ಮಲ್ಯ ಅವರಿಗೆ ಹೃತ್ಪೂರ್ವಕ ಧನ್ಯವಾದಗಳು. ಪತ್ರಿಕೆಯನ್ನು ಯಶಸ್ವಿಯಾಗಿ ಹೊರತರಲು ಸದಾ ತಮ್ಮ ಸಹಾಯ ಹಸ್ತವನ್ನು ಚಾಚುತ್ತಿರುವ ಆತ್ಮೀಯರಾದ ಪುರುಷೋತ್ತಮ ಬಿಳಿಮಲೆ, ಮಂಜುನಾಥ್ ಕಾಮತ್, ಪ್ರಕಾಶ್ ಶೆಟ್ಟಿ, ಎನ್.ಎಸ್. ರಾಕೇಶ್, ದಿನೇಶ್ ಶೆಣೈ, ಬಾಲಕೃಷ್ಣ ನಾಯ್ಕ್, ಅವನೀಂದ್ರನಾಥ ರಾವ್, ಆನಂದ್ ಮುರಗೋಡ, ಸುಮಂಗಲಾದೇವಿ... ಮತ್ತೆಲ್ಲರಿಗೂ ಸಂಪಾದಕ ಮಂಡಳಿಯ ಪರವಾಗಿ ಪ್ರೀತಿಪೂರ್ವಕ ವಂದನೆಗಳು. ಇಪ್ಪತ್ತೆರಡರ ಹರೆಯದ ಸುಂದರಿಯನ್ನು ಜೋಪಾನವಾಗಿ ಕಾಪಾಡುತ್ತಾ ಬೆಳೆಸುವುದರಲ್ಲಿ ತಮ್ಮೆಲ್ಲರ ಅಭಿಮಾನ ಹಾರೈಕೆ ಸದಾ ಇರಲಿ ಎಂಬುದು ನಮ್ಮ ಆಶಯ.

**ಎಲ್ಲರಿಗೂ ಬೆಳಕಿನ ಹಬ್ಬ ದೀಪಾವಳಿಯ ಹಾರ್ದಿಕ ಶುಭಾಶಯಗಳು.**

❑ ಉಷಾ ಭರತಾದ್ರಿ

# ಅಭಿಮತದ ಅಂಗಳದಲ್ಲಿ

ಅಭಿಮತಕ್ಕೆ ಈಗ ಇಪ್ಪತ್ತೆರಡರ ಹರೆಯ. ಪುಟ್ಟ ಪುಟ್ಟ ಹೆಜ್ಜೆಗಳನ್ನಿಡುತ್ತ, ತೊದಲು ನುಡಿಗಳನ್ನಾಡುತ್ತ, ಹದಿಹರೆಯದ ಬಿನ್ನಾಣಗಳನ್ನು ಮೈಗೂಡಿಸಿಕೊಳ್ಳುತ್ತ ಅದು ಬೆಳೆದು ಬಂದಿದೆ. ಈಗ ಅಭಿಮತವೆಂಬುದು ದೆಹಲಿ ಕರ್ನಾಟಕ ಸಂಘದ ಅವಿಭಾಜ್ಯ ಅಂಗವಾಗಿ ಹೋಗಿದೆ. ಸುಂದರವಾಗಿ, ಸುಭದ್ರವಾಗಿ, ವಿಚಾರಪೂರಿತವಾಗಿ ಮೂಡಿ ಬರುತ್ತಿದೆ. ಹೀಗೆ ಈ ಶತಮಾನದುದ್ದಕ್ಕೂ ಈ ಅಭಿಮತ ಸಾಗಿ ತನ್ನದೇ ಆದ ನೆಲೆಯನ್ನು ಕಂಡುಕೊಳ್ಳಲಿ ಎಂಬ ಹಾರೈಕೆ ನನ್ನದು. ಅಭಿಮತವನ್ನು ಹುಟ್ಟುಹಾಕಿ, ಅದನ್ನು ಎರಡೂ ಕೈಗಳಲ್ಲಿ ಓಲೈಸಿ, ಆಡಿಸಿ ಬೆಳೆಸಿದ ನನಗೆ, ಹಾಗೆಯೇ ಹಲವಾರು ಸಹೃದಯ ಕನ್ನಡಿಗರಿಗೆ ಇನ್ನಾವ ಬಗೆಯ ಹಾರೈಕೆಯನ್ನು ನೀಡಲಾದೀತು?

ಅಭಿಮತ ಪ್ರಾರಂಭವಾದದ್ದು ಸಂಘದ ಮುಖಪತ್ರಿಕೆಯಾಗಿ ಸಂಘದ ಚಟುವಟಿಕೆಗಳನ್ನು ಸಾದರ ಪಡಿಸುವುದು ಅದರ ಪ್ರಮುಖ ಉದ್ದೇಶವಾಗಿತ್ತು. ಜೊತೆಗೆ ಅದು ಸಂಘದ ಸದಸ್ಯರುಗಳ ನಡುವೆ, ಅದರಲ್ಲೂ ಮುಖ್ಯವಾಗಿ ದೆಹಲಿ ಕನ್ನಡಿಗರ ನಡುವೆ ಮಾತುಕತೆಯ ಕೊಂಡಿಯಾಗಿ ರೂಪುಗೊಳ್ಳಬೇಕೆಂಬುದೇ ಇನ್ನೊಂದು ಮುಖ್ಯವಾದ ಉದ್ದೇಶವಾಗಿತ್ತು. ಈ ಉದ್ದೇಶಗಳ ಸಫಲತೆಯನ್ನು ಅಭಿಮತ ಈ ಎರಡು ದಶಕಗಳಲ್ಲಿ ಕಂಡಿದೆ ಎಂಬುದರ ಬಗ್ಗೆ ಇನ್ನೊಂದು ಮಾತಿಲ್ಲ.

ಅಭಿಮತವು ಸಾಗಿ ಬಂದ ದಾರಿಯ ಕತೆಯೂ ಅಷ್ಟೇ ರೋಚಕವಾದದ್ದು. ೧೯೮೦ರ ದಶಕದಲ್ಲೇ ಸಂಘಕ್ಕೊಂದು ಮುಖಪತ್ರಿಕೆ ಬೇಕೆಂಬುದರ ಬಗ್ಗೆ ಚರ್ಚೆಗಳು ಪ್ರಾರಂಭವಾಗಿ, ಕೆಲಕಾಲ ಅಂತಹ ಮುಖಪತ್ರಿಕೆಯೊಂದನ್ನು ಹೊರತರಲಾಗಿತ್ತೆಂದು ನಾನು ಕೇಳಿದ್ದೇನೆ. ನಂತರದಲ್ಲಿ ಆ ಪ್ರಯತ್ನ ನೆನೆಗುದಿಗೆ ಬಿದ್ದಿತ್ತು. ನಂತರ ತೊಂಬತ್ತರ ದಶಕದಲ್ಲಿ ಈ ಪ್ರಯತ್ನವನ್ನು ನಾವು ಮಾಡಿದೆವು. ೧೯೯೦ರ ಅಕ್ಟೋಬರ ತಿಂಗಳ ಎರಡನೆಯ ತಾರೀಖಿನಂದು ಅಭಿಮತದ ಮೊದಲ ಆವೃತ್ತಿ ಪ್ರಕಟವಾಯಿತು. ಆಗಿನ್ನೂ ಕಂಪ್ಯೂಟರ್ ಯುಗ ಪ್ರಾರಂಭವಾಗಿರಲಿಲ್ಲ. ಕನ್ನಡ ಅಕ್ಷರಗಳ ಮೊಳೆಗಳನ್ನು ಜೋಡಿಸುವುದರ ಮೂಲಕವೇ ಪತ್ರಿಕೆಯೊಂದನ್ನು ಹೊರತರಬೇಕಾದ ಸಂದರ್ಭವದು. ಈ ದೆಹಲಿಯೆಂಬ ಮಹಾನಗರಿಯಲ್ಲಿ ಆ ಕೆಲಸ ಮಾಡಬಲ್ಲವರು ಒಬ್ಬಿಬ್ಬರು ಮಾತ್ರ. ಕರೋಲಬಾಗ್‌ನ ಅಜಮಲ್‌ಖಾನ್ ರಸ್ತೆಯ ಪುಟ್ಟ ಗಲ್ಲಿಯಲ್ಲಿದ್ದ ಪ್ರಕಾಶನ ಸಂಸ್ಥೆಯೊಂದರಲ್ಲಿ ಅಭಿಮತದ ಮೊದಲ ಆಕಾರ ಮೂಡಿ ಬಂದಿತ್ತು. ಈ ಕುರಿತಾಗಿ ನಾನು ವಿವರವಾದ ಲೇಖನವೊಂದನ್ನು ಅಭಿಮತದ ಹಿಂದಿನ ವರುಷದ ಸಂಚಿಕೆಯಲ್ಲಿ ಬರೆದಿದ್ದೇನೆ. ಹೀಗೆ ಪ್ರಾರಂಭವಾದ ಅಭಿಮತದ ನಂಟು ನನಗೆ ಹದಿನಾಲ್ಕು ವರುಷಗಳ ಕಾಲ ಬಿಡಲಿಲ್ಲ. ಹತ್ತಾರು, ನೂರಾರು ಸ್ನೇಹಿತರು, ಹಿರಿಯರು ಈ ಎಲ್ಲ ವರುಷಗಳಲ್ಲಿ ಅಭಿಮತದ ಬೆನ್ನೆಲುಬಾಗಿ ಕೆಲಸ ಮಾಡಿದ್ದಾರೆ. ಅತ್ಯಂತ ಮೇಧಾವಿಗಳು, ಬರಹಗಾರರು, ಸಂಘಟಕರು ಹಾಗೂ ಹೊಸದಾಗಿ ಬರೆಯಲು ಪ್ರಾರಂಭಿಸಿದವರು–ಈ ಎಲ್ಲರೂ ಅಭಿಮತದ ಪಾಲಕರಾಗಿ ಕೆಲಸ ಮಾಡಿದ್ದಾರೆ. ಅವರೆಲ್ಲರನ್ನೂ ನಾವು ಪ್ರೀತಿಯಿಂದ ಮತ್ತು ವಿನಯದಿಂದ ನೆನಪಿಸಿಕೊಳ್ಳಬೇಕು. ಹೊಸ ಮನಸುಗಳು, ಹೊಸ ವಿಚಾರಗಳು ಹಾಗೂ ಉತ್ಸಾಹ ಯಾವುದೇ ಸಂಘಟನೆಗೆ ಕಾಲಕಾಲಕ್ಕೂ ಅಗತ್ಯವೆಂಬುದು ನನ್ನ ಅನಿಸಿಕೆ. ನಾವು ಹುತ್ತ ಕಟ್ಟಿಕೊಂಡು ಕುಳಿತರೆ ಇದು ಸಾಧ್ಯವಾದೀತೆ? ಅಭಿಮತಕ್ಕೆ ಕಳೆದ ನಾಲ್ಕಾರು ವರುಷಗಳಲ್ಲಿ ಈ ಬಗೆಯ ಶಕ್ತಿ ಸಂಚಯವಾಗುತ್ತಿದೆ. ಎಂಟು ಪುಟಗಳ ಅಭಿಮತ ಈಗ ಮೂವತ್ತಾರು ಪುಟಗಳನ್ನು ಹೊಂದಿ ಹೊರಬರುತ್ತಿದೆ. ವರ್ಣಮಯವಾಗಿ, ಬೆಡಗು–ಬಿನ್ನಾಣಗಳೊಂದಿಗೆ ಹೊರ ಬರುತ್ತಿದೆ. ಇಪ್ಪತ್ತೆರಡರ ಹರೆಯದಲ್ಲಿ ಇನ್ನೇನಾಗಬೇಕು ಹೇಳಿ?

ನಾವು ಅಭಿಮತದ ಇನ್ನೊಂದು ಮಗ್ಗಲನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಈ ಸಂಘದ ಮುಖಪತ್ರಿಕೆಯನ್ನು ಪ್ರತಿ ತಿಂಗಳೂ ಹೊರತರಲು ಸಂಪಾದಕರು ಹಾಗೂ ಸಂಪಾದಕ ಮಂಡಳಿ (ಹಾಗೂ ಸಂಘದ ಸಿಬ್ಬಂದಿ) ಪಡಬೇಕಾದ ಪರಿಶ್ರಮವನ್ನು ನಾವು ಗಮನಿಸಬೇಕು. ಲೇಖನಗಳನ್ನು ಬರೆಯಲು, ಸಂಘದ ವಿವಿಧ ಚಟುವಟಿಕೆಗಳನ್ನು ವರದಿ ಮಾಡಲು ಬರಹಗಾರರ ಅಗತ್ಯವಿದೆ. ಬರವಣಿಗೆಯೆಂದರೆ ಸುಲಭವಾದ ಮಾತೇ? ಮಾತು ಸುಲಭ, ಬರೆಯುವುದು ಕಠಿಣ. ನಮ್ಮ ಮನಸ್ಸಿನ ವಿಚಾರಗಳ ಗೋಜಲುಗಳನ್ನು ಶಬ್ದಗಳಲ್ಲಿ ಪಡಿಮೂಡಿಸುವುದು ಸುಲಭವಾದ ಕೆಲಸವಲ್ಲ. ಅದಕ್ಕೊಂದು ಮನಃಸ್ಥಿತಿ ಬೇಕಾಗುತ್ತದೆ. ಶಬ್ದಗಳೆಂಬ ಸಲಕರಣೆಗಳು ಬೇಕಾಗುತ್ತವೆ. ಎಲ್ಲದಕ್ಕೂ ಮುಖ್ಯವಾಗಿ ಬರೆಯುವ ಪರಿಶ್ರಮ ಬೇಕಾಗುತ್ತದೆ. ಅಭಿಮತಕ್ಕೆ ಈ ಬಗೆಯ ತಂಡದ ಅಗತ್ಯವಿದೆ. ಪತ್ರಿಕೆಯೆಂಬುದು, ಅದನ್ನು ಹೊರತರುವ ಪ್ರಕ್ರಿಯೆಯಲ್ಲಿ ಸಂಘದ ಹಾಗೂ ಅದರ ಸದಸ್ಯರ ಅವಿರತ 'ಕೊಡುತೆಗೆದುಕೊಳ್ಳುವಿಕೆ'ಯಿದೆಯೆಂಬುದನ್ನು ನಾವು ಮರೆಯಬಾರದು.

ಇನ್ನು ಹಣಕಾಸಿನ ಹಾಗೂ ಖರ್ಚು–ವೆಚ್ಚಗಳ ವಿಚಾರಗಳೂ ಸಹ ಅಷ್ಟೇ ಮುಖ್ಯ. ಅಭಿಮತವನ್ನು ಸಂಘದ ಮುಖಪತ್ರಿಕೆಯಾಗಿ ಯಾವುದೇ ಹಣಕಾಸಿನ ಅಡಚಣೆಯಿಲ್ಲದೆ ನಡೆಸಿಕೊಂಡು ಬರಬೇಕೆಂಬುದು ಸರ್ವ ಸದಸ್ಯರ ಆಶಯವಾಗಿದೆ. ಆದರೂ, ಅಭಿಮತ ಸಾಧ್ಯವಾದಷ್ಟು ತನ್ನ ಕಾಲಮೇಲೆ ತಾನೇ ನಿಂತುಕೊಳ್ಳುವಂತಾಗಬೇಕು. ಅದಕ್ಕೆ ಹಲವಾರು ರೂಪುರೇಷೆಗಳು ಹಾಗೂ ಪ್ರಯತ್ನಗಳು ನಡೆಯುತ್ತಿವೆ. ಈ ಪ್ರಯತ್ನಗಳು ಸಫಲವಾಗಿವೆ. ಅಭಿಮತ ಈಗ ಸಂಘದ ಕಟ್ಟಡದಷ್ಟೇ ಇನ್ನೊಂದು ಸಂಘಟನೆಯಾಗಿ ನಿಂತಿದೆ. ಹೀಗಾಗಿ ಅದು ತನ್ನ ಅಸ್ತಿತ್ವವನ್ನು ಕಂಡುಕೊಂಡು ಮುಂದುವರೆಯುವುದರಲ್ಲಿ ಯಾವ ಅನುಮಾನಗಳೂ ಇಲ್ಲ. ಈಗ ಅಭಿಮತಕ್ಕೆ ಅದರದೇ ಆದ ಅಂಗಳವಿದೆ. ಆ ಅಂಗಳದ ತುಂಬ ಹಲವಾರು ಕನಸುಗಳು ತುಂಬಿಕೊಂಡಿವೆ.

■ ಡಾ. ವೆಂಕಟಾಚಲ ಹೆಗಡೆ

## ದೆಹಲಿ ಕರ್ನಾಟಕ ಸಂಘಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಡೆಪ್ಯುಟಿ ಸೆಕ್ರೆಟರಿಗಳಾದ ಶ್ರೀ ಸುಧಾಕರ ಶೆಟ್ಟಿ ಅವರ ಭೇಟಿ



ದೆಹಲಿ ಕರ್ನಾಟಕ ಸಂಘಕ್ಕೆ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಡೆಪ್ಯುಟಿ ಸೆಕ್ರೆಟರಿಗಳಾದ ಶ್ರೀ ಸುಧಾಕರ ಶೆಟ್ಟಿ ಅವರು ದಿನಾಂಕ 26.09.2011ರಂದು ಭೇಟಿ ನೀಡಿದರು. ಸಂಘದ ಉಪಾಧ್ಯಕ್ಷರಾದ ಶ್ರೀ ಬಿ.ಕೆ.ಬಸವರಾಜು, ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ.ನಾಗರಾಜ ಹಾಗೂ ಖಜಾಂಚಿಗಳಾದ ಶ್ರೀ ರಾಮಮೂರ್ತಿಯವರು ಇವರನ್ನು ಸ್ವಾಗತಿಸಿದರು. ಸಂಘದ ಕಟ್ಟಡವನ್ನು ವೀಕ್ಷಿಸಿದ ಶ್ರೀ ಸುಧಾಕರ ರಾವ್ ಅವರಿಗೆ ಸಂಘದಲ್ಲಿ ನಡೆಯಬೇಕಾಗಿರುವ ಕೆಲಸ ಕಾರ್ಯಗಳ ಬಗ್ಗೆ ಕೂಲಂಕುಷವಾಗಿ ವಿವರಿಸಲಾಯಿತು. ಆದಷ್ಟು ಬೇಗನೆ ಕೆಲಸಗಳನ್ನು ಪ್ರಾರಂಭಿಸಿ, ಈಗಾಗಲೇ ನೀಡಿರುವ 50 ಲಕ್ಷ ರೂಗಳ ಬಳಕೆಯ ಪ್ರಮಾಣ ಪತ್ರವನ್ನು ನೀಡಿದ ತತ್‌ಕ್ಷಣವೇ ಸರಕಾರದಿಂದ ಬರಬೇಕಾಗಿರುವ ಉಳಿದ ಹಣ 50 ಲಕ್ಷ ರೂಗಳನ್ನು ಬೇಗನೆ ಕೊಡಿಸಿಕೊಡುವ ಭರವಸೆಯನ್ನು ನೀಡಿದರು. ಸಂಘಕ್ಕೆ ಭೇಟಿ ನೀಡಿದ ಡೆಪ್ಯುಟಿ ಸೆಕ್ರೆಟರಿಗಳಾದ ಶ್ರೀ ಸುಧಾಕರ ಶೆಟ್ಟಿ ಅವರಿಗೆ ಸಂಘದ ಪರವಾಗಿ ಧನ್ಯವಾದಗಳು.

■ ಕೆ.ಆರ್. ರಾಮಮೂರ್ತಿ

ಸಂಘವು ಈಗಾಗಲೇ ತಾವುಗಳು ವೀಕ್ಷಿಸಿದಂತೆ ಒಳ್ಳೆಯ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದೆ. ಕಳೆದ ತಿಂಗಳು ನಡೆದ ಸಾಂಸ್ಕೃತಿಕ ಬಾಗಿನ ಕಾರ್ಯಕ್ರಮವನ್ನು ತಾವು ನೋಡಿ ಆನಂದಿಸಿದ್ದೀರಿ ಎಂದು ತಿಳಿದಿದ್ದೇನೆ. ಈ ಕಾರ್ಯಕ್ರಮವು ಸಂಘದ ಇತಿಹಾಸದಲ್ಲಿ ಅತ್ಯಂತ ಅದ್ಭುತವಾದ ಕಾರ್ಯ ಕ್ರಮವೆನ್ನಬಹುದು. ಏಕೆಂದರೆ ಸಂಘದ ಸಭಾಂಗಣದಲ್ಲಿ ಸುಮಾರು 100ಕ್ಕೂ ಹೆಚ್ಚು ಕಲಾವಿದರು ಒಂದೇ ದಿನ ಪ್ರದರ್ಶನ ನೀಡಿದ್ದು, ದೆಹಲಿ ಕನ್ನಡಿಗರನ್ನು ಕರ್ನಾಟಕದ ಜಾನಪದ ಲೋಕಕ್ಕೆ ಕರೆದೊಯ್ದಿತ್ತು. ಕಾರ್ಯಕ್ರಮವನ್ನು ವೀಕ್ಷಿಸಿದ ಕನ್ನಡಿಗರು ತುಂಬಾ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ.

ಈ ಕಾರ್ಯಕ್ರಮವನ್ನು ಆಯೋಜಿಸಲು ಶ್ರಮಿಸಿದ ಸಂಘದ ಎಲ್ಲ ಪದಾಧಿಕಾರಿಗಳಿಗೆ, ದೆಹಲಿಯ ಕನ್ನಡ ಸಂಘ ಸಂಸ್ಥೆಗಳಿಗೆ ಹಾಗೂ ಈ ಸಂದರ್ಭದಲ್ಲಿ ವಿಶೇಷವಾಗಿ ಇಬ್ಬರನ್ನು ನೆನೆಪಿಸಿಕೊಳ್ಳಲು ಇಷ್ಟಪಡುತ್ತೇನೆ. ಮೊದಲನೆಯದಾಗಿ ಶ್ರೀ ಶೀನಿವಾಸ ಜಿ.ಕಪ್ಪಣ್ಣ ಮತ್ತು ನಮ್ಮವರೇ ಆದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಇವರೆಲ್ಲರಿಗೂ ನನ್ನ ಕೃತಜ್ಞತೆಗಳು.

ಹೀಗೆಯೇ ಇನ್ನು ಮುಂದೆ ಸಹ ಒಳ್ಳೆಯ ಕಾರ್ಯಕ್ರಮಗಳು ನಡೆಯಲಿವೆ. ಈಗಾಗಲೇ ಕನ್ನಡ ಕಲಿಸುವ ಕಾರ್ಯಕ್ರಮ ದಿನಾಂಕ 2.10.2011ರಂದು ಸಂಘ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸಹಯೋಗದೊಂದಿಗೆ ನಡೆದಿದ್ದು ಈ ಕಾರ್ಯಕ್ರಮವನ್ನು ಕರ್ನಾಟಕ ಸರ್ಕಾರದ ಹೆಚ್ಚುವರಿ ವಿಶೇಷ ಪ್ರತಿನಿಧಿ ಶ್ರೀ ಬೈಕೆರೆ ನಾಗೇಶ್ ಅವರು ಉದ್ಘಾಟಿಸಿದ್ದು, ಬ್ಯೂರೋ ಮುಖ್ಯಸ್ಥರು ಮತ್ತು ರಾಜಕೀಯ ವಿದ್ಯಮಾನಗಳ ಸಂಪಾದಕರು, ಡೆಕ್ಕನ್ ಹೆರಾಲ್ಡ್, ನವದೆಹಲಿ ಇವರು ಮುಖ್ಯ ಅತಿಥಿಗಳಾಗಿ ಬಂದಿದ್ದರು. ಜಾನಪದ ವಿದ್ವಾಂಸ ಹಾಗೂ ಸಂಘದ ಮಾಜಿ ಅಧ್ಯಕ್ಷರಾದ ಡಾ.ಪುರುಷೋತ್ತಮ ಬಿಳಿಮಲೆಯವರು ಪ್ರಾಸ್ತವಿಕವಾಗಿ ಕನ್ನಡವನ್ನು ಕಲಿಸುವ ಮೂಲಕ ಕನ್ನಡ ಕಲಿಯುವ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ನವೆಂಬರ್ ತಿಂಗಳಲ್ಲಿ ಕನ್ನಡ ರಾಜ್ಯೋತ್ಸವದ ಅಂಗವಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಮೊದಲಿಗೆ ಸಂಘ ಹಾಗೂ ದ.ರಾ.ಬೇಂದ್ರೆ ಟ್ರಸ್ಟ್ ಧಾರವಾಡ ಜೊತೆಗೂಡಿ ದಿನಾಂಕ 5 ಮತ್ತು 6ರಂದು ಬೇಂದ್ರೆ ಕುರಿತಾದ ವಿಚಾರ ಸಂಕಿರಣ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. 11,12,13ರಂದು ಏಕಾಂಕ ನಾಟಕ ಸ್ಪರ್ಧೆಯನ್ನು ಆಯೋಜಿಸಲಾಗಿದೆ. ಹಾಗೆಯೇ 26 ಮತ್ತು 27ರಂದು ರಾಜ್ಯೋತ್ಸವ ಕಾರ್ಯಕ್ರಮವನ್ನು ಕರ್ನಾಟಕ ಸರ್ಕಾರದ ವಾರ್ತಾ ಇಲಾಖೆಯ ಜತೆಗೂಡಿ ಹಮ್ಮಿಕೊಂಡಿದ್ದು ಸ್ಥಳೀಯರಿಂದ 26ರಂದು ಕಾರ್ಯಕ್ರಮಗಳನ್ನು ಮತ್ತು 27ರಂದು ಕರ್ನಾಟಕ ವಾರ್ತಾ ಇಲಾಖೆಯಿಂದ ಕಾರ್ಯಕ್ರಮಗಳು ನಡೆಯಲಿವೆ. ದೆಹಲಿಯಲ್ಲಿರುವ ನಮ್ಮ ಕನ್ನಡಿಗರ ಮಕ್ಕಳಿಗೆ ವಿದ್ಯಾರ್ಥಿ ವೇತನ ಹಾಗೂ ವಿಶಿಷ್ಟ ಕನ್ನಡಿಗ ಪ್ರಶಸ್ತಿಯನ್ನು ದೆಹಲಿಯ ಹಿರಿಯ ಕನ್ನಡಿಗ ನಿವೃತ್ತ ಐ.ಎ.ಎಸ್. ಅಧಿಕಾರಿಗಳಾದ ಶ್ರೀ ಎನ್.ಜೆ. ಕಾಮತ್ ಅವರಿಗೆ ನೀಡಲಾಗುವುದು. ದೆಹಲಿಯ ಹಿರಿಯ ಕನ್ನಡಿಗರನ್ನು ಗೌರವಿಸುವುದು ಕರ್ನಾಟಕ ಸಂಘದ ಕರ್ತವ್ಯವೆಂದು ಭಾವಿಸಿದ್ದೇನೆ.

'ಅಭಿಮತ' 21 ವರ್ಷಗಳನ್ನು ಪೂರೈಸಿ 22ನೇ ವರ್ಷಕ್ಕೆ ಕಾಲಿಡುತ್ತಿರುವುದು ಸಂಘಕ್ಕೆ ಒಂದು ಒಳ್ಳೆಯ ಮೈಲಿಗಲ್ಲು. ಈ ಸಂದರ್ಭದಲ್ಲಿ ಅಭಿಮತದ ಮೊದಲ ಸಂಪಾದಕರಾದ ಡಾ. ವೆಂಕಟಾಚಲ ಹೆಗಡೆ, ಹಾಗೂ ನಂತರ ಸಂಪಾದಕರಾಗಿ ಅಭಿಮತವನ್ನು ಹೊರತರುವಲ್ಲಿ ಯಶಸ್ವಿಯಾದ ಶ್ರೀಮತಿ ಉಷಾ ಭರತಾದ್ರಿ ಹಾಗೂ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರಿಗೆ, ಈ ಎಲ್ಲ ವರ್ಷಗಳಲ್ಲಿ ಸಂಪಾದಕ ಮಂಡಳಿಯಲ್ಲಿ ಸದಸ್ಯರುಗಳಾಗಿ ಸಹಕರಿಸಿದ ಎಲ್ಲರಿಗೂ ನನ್ನ ಅಭಿನಂದನೆಗಳು.

ತಮ್ಮಲ್ಲಿ ಇನ್ನೊಂದು ಸಂತೋಷದ ವಿಷಯವನ್ನು ಹಂಚಿಕೊಳ್ಳಲು ಇಷ್ಟಪಡುತ್ತೇನೆ. ಕರ್ನಾಟಕ ಸರ್ಕಾರದ ನೂತನ ಮುಖ್ಯಮಂತ್ರಿಗಳಾಗಿ ಅಧಿಕಾರ ಸ್ವೀಕರಿಸಿದ ಶ್ರೀ ಸದಾನಂದ ಗೌಡರನ್ನು ದೆಹಲಿ ಕರ್ನಾಟಕ ಸಂಘದ ಪದಾಧಿಕಾರಿಗಳು ಅಕ್ಟೋಬರ್ 1 ರಂದು ದೆಹಲಿಯ ಕರ್ನಾಟಕ ಭವನದಲ್ಲಿ ಭೇಟಿ ಮಾಡಿ ದೆಹಲಿಯ ಕನ್ನಡಿಗರ ಪರವಾಗಿ ಶುಭಾಶಯಗಳನ್ನು ಕೋರಿದರು. ಮುಖ್ಯಮಂತ್ರಿ ಶ್ರೀ ಸದಾನಂದ ಗೌಡರು ಸಂಘಕ್ಕೆ ತಮ್ಮಿಂದ ಆಗುವ ಎಲ್ಲ ಸಹಾಯವನ್ನು ಮಾಡುವ ಭರವಸೆಯನ್ನು ಕೊಟ್ಟಿದ್ದಾರೆ. ನವೆಂಬರ್‌ನಲ್ಲಿ ಸಂಘ ಆಚರಿಸುವ ರಾಜ್ಯೋತ್ಸವಕ್ಕೆ ಮುಖ್ಯ ಅತಿಥಿಗಳಾಗಿ ಬರಲು ಒಪ್ಪಿಗೆಯನ್ನು ನೀಡಿದ್ದಾರೆ. ಇವರಿಗೆ ಸಂಘದ ಪರವಾಗಿ ಅಭಿನಂದನೆಗಳು.

**■ ಸಿ.ಎಂ.ನಾಗರಾಜ**



ದಸರಾ ಬೊಂಬೆಗಳು-ಚಿತ್ರ : ಚಿನ್ನು ಎಸ್. ಮಠದ




ಕಲಾವಿದ : ಮಾಸ್ಟರ್ ಆನಂದ್ ಶೆಣೈ

# ಪ್ರಬುದ್ಧತೆಯತ್ತ 'ಅಭಿಮತ'

ಕಳೆದ 21 ಸಂಪುಟಗಳ ಮೂಲಕ ಸಾವಿರಾರು ದೆಹಲಿ ಕನ್ನಡಿಗರ ಮನಗೆದ್ದ 'ಅಭಿಮತ' ಈಗ ಒಂದು ಐತಿಹಾಸಿಕ ಘಟ್ಟ ತಲುಪಿದೆ. ಒಂದು ಪತ್ರಿಕೆ ತನ್ನ ಬಾಲ್ಯಾವಸ್ಥೆಯನ್ನು ಕಳೆದು, ಹದಿಹರೆಯವನ್ನು ದಾಟಿ ಪ್ರಬುದ್ಧಾವಸ್ಥೆ ತಲುಪಿದಾಗ ಒಂದು ವಸ್ತುನಿಷ್ಠ ಅವಲೋಕನ ಅನಿವಾರ್ಯ. ಅಭಿಮತದ ಹಿಂದಿನ ಸಾಧನೆಗಳನ್ನು ವಿಮರ್ಶಿಸಿ ಮುಂದಿನ ಹೆಜ್ಜೆಗೆ ಸಜ್ಜುಗೊಳಿಸುವ ಸಾಮರ್ಥ್ಯ ನನಗಿಲ್ಲ. ಆದರೂ ಕರ್ನಾಟಕ ಸಂಘದ ಸಾಂಸ್ಕೃತಿಕ ಯಾತ್ರೆಯಲ್ಲಿ ಅಭಿಮತದ ಪಾತ್ರವನ್ನೂ ತೆರೆದಿಡುವ ವಿಷಯ ಒಂದು ಸಾಮಾಜಿಕ ಹೊಣೆ (ಕರ್ತವ್ಯ?) ಎಂಬುದನ್ನು ಮನಗಂಡು ಈ ಕಿರು ಪ್ರಯತ್ನ ಮಾಡುತ್ತಿರುವೆ.

1990ರ ಗಾಂಧಿ ಜಯಂತಿಯ ಸಂದರ್ಭದಲ್ಲಿ (ಅಕ್ಟೋಬರ್ 2) ಎನ್.ಪಿ. ಭಟ್ಟ, ಗಣೇಶ ಹಾಗೂ ವೆಂಕಟಾಚಲ ಹೆಗಡೆ ಅವರ ಛಲದಿಂದ ಜನಿಸಿದ ಒಂದು ಕಿರು ಪುಟಗಳ, ಕಪ್ಪು ಬಿಳುಪಿನ ಕರಡು ಪ್ರತಿ, ಹಲವಾರು ಕನ್ನಡ ಅಭಿಮಾನಿಗಳ ಸಾಹಸದ (ದುಃಸಾಹಸದ?) ಫಲವಾಗಿ ಇಂದು 24 ಪುಟಗಳ ವರ್ಣರಂಜಿತ, ಸಮಗ್ರ ಪತ್ರಿಕೆಯಾಗಿ ಮೂಡಿ ಬಂದಿದ್ದು, ಒಂದು ಪತ್ರಿಕೆ ಏನೆಲ್ಲ ಸಾಧಿಸಬಹುದು ಎಂಬುದರ ಜೀವಂತ ಉದಾಹರಣೆ.

ನಮ್ಮೆಲ್ಲರ ನೆಚ್ಚಿನ ಅಭಿಮತದಲ್ಲಿ ಏನಿದೆ? ಏನಿಲ್ಲ? ದೆಹಲಿ ಕರ್ನಾಟಕ ಸಂಘದ ಮುಖಪತ್ರಿಕೆಯಾಗಿ, ಅಷ್ಟೇ ಅಲ್ಲದೆ ದೆಹಲಿಯ ಎಲ್ಲ ಕನ್ನಡ ಸಂಘ ಸಂಸ್ಥೆಗಳ ಯೋಗಕ್ಷೇಮ, ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಸಾಕ್ಷ್ಯ ಚಿತ್ರಣ ಇಲ್ಲಿದೆ.

ದೇಶದ ರಾಜಧಾನಿಯಲ್ಲಿ ಹಗಲಿರುಳು ಸೇವೆಗೈದು ರಾಷ್ಟ್ರೀಯ ಮಟ್ಟದಲ್ಲಿ ವಿಜೃಂಭಿಸಿದ ವಿಶಿಷ್ಟ ಕನ್ನಡ ಪ್ರತಿಭೆಗಳನ್ನು (ಬಾಲ, ಯುವ ಪ್ರತಿಭೆ) ಸಹಿತ ಗುರುತಿಸಿ ಪರಿಚಯಿಸುವ ಪ್ರಾಮಾಣಿಕ ಪ್ರಯತ್ನ ಇಲ್ಲಿದೆ.

ಕನ್ನಡ ಪ್ರಪಂಚದಲ್ಲಿ ನಡೆಯುತ್ತಿರುವ ವಾದ, ವಿವಾದ, ಮಂಥನ, ಚಿಂತನೆಗಳಿಗೆ ಮುಖಾಮುಖಿಯಾಗಿ ಸ್ಪಂದಿಸುವ ಗಂಭೀರ ಲೇಖನಗಳು ಇಲ್ಲಿ ಹೊರಹೊಮ್ಮಿವೆ.

ದೆಹಲಿ ವಾಸ ಪೂರೈಸಿ ತುಂಬು ಹೃದಯದಿಂದ ಬೀಳ್ಕೊಡಲ್ಪಟ್ಟ ಕನ್ನಡ ಬಾಂಧವರ ಸವಿನೆನಪನ್ನೂ ನಿತ್ಯ ನೂತನವಾಗಿಡುವ ಶುಭ ಹಾರೈಕೆ ಇಲ್ಲಿ ಚಿಮ್ಮಿವೆ.

ದೆಹಲಿ ಕನ್ನಡಿಗರ ಸಾಹಿತ್ಯ ಪ್ರೇಮವನ್ನು ಚಿಗುರಿಸುವ ಕಥೆ, ಕವನ, ಚುಟುಕು, ಲಲಿತ ಪ್ರಬಂಧ, ಆಟೋಟ ಸ್ಪರ್ಧೆಗಳ ದಾಖಲೆ ಇವೆಲ್ಲವುಗಳ ಸಮಗ್ರ ಸಂಕಲನವೇ ಅಭಿಮತದ ಹಿರಿಮೆ ಹಾಗೂ ಗರಿಮೆ. ಒಟ್ಟಿನಲ್ಲಿ ಹೇಳುವುದಾದರೆ ಅಭಿಮತ ಒಂದು ಸೇತು ಬಂಧನ; ನಮ್ಮೆಲ್ಲರನ್ನು ಒಂದು ಸೂತ್ರದಲ್ಲಿ ಹೆಣೆಯುವ ಇಂಧನ; ನಾಡು-ನುಡಿಯ ಸವಿಗಂಪನ್ನು ಚೆಲ್ಲುವ ಒಂದು ಸ್ಪಂದನ.

ಪ್ರಗತಿಯ ಉತ್ತುಂಗ ಶಿಖರ ಏರಿದಂತೆ ಅದರ ಹೊಣೆ ಇನ್ನೂ ಹೆಚ್ಚುವುದು ಸ್ವಾಭಾವಿಕ. ಅಭಿಮತದ ಗುಣಮಟ್ಟ ಕಾಪಾಡಿಕೊಳ್ಳುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಅಭಿಮತಕ್ಕೆ ಭವಿಷ್ಯದಲ್ಲಿ ಎದುರಿಸಬೇಕಾದ ಆಹ್ವಾನ (ಸವಾಲು?)ಗಳು ಯಾವುವು? ಅವನ್ನು ಹೇಗೆ ಎದುರಿಸಬಹುದು? ಇವು ಯಕ್ಷ ಪ್ರಶ್ನೆ.

ಮೊದಲನೆಯ ಆಹ್ವಾನ : ಮಹಾನಗರದ ದೈನಂದಿನ ಓಡಾಟದಲ್ಲಿ ತತ್ತರಿಸುತ್ತಿರುವ ಕನ್ನಡಿಗನಿಗೆ ಮಾನಸಿಕ ಸಾಂತ್ವನ ಕೊಡಬಲ್ಲ ದಿವ್ಯ ಸಂಜೀವಿನಿ ಅಭಿಮತದ ಪುಟಗಳಲ್ಲಿ ಮೂಡಿ ಬರಬೇಕು. ಅವು ಹಾಸ್ಯ, ಚುಟುಕು, ಪ್ರಹಸನ, ಹನಿಗವನ, ಇಂಗ್ಲೀಷ್ ಗ-ಪದ್ಯ ಇರಬಹುದು (ಹಿಂದಿ ಹಾಸ್ಯಕವಿ ಸಮ್ಮೇಳನದ ಕನ್ನಡ ಅವತಾರ!) ಜನ ಸಾಮಾನ್ಯನಿಗೆ ಗಗನ ಕುಸುಮವಾದ ಯಾಂತ್ರಿಕ-ತಾಂತ್ರಿಕ-ಮಾಂತ್ರಿಕ, ಕಾಲ್ಪನಿಕ ಕಟ್ಟುಕಥೆಯಾಗಿರಬಹುದು. ಪಾರಂಪರಿಕ ಚೌಕಟ್ಟಿನಿಂದ ಸಿಡಿದು ಬಂದ (Out of Box) ಸೃಜನಶೀಲ ಕಲಾ ಪ್ರಯೋಗಗಳ ಉಲ್ಲೇಖ ಇರಬಹುದು. ಕೇವಲ ಕರ್ನಾಟಕಕ್ಕೆ ಸೀಮಿತವಾಗದೇ ವಿಶ್ವದ ಯಾವುದೇ ಮೂಲೆಗಳಿಂದ ಉಗಮಿಸಿದ ಆಚಾರ-ವಿಚಾರಗಳಿಗೆ ಪ್ರಚಾರ ಕೊಡುವ ದಿಟ್ಟ ಪ್ರಯತ್ನ ಅಭಿಮತದ ಬೀಜಮಂತ್ರವಾಗಬೇಕು. ಇಂತಹ ಸಾಹಸ ವಿಶ್ವಮಾನವತೆಯನ್ನು ಸಾರಿದ (ಕವಿಪುಂಗವರ?) ಹರಿಕಾರರ ಕನ್ನಡ ನಾಡಿನ ಚಿನ್ನದ ನುಡಿಯಿಂದ ಮಾತ್ರ ಸಾಧ್ಯ.

ಎರಡನೆಯ ಆಹ್ವಾನ : ಅಭಿಮತವನ್ನು "ಮೆಟ್ರೋ" ಸಂಸ್ಕೃತಿಯಲ್ಲಿ ಬೆಳೆಯುತ್ತಿರುವ ನಮ್ಮ ಮುಂದಿನ ಪೀಳಿಗೆಗೆ ಹೇಗೆ ಪರಿಚಯಿಸುವುದು? ಈ ನಿಟ್ಟಿನಲ್ಲಿ ಮಕ್ಕಳ ಆಧುನಿಕ ವೃತ್ತಿಪರ ಬೇಡಿಕೆಗಳನ್ನು ಪೂರೈಸಬಲ್ಲ ಒಂದು e-journal (e-Abhimata) ಸಂಪುಟವನ್ನು ಹೊರತರಬಹುದೇ? ಇದರಲ್ಲಿ ವೃತ್ತಿಪರ ಮಾರ್ಗದರ್ಶನ (Career Counseling), Confidence building, Personality development, leadership, communication skills, values development ಇತ್ಯಾದಿ ವಿಷಯಗಳ ಬಗ್ಗೆ ಕನ್ನಡ ತಜ್ಞರಿಂದ ಮಾರ್ಗದರ್ಶನ ಲಭಿಸಬಹುದು.

ಮುಂದಿನ ಪೀಳಿಗೆಗೆ ಕನ್ನಡ ಭಾಷೆ, ಸಂಸ್ಕೃತಿಯ ಕುರಿತು ಪರಿಚಯಿಸುವ ಜವಾಬ್ದಾರಿ ದೆಹಲಿ ಕರ್ನಾಟಕ ಸಂಘದ ಮೇಲಿದೆ. ಈ ಬಗ್ಗೆ ಈ ಸಿದ್ಧತೆ ನಡೆದಿದೆ. ಈ ಕಾರ್ಯಕ್ರಮಗಳಲ್ಲಿ, ತರಬೇತಿ ಶಿಬಿರಗಳಲ್ಲಿ ಅಭಿಮತವನ್ನು ಪೂರಕ ಪಠ್ಯಕ್ರಮವಾಗಿ ಬಳಸಿಕೊಳ್ಳಬಹುದು. ಈ ನಿಟ್ಟಿನಲ್ಲಿ ಕನ್ನಡ ಸಂಘಟನೆ ಹಾಗೂ ವಿಶ್ವವಿದ್ಯಾಲಯಗಳ ಜೊತೆಗೆ ಸಹಯೋಜನೆ ಅನಿವಾರ್ಯ. ಕನ್ನಡ ಹಾಗೂ ಅಭಿಮತವನ್ನೇ ಉಸಿರಾಡುತ್ತಿರುವ ಉಷಾ ಭರತಾದ್ರಿಯವರ ಸಂಪಾದಕತ್ವದಲ್ಲಿ ಹಾಗೂ ಸಮರ್ಥ ಸಂಪಾದಕ ಮಂಡಳಿಯ ಸಹಯೋಗದಲ್ಲಿ ಅಭಿಮತದ ಭವಿಷ್ಯ ಭದ್ರವಾದ ತಳಹದಿಯ ಮೇಲಿದ್ದರೂ ಸಹ ಪತ್ರಿಕೆಯ ಸರ್ವಾಂಗೀಣ ಪ್ರಗತಿಗೆ ಬೇಕಾದ ಸಾಹಿತ್ಯ-ಸಾಮಗ್ರಿಗಳನ್ನು ಸೃಷ್ಟಿಸುವ ನೈತಿಕ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ.

**"ಅಭಿಮತ ಅವಿರತ ಬೆಳೆಸೋಣ**
**ಅನಂತ ವಿಶ್ವವ ಮೆರೆಸೋಣ"**

■ ಬಿ.ವಿ. ಅಡ್ಕೋಳಿ


## ದೆಹಲಿ ಕರ್ನಾಟಕ ಸಂಘ
ಸೆಕ್ಟರ್-12, ಆರ್.ಕೆ. ಪುರಂ,ನವದೆಹಲಿ-110022

GILI GILI MAGIC™

**ಅದ್ಭುತ ಮ್ಯಾಜಿಕ್ ಪ್ರದರ್ಶನ**

ಪ್ರಖ್ಯಾತ ಮ್ಯಾಜಿಕ್ ಕಲಾವಿದರುಗಳಾದ




ಪ್ರೊ. ಶಂಕರ್ ಮತ್ತು ಜೂನಿಯರ್ ಶಂಕರ್ ಉಡುಪಿ ಇವರಿಂದ

ದಿನಾಂಕ : 22 ಅಕ್ಟೋಬರ್ 2011
ಸಮಯ: ಸಂಜೆ 5ರಿಂದ
ಸ್ಥಳ : ಸಂಘದ ಸಭಾಂಗಣ

**ಬನ್ನಿ, ನಿಮ್ಮವರನ್ನು ಕರೆದು ತನ್ನಿ**

ಡಾ.ವೆಂಕಟಾಚಲ ಹೆಗಡೆ
ಅಧ್ಯಕ್ಷರು

ಸಿ.ಎಂ.ನಾಗರಾಜ
ಪ್ರಧಾನ ಕಾರ್ಯದರ್ಶಿ

# ಜ್ಞಾನಪೀಠ ಪುರಸ್ಕೃತ ಚಂದ್ರಶೇಖರ ಕಂಬಾರ



ಡಾ. ಚಂದ್ರಶೇಖರ ಕಂಬಾರ (ಜನನ-2 ಜನವರಿ 1937)ರಂದು ಬೆಳಗಾವಿ ಜಿಲ್ಲೆ ಘೋಡಿಗೇರಿ ಗ್ರಾಮದ ಬಸವಣ್ಣೆಪ್ಪ ಕಂಬಾರ ಹಾಗೂ ಚೆನ್ನಮ್ಮ ದಂಪತಿಗಳ ಪುತ್ರನಾಗಿ ಜನಿಸಿದರು,ಬೆಳಗಾವಿ ಲಿಂಗರಾಜ ಕಾಲೇಜಿನಲ್ಲಿ ಬಿಎ, 1962ರಲ್ಲಿ ಕರ್ನಾಟಕ ವಿವಿಯಿಂದ ಎಂ.ಎ ಪದವಿ ಪಡೆದಿರುವ ಅವರು, ಬೆಂಗಳೂರು ವಿವಿ ಅಧ್ಯಾಪಕರು, ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷ, ನವದೆಹಲಿಯ ರಾಷ್ಟ್ರೀಯ ನಾಟಕ ಶಾಲೆಯ ನಿರ್ದೇಶಕ, ಹಂಪಿ ಕನ್ನಡ ವಿವಿಯ ಮೊದಲ ಕುಲಪತಿಯಾಗಿ ಡಾ. ಚಂದ್ರಶೇಖರ ಕಂಬಾರ ಕಾರ್ಯನಿರ್ವಹಿಸಿದ್ದಾರೆ.1968–69 ಚಿಕಾಗೋ ವಿಶ್ವವಿದ್ಯಾನಿಯದಲ್ಲಿ ಕನ್ನಡ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಚಿಕಾಗೋ, ನ್ಯೂಯಾರ್ಕ್, ಬರ್ಲಿನ್, ಮಾಸ್ಕೋ, ಜಪಾನ್ ಮುಂತಾದೆಡೆಗಳ ಕೆಲವು ವಿ.ವಿ.ಗಳಲ್ಲಿ ಜಾನಪದ ಮತ್ತು ರಂಗಭೂಮಿ ಕುರಿತ ಉಪನ್ಯಾಸಗಳನ್ನು ನೀಡಿರುವ ಹೆಗ್ಗಳಿಕೆ ಇವರದು.

ಜಾನಪದ ಸೊಗಡನ್ನು ತಮ್ಮ ಬರವಣಿಗೆಯಲ್ಲಿ ಮೈದಾಳಿಸಿಕೊಂಡು ಬಂದಿರುವ ಚಂದ್ರಶೇಖರ ಕಂಬಾರರು ಹಲವು ಪ್ರತಿಭೆಗಳ ಸಂಗಮ. ಕವಿ, ನಾಟಕಕಾರ, ಸಂಗೀತ ನಿರ್ದೇಶಕ, ಚಲನಚಿತ್ರ ನಿರ್ದೇಶಕ, ಅಧ್ಯಾಪಕ, ಜಾನಪದ ತಜ್ಞ, ಆಡಳಿತಗಾರ ಇತ್ಯಾದಿ. ಮುಖ್ಯವಾಗಿ ಕವಿ–ನಾಟಕಕಾರರಾಗಿ ಕಂಬಾರ ಜನಪ್ರಿಯರು. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಹಲವು ವರ್ಷಗಳ ಉಪನ್ಯಾಸಕ ವೃತ್ತಿಯಿಂದ ಕನ್ನಡ ವಿಶ್ವವಿದ್ಯಾಲಯ ಹಂಪಿಯ ಕುಲಪತಿಗಳಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಈಗ ಬೆಂಗಳೂರಿನ ಬನಶಂಕರಿಯಲ್ಲಿ ನಿವೃತ್ತ ಜೀವನ ನಡೆಸುತ್ತಿದ್ದಾರೆ. ಈ ನಡುವೆ ದೆಹಲಿಯ ರಾಷ್ಟ್ರೀಯ ನಾಟಕ ಶಾಲೆಯ ನಿರ್ದೇಶಕರಾಗಿಯೂ ಮೂರು ವರ್ಷ ಕಾರ್ಯ ನಿರ್ವಹಿಸಿದ್ದಾರೆ. ಅಲ್ಲದೆ ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ತಮ್ಮ ಊರಿನ ವಾತಾವರಣದಲ್ಲಿನ ಜಾನಪದ ಹಾಡು, ಕುಣಿತ, ನಾಟಕಗಳ ಬಗ್ಗೆ ವಿಶೇಷ ಕಾಳಜಿ ವಹಿಸಿ ಅವುಗಳ ಸಂಗ್ರಹ, ಬರವಣಿಗೆಯನ್ನು ರೂಢಿಸಿಕೊಂಡರು. ಉತ್ತರ ಕರ್ನಾಟಕದ ಅದರಲ್ಲೂ ಬೆಳಗಾವಿ, ಧಾರವಾಡದ ಗಂಡುಭಾಷೆಯನ್ನು ಕನ್ನಡ ಸಾಹಿತ್ಯಕ್ಕೆ ಹೊತ್ತು ತಂದರು. ಧಾರವಾಡದ ವರಕವಿ ಡಾ. ದ. ರಾ. ಬೇಂದ್ರೆ ಅವರ ನಂತರ ಭಾಷೆಯನ್ನು ಪರಿಣಾಮಕಾರಿಯಾಗಿ ದುಡಿಸಿಕೊಂಡವರಲ್ಲಿ ಕಂಬಾರರು ಒಬ್ಬರು.

ಕಂಬಾರರು ತಾವೇ ಬರೆದ ಕಾದಂಬರಿಗಳನ್ನು ಚಲನಚಿತ್ರಗಳಾಗಿಸಿದರು. ಕರಿಮಾಯಿ, ಸಂಗೀತಾ, ಕಾಡುಕುದುರೆ ಇವುಗಳಲ್ಲಿ ಪ್ರಮುಖವಾದುವು. ಕಂಬಾರರು ತಮ್ಮ ಚಿತ್ರಗಳಿಗೆ ತಾವೇ ಸಂಗೀತ ನೀಡಿದ್ದಾರೆ. ಕಾಡುಕುದುರೆಯ ಹಿನ್ನಲೆ ಸಂಗೀತದ “ಕಾಡು ಕುದುರೆ ಓಡಿಬಂದಿತ್ತಾ..” ಹಾಡಿಗೆ ಶಿವಮೊಗ್ಗ ಸುಬ್ಬಣ್ಣ ಅವರಿಗೆ ರಾಷ್ಟ್ರಪತಿಗಳ ಫಲಕ ಕೂಡ ಸಿಕ್ಕಿತು. ‘ಜೀಕೆ ಮಾಸ್ತರ ಪ್ರಣಯ ಪ್ರಸಂಗ’ ಕಾದಂಬರಿಯನ್ನು ಕಿರುತೆರೆಗೂ ಅಳವಡಿಸಿದ್ದಾರೆ. ಹತ್ತಾರು ಸಾಕ್ಷ್ಯಚಿತ್ರಗಳನ್ನೂ ನಿರ್ಮಿಸಿರುವ ಕಂಬಾರರು ಉತ್ತಮ ನಾಟಕಕಾರರು. ಜೊತೆಗೆ ಜಾನಪದ ಶೈಲಿಯ ಹಾಡುಗಳಿಗೆ ಜನಪ್ರಿಯರು. ತಾವೇ ಸ್ವತಃ ಹಾಡುಗರೂ ಸಹಾ.

ಆಳ್ವಾಸ್ ನುಡಿಸಿರಿ–2006ರ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಇವರು 2004 ರಿಂದ 2010ರವರೆಗೆ ವಿಧಾನಪರಿಷತ್ ಸದಸ್ಯರಾಗಿದ್ದರು.

## ಈವರೆಗಿನ ಹೇಳತೇನ ಕೇಳ. . .

**ಕಾವ್ಯ :** ಮುಗುಳು, ಹೇಳತೇನ ಕೇಳ, ತಕರಾರಿನವರು, ಸಾವಿರದ ನೆರಳು, ಚಕೋರಿ, ಆಯ್ದ ಕವನಗಳು, ಬೆಳ್ಳಿಮೀನು, ಈವರೆಗಿನ ಹೇಳತೇನ ಕೇಳ (ಸಮಗ್ರ–1994), ಅಕ್ಕಕ್ಕು ಹಾಡುಗಳೇ, ಎಲ್ಲಿದೆ ಶಿವಾಪುರ?

**ನಾಟಕ :** ಬೆಂಬತ್ತಿದ ಕಣ್ಣು, ನಾರ್ಸಿಸಸ್, ಋಷ್ಯಶೃಂಗ, ಜೋಕುಮಾರಸ್ವಾಮಿ, ಚಾಳೇಶ, ಸಂಗ್ಯಾಬಾಳ್ಯಾ, ಅನಬೇಕೋ ನಾಡೊಳಗ, ಕಿಟ್ಟಿಯ ಕಥೆ, ಖರೋಖರ, ಮತಾಂತರ, ಹರಕೆಯ ಕುರಿ, ಸಾಂಬಶಿವ ಪ್ರಹಸನ, ಸಿರಿ ಸಂಪಿಗೆ, ಹುಲಿಯ ನೆರಳು, ಬೆಪ್ಪು ತಕ್ಕಡಿ ಬೋಳೇಶಂಕರ, ಪುಷ್ಪರಾಶಿ, ತುಕ್ರನ ಕನಸು, ಮಹಾಮಾಯಿ, ಶಿವರಾತ್ರಿ.

**ಕಾದಂಬರಿ :** ಅಣ್ಣತಂಗಿ, ಕರಿಮಾಯಿ, ಜಿ.ಕೆ. ಮಾಸ್ತರರಪ್ರಣಯ ಪ್ರಸಂಗ, ಸಿಂಗಾರೆವ್ವ ಮತ್ತು ಅರಮನೆ, ಶಿಖರ ಸೂರ್ಯ.

**ಸಂಶೋಧನೆ :** ಸಂಗ್ಯಾ ಬಾಳ್ಯಾ, ಬಣ್ಣೀಸಿ ಹಾಡವ್ವ ನನ್ನ ಬಳಗ, ಬಯಲಾಟ, ಮಾತಾಡೋ ಲಿಂಗವೇ, ನಮ್ಮ ಜಾನಪದ, ಬಂದಿದೆ ನನ್ನ ಜಡೆಯೊಳಗೆ, ಕನ್ನಡ ನಾಟಕ ಸಂಪುಟ, ಕನ್ನಡ ಜಾನಪದ ವಿಶ್ವಕೋಶ, ಲಕ್ಷಾಪತಿ ರಾಜನ ಕತೆ, ಬೇಡರ ಹುಡುಗ ಮತ್ತು ಗಿಳಿ, ಕಾಸಿಗೊಂದು ಸೇರು, ನೆಲದ ಮರೆಯ ನಿದಾನ, ಬೃಹದ್ದೇಶಿ ಚಿಂತನೆ,

**ಪಿಎಚ್‌ಡಿ ಮಹಾಪ್ರಬಂಧ :** ಉತ್ತರ ಕರ್ನಾಟಕದ ಜಾನಪದ ರಂಗಭೂಮಿ.

**ಪ್ರಶಸ್ತಿ–ಪುರಸ್ಕಾರ :** ರಾಜ್ಯ ನಾಟಕ ಅಕಾಡೆಮಿ ಬಹುಮಾನಗಳು, ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನಗಳು, ಕೇರಳದ ಆಶಾನ್ ಪ್ರಶಸ್ತಿ, ಕಮಲಾದೇವಿ ಚಟ್ಟೋಪಾಧ್ಯಾಯ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಮಾಸ್ತಿ ಪ್ರಶಸ್ತಿ, ಭಾರತ ಸರ್ಕಾರದ ಪದ್ಮಶ್ರೀ ಪ್ರಶಸ್ತಿ, ರಾಜ್ಯ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಟ್ಯಾಗೋರ್ ಪ್ರಶಸ್ತಿ, ಕಬೀರ್ ಸಮ್ಮಾನ್ ಪ್ರಶಸ್ತಿ ಇತ್ಯಾದಿ.

*ಇದೀಗ ಎಂಟನೆಯ ಜ್ಞಾನಪೀಠ ಪ್ರಶಸ್ತಿಯನ್ನು ಪಡೆಯುವುದರ ಮೂಲಕ ಕನ್ನಡ ಭಾಷೆಯ ಹಿರಿಮೆಯನ್ನು ಉತ್ತುಂಗ ಶಿಖರಕ್ಕೇರಿಸಿದ ಕಂಬಾರರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿಮಾನಪೂರಿತ ಅಭಿನಂದನೆಗಳು.*




# ಅತ್ತ ಅಲ್ಲಮ ಇತ್ತ ಲೋರ್ಕಾ

ಕಂಬಾರರ ಮೂಲಕ ಕನ್ನಡಕ್ಕೆ ಎಂಟನೆಯ ಜ್ಞಾನಪೀಠ ಪ್ರಶಸ್ತಿ ದೊರಕಿದೆ. ತಮ್ಮ ವಿಪುಲ ಹಾಗೂ ವೈವಿಧ್ಯಮಯ ಸಾಹಿತ್ಯ ಸೃಷ್ಟಿಗಾಗಿ ಈ ಹಿಂದೆ ಹಲವಾರು ರಾಜ್ಯ ಮತ್ತು ರಾಷ್ಟ್ರಮಟ್ಟದ ಪ್ರಮುಖ ಪ್ರಶಸ್ತಿಗಳನ್ನು ಈಗಾಗಲೇ ಗಳಿಸಿಕೊಂಡಿರುವ ಕಂಬಾರರ ಸಾಹಿತ್ಯ ಜೀವನಕ್ಕೆ ಜ್ಞಾನಪೀಠ ಪ್ರಶಸ್ತಿ ಶಿಖರಪ್ರಾಯವಾಗಿದೆ. ಹಿಂದೆ ಕನ್ನಡಕ್ಕೆ ಏಳು ಜ್ಞಾನಪೀಠ ಪ್ರಶಸ್ತಿಗಳು ಸಿಕ್ಕಿರುವುದೂ, ಜ್ಞಾನಪೀಠ ಪ್ರಶಸ್ತಿಗಳ ದೃಷ್ಟಿಯಲ್ಲಿ ಕನ್ನಡವು ಇತರ ಎಲ್ಲ ಭಾರತೀಯ ಭಾಷೆಗಳನ್ನು ಹಿಂದೆ ಹಾಕಿರುವುದೂ ಕನ್ನಡಿಗರಾದ ನಮ್ಮೆಲ್ಲರಿಗೆ ಹೆಮ್ಮೆಯ ವಿಷಯ, ನಿಜ. ಇಷ್ಟಾದರೂ ಪು.ತಿ.ನ, ಅಡಿಗ, ಕೆ.ಎಸ್. ನರಸಿಂಹಸ್ವಾಮಿ, ತೇಜಸ್ವಿ, ಲಂಕೇಶ್ ಅವರಂತಹ ಅನರ್ಘ್ಯ ಬರಹಗಾರರಿಗೆ ಭಾರತದ ಸರ್ವೋಚ್ಚ ಸಾಹಿತ್ಯ ಪ್ರಶಸ್ತಿ ಸಿಗಲಿಲ್ಲವಲ್ಲ ಎಂಬ ಕೊರಗು ನಮಗೆ ಇದ್ದೇ ಇದೆ. ಕಂಬಾರರಿಗೆ ಹೀಗಾಗಲಿಲ್ಲವಲ್ಲ ಎಂಬುದು ನಮಗೆ ಸಂತಸದ, ಸಂಭ್ರಮದ ವಿಷಯ. ಜ್ಞಾನಪೀಠ ಸಮಿತಿಯವರು ಕಂಬಾರರಂತಹ ಪ್ರತಿಭಾವಂತರಿಗೆ ಈ ಬಾರಿ ಪ್ರಶಸ್ತಿ ಪ್ರದಾನಮಾಡಿ ತಮ್ಮ ಘನತೆಯನ್ನು ಹೆಚ್ಚಿಸಿಕೊಂಡಿದ್ದಾರೆ. ಯಾಕೆಂದರೆ ಲೇಖಕ ಪ್ರಶಸ್ತಿಗಿಂತ ದೊಡ್ಡವನು ಎಂಬುದು ಕಂಬಾರರ ವಿಷಯದಲ್ಲಿ ಸತ್ಯಸ್ಯಸತ್ಯ.

ಜ್ಞಾನಪೀಠ ಪ್ರಶಸ್ತಿ ಸಮಿತಿಯವರು ಇನ್ನೊಂದು ಪ್ರಮುಖ ಕಾರಣದಿಂದಲೂ ಅಭಿನಂದನಾರ್ಹರು. ಇಂದು ಅಂತಾರಾಷ್ಟ್ರೀಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಭಾರತದ ಇಂಗ್ಲಿಷ್ ಬರಹಗಾರರಿಗೆ ಇಂಗ್ಲಿಷೇತರ ಬರಹಗಾರರಿಗಿಂತ ಬಹಳ ಹೆಚ್ಚಿನ ಪ್ರಚಾರ ದೊರಕುತ್ತಿದೆ. ಇಂಗ್ಲಿಷ್ ಬರಹಗಾರರಲ್ಲೂ ಪ್ರತಿಭಾವಂತರಿರುವುದು ನಿಜ. ಆದರೆ, ಭಾರತೀಯ ಭಾಷಾ ಲೇಖಕರಿಗೆ ಹೋಲಿಸಿದಾಗ ಇಂಗ್ಲಿಷ್ ಬರಹಗಾರರ ಸಿದ್ಧಿಗಿಂತಲೂ ಪ್ರಸಿದ್ಧಿಯೇ ಹೆಚ್ಚು. ಉದಾಹರಣೆಗೆ ಗುಣ ಮತ್ತು ಗಾತ್ರದಲ್ಲಿ ಅಭಿವ್ಯಕ್ತಿಯ ತೀವ್ರತೆ ಮತ್ತು ವೈವಿಧ್ಯಮಯತೆಯಲ್ಲಿ ಕಂಬಾರರಿಗೆ ಹೋಲಿಸಬಹುದಾದ ಭಾರತೀಯ ಇಂಗ್ಲಿಷ್ ಬರಹಗಾರ ಯಾರು? ಗೊತ್ತಿಲ್ಲ. ಈ ಸಂದರ್ಭದಲ್ಲಿ ಜ್ಞಾನ ಪೀಠದವರು ತಮ್ಮ ಪ್ರಶಸ್ತಿಗಳನ್ನು ಭಾರತೀಯ ಭಾಷಾ ಲೇಖಕರಿಗಾಗಿ ಮೀಸಲಿಟ್ಟಿರುವುದು ಶ್ಲಾಘನೀಯ.

ಕಂಬಾರರಿಗೆ ಮೊದಲೇ ಕನ್ನಡ ಸಾಹಿತ್ಯದಲ್ಲಿ ಕುವೆಂಪು, ಬೇಂದ್ರೆ, ಮಾಸ್ತಿ, ಪುತಿನ, ಕಾರಂತ ಮತ್ತಿತರ ಮಹಾನ್ ಪ್ರತಿಭೆಗಳಿದ್ದವು. ಅವರೆಲ್ಲರೂ ನವೋದಯದ ಆದರ್ಶಗಳ ಹಿನ್ನೆಲೆಯಲ್ಲಿ ತಮ್ಮ ವಿಶಿಷ್ಟ ಮಾರ್ಗಗಳನ್ನು ನಿರ್ಮಿಸಿಕೊಂಡಿದ್ದರು. ಕುವೆಂಪು ಅವರ ಭೂಮಪ್ರತಿಭೆ, ಬೇಂದ್ರೆಯವರ ಭಾಷಿಕ ಚಮತ್ಕಾರ, ಮಾಸ್ತಿಯವರ ಕಥನಕೌಶಲ, ಪುತಿನರವರ ತನ್ಮಯೀಭಾವ, ಕಾರಂತರ ಸಾಮಾಜಿಕ ದರ್ಶನಗಳು ಆ ಸಂದರ್ಭದಲ್ಲಿ ಹೊಯ್‌ಕಯ್ಯಾಗಿದ್ದವು. ಈ ಎಲ್ಲ ಅಂಶಗಳೂ ಮೈವೆತ್ತಂತಿದ್ದ ಅಡಿಗರು, ಅನಂತರ ಕೆ.ಎಸ್.ನ ಅವರು ಸ್ವಾತಂತ್ರ್ಯೋತ್ತರ ತಥ್ಯಗಳ ಹಿನ್ನೆಲೆಯಲ್ಲಿ ತಮ್ಮ ಅಭಿವ್ಯಕ್ತಿ ಕ್ರಮದಲ್ಲಿ ತಳಮಟ್ಟ ಮಾರ್ಪಾಡುಗಳನ್ನು ತಂದರು. ಕನ್ನಡದ ನವ್ಯತೆಯ ಮಾರ್ಗ ನಿರ್ಮಾಣವಾಯಿತು. ಅಡಿಗರ ಕಿರಿಯ ಸಮಕಾಲೀನರಾಗಿ ಬರೆಯಲಾರಂಭಿಸಿದ ಕಂಬಾರರು ಇವೆರಡು ಮಾರ್ಗಗಳಿಗಿಂತ ಭಿನ್ನವಾದ ತಮ್ಮ ಅಭಿವ್ಯಕ್ತಿ ಕ್ರಮವನ್ನು ರೂಪಿಸಿಕೊಂಡರು. ಅಂದರೆ ನವ್ಯದ ಉಚ್ಛ್ರಾಯ ಘಟ್ಟದಲ್ಲೇ ನವ್ಯೋತ್ತರವೆನ್ನಬಹುದಾದ ಮಾರ್ಗದ ಮೊದಲಿಗರಾದರು. 'ಇತ್ತುಗಳ ಧ್ವಜವ ಹಿಡಿದೆತ್ತಿ ನಿಲ್ಲಿಸುವ' ನವೋದಯದ ಆದರ್ಶಪ್ರಿಯತೆಯನ್ನು, ಅಸಂದಿಗ್ಧ ದೃಷ್ಟಿಯನ್ನು ಅಡಿಗರ ನವ್ಯಕಾವ್ಯ ಅಗ್ನಿಪರೀಕ್ಷೆಗೆ ಒಡ್ಡಿತಾದರೂ ಮುಂದೆ ಅದೇ ಅಡಿಗರು ಪರಂಪರೆಯ ಮಹಾಪ್ರವಾಹಕ್ಕೆ ವಾಪಸಾದರು. ಅಡಿಗರಿಂದ ಪ್ರಭಾವಿತರಾದ ನವ್ಯರು–ಉದಾಹರಣೆಗೆ ಲಂಕೇಶ್, ತೇಜಸ್ವಿ, ರಾಮಾನುಜನ್ ಮುಂತಾದವರು–ಪರಂಪರೆಗೆ ಶರಣಾಗದೆ ಸದ್ಯದ ವ್ಯಂಗ್ಯಗಳನ್ನು ಶಕ್ತವಾಗಿ ಬಿಂಬಿಸುತ್ತ ತಮ್ಮ ತಮ್ಮ ವಿಶಿಷ್ಟ ವ್ಯಕ್ತಿಭಾಷೆಗಳನ್ನು ಕಟ್ಟಿಕೊಂಡರು.

ಕಂಬಾರರ ಸೃಷ್ಟಿಗೆ ಮೊದಲಾದ ಸಂದರ್ಭ ಈ ಎಲ್ಲರ ಸಂದರ್ಭಗಳಿಗಿಂತ ಭಿನ್ನವಾದ್ದರಿಂದ ಅವರು ತುಳಿದ ದಾರಿಯೂ ಭಿನ್ನವಾಯಿತು. ಅವರ ಮೊದಲ ಘಟ್ಟದ ಮುಖ್ಯ ಕೃತಿಯಾದ 'ಹೇಳತೇನ ಕೇಳ' ಎಂಬ ಹೆಸರೇ ಅವರ ಭಿನ್ನತೆಯನ್ನು ಸೂಚಿಸುತ್ತದೆ. ಇಪ್ಪತ್ತನೆ ಶತಮಾನದ ಹಿರಿಯ ಕವಿಗಳೆಲ್ಲರಿಗೂ–ಬೇಂದ್ರೆಯವರನ್ನು ಹೊರತುಪಡಿಸಿ–ಪರಂಪರೆಯ ಕಲ್ಪನೆ ಲಿಖಿತಮೂಲ. ಆದರೆ, ಕಂಬಾರರ ಪರಂಪರೆ ಮೌಖಿಕ. ಇಲ್ಲಿ ಕವಿತೆ ಒಂದು ಚಿಂತನೆಯ, ಭಾವನೆಯ ಅಭಿವ್ಯಕ್ತಿಯಲ್ಲ. ಅದೊಂದು ನೇರ ಸಂವಹನ, ಒಂದು 'ಆಟ'. ಈ ಅರ್ಥದಲ್ಲಿ ಆಟದ ಭಾಷೆ ಕಂಬಾರರ ಕಾವ್ಯ ನಾಟಕಗಳೆರಡರ ವೈಶಿಷ್ಟ್ಯಕ್ಕೆ ಕಾರಣವಾಗಿದೆ. ಅವರು ಹಾಡು–ಕವಿತೆ ಬರೆಯಲಿ, ನಾಟಕ ಬರೆಯಲಿ, ಕತೆ–ಕಾದಂಬರಿ ಬರೆಯಲಿ, ಸಿನಿಮಾ ಮಾಡಲಿ ಅವೆಲ್ಲವುಗಳಿಗೂ ಸಾಮಾನ್ಯ ಅಂಶವೆಂದರೆ ಶ್ರವ್ಯ ಮತ್ತು ದೃಶ್ಯ ಕಾವ್ಯ ಪದ್ಧತಿಗಳ ಐಕ್ಯ. ಅಕ್ಷರ ಪ್ರಾಧಾನ್ಯ ವಿಜೃಂಭಿಸುತ್ತಿದ್ದ ಕಾಲದಲ್ಲಿ ಕಂಬಾರರು ವಾಕ್ ಪ್ರಧಾನ ಕಾವ್ಯರಚನೆಯ ಮೂಲಕ ತಮ್ಮತನದ ಛಾಪನ್ನು ಮೂಡಿಸಿದರು. ನವ್ಯಕಾವ್ಯವೂ ಆಡುಮಾತಿನ ಹತ್ತಿರ ಸುಳಿದಾಡ ತೊಡಗಿದ್ದು ನಿಜ. ಆದರೆ, ಕಂಬಾರರ ವಾಕ್ಕಿನ ಮಾದರಿ ನಾಗರಿಕ ಸಂಭಾಷಣೆಯ ಮಾದರಿಯದಲ್ಲ. ಅವರದ್ದು ಕೇವಲ ಆಡುಮಾತಲ್ಲ, ಅದು ಹಾಡು–ಮಾತು, ಕುಣಿತ–ಮಾತು, ಕನಸು–ಮಾತು,



ಸಿಡಿತ–ಮಾತು, ಕರಗು–ಮಾತು, ಮಾನವಾತೀತ ಶಕ್ತಿಗಳ ಜತೆಗಿನ ಮಾತಿನಾಚೆಗಿನ, ಮಾತಿನೊಳಗಿನ ಮಾತು–ವಚನಕಾರರ, ಸ್ವರವಚನಕಾರರ, ಜನಪದ–ಬುಡಕಟ್ಟು ಪರಂಪರೆಗಳ ಮಾತು. ನವೋದಯದವರಿಗೆ ಪರಂಪರೆಯೆಂದರೆ ಇತಿಹಾಸದ ಗತಕಾಲದ ಕಾವ್ಯ–ಶಾಸನಗಳ ಸಿಂಹಾಸನಗಳ ಮಾಲೆ. ಕಂಬಾರರದು ಸಾಕ್ಷರ ಭಾಷೆಯಲ್ಲ, ಸಾಕ್ಷಾತ್ಕಾರದ ಭಾಷೆ. ಬೇಂದ್ರೆಯವರಲ್ಲೂ ಈ ಅಂಶವಿದೆಯಾದರೂ ಅವರ ಲೋಕದೃಷ್ಟಿ ಲಿಖಿತ ಪರಂಪರೆಯ ಜತೆ ಸಮನ್ವಯಕ್ಕೆ ಹಾತೊರೆಯುತ್ತಿದೆ. ಅವರಲ್ಲಿರುವ ಶಿಶುನಾಳ ಷರೀಫರ ವಾಣಿ ಅತ್ತ ಅರವಿಂದರ ಕಡೆಗೂ ತುಡಿಯುತ್ತದೆ.

ಲಿಖಿತಪೂರ್ವ ಭಾಷಿಕ ಪರಂಪರೆ ಕಂಬಾರರಿಗೆ ಕೇವಲ ಶೈಲಿಯ ಆಯ್ಕೆಯಲ್ಲ, ಬದಲಿಗೆ ಅನುಭವದ ಅಧಿಕೃತತೆಯ ಜರೂರಿ. ಗತದ ಜತೆಗೆ, ಹಿರೇಕರ ಜತೆಗೆ, ಮಾನವಾತೀತ ನಿಗೂಢಗಳ ಜತೆಗೆ, ವ್ಯವಸ್ಥೆಯ ಮಡಿಪಂಚೆಯನ್ನು ಮತ್ತೆ ಮತ್ತೆ ಸೀಳಿ ಹೊರಬರುವ ಆದಿಮ ಲೈಂಗಿಕತೆ ಜತೆಗೆ, ಜಾಗರದಾಚೆಗಿನ ಮನೋಲೋಕಗಳ, ಗಾದೆ–ಒಗಟುಗಳ ಜತೆಗೆ ಅವಿನಾ ಸಂಬಂಧವಿಟ್ಟುಕೊಂಡ ಅವರ ಲೋಕದೃಷ್ಟಿ ಹಲವು ಬಾರಿ ಲೋರ್ಕಾನ ಅಂದು ಲೇಷಿಯಾದಪ್ರದೇಶ ವಿಶಿಷ್ಟತೆಯನ್ನು ಹೋಲುತ್ತಾದರೂ ಅದರ ಅನುಕರಣೆಯಲ್ಲ, ಇಲ್ಲಿ ಲೋರ್ಕಾನ ಹಿಂಸ್ರ ಜಗತ್ತಿನಲ್ಲಿಲ್ಲದ ಒಂದು ಅಂಶವಿದೆ. ಅದು ಅಲ್ಲಮಾದಿಗಳ ಬೆಡಗಿನ, ಬೆರಗಿನ ವಿಸ್ಮಯಲೋಕ, 'ಮಹಾಮಾಯಿ'ಯಲ್ಲಿ ಕಂಬಾರರು ಅದನ್ನು 'ಶಿವಲಿಂಗತತ್ವ' ವೆನ್ನುತ್ತಾರೆ. ಹೀಗೆ ಆಧುನಿಕಪೂರ್ವ, ಅಕ್ಷರಪೂರ್ವ, ಸಾವಯವ ಪ್ರಪಂಚವನ್ನು ಏಕಮುಖೀ ಪ್ರಗತಿಪರ ನಾಗರಿಕತೆ ಹೇಗೆ ಭಗ್ನಗೊಳಿಸುತ್ತದೆಂಬುದು ಕಂಬಾರರ ಮುಖ್ಯ ಕಾಳಜಿ. ಈ ಕಣ್ ನೋಟದಿಂದ ಹೊಸತನ್ನು ಪರಿಕಿಸುವ ಕಂಬಾರರ ಸಾಹಿತ್ಯ ದರ್ಶನಕ್ಕೆ ಕನ್ನಡದಲ್ಲಿ ಪೂರ್ವ ಮಾದರಿಗಳಿರಲಿಲ್ಲ. ಈ ಅರ್ಥದಲ್ಲಿ ಕಂಬಾರರು ನವ್ಯರೆನ್ನಬಹುದಾದರೂ ಅವರ ನವ್ಯತೆ ಚುರುಕು ಮಾತಿನ ನಾಗರಿಕ ನವ್ಯತೆಯಲ್ಲ, ಅದು ಲೋರ್ಕಾನ ರೀತಿಯ, ಯೇಟ್ಸ್‌ನ ರೀತಿಯ ಪ್ರಾದೇಶಿಕ ನವ್ಯತೆ. ಆಧುನಿಕ ನಾಗರಿಕತೆಯ ತಿರುಳಾಗಿರುವ ಎಲ್ಲ ರೀತಿಯ ಪ್ರಗತಿವಾದಗಳ, ವೈಜ್ಞಾನಿಕ ಭೌತವಾದಗಳ ಟೀಕೆ. 'ಹೇಳತೇನೆ ಕೇಳ', 'ಋಷ್ಯಶೃಂಗ'ಗಳಿಂದ ಹಿಡಿದು ಅವರ ಇತ್ತೀಚೆಗಿನ 'ಶಿಖರಸೂರ್ಯ', 'ಶಿವರಾತ್ರಿ' ಗಳವರೆಗಿನ ಅವರ ಎಲ್ಲ ಕಾವ್ಯ, ನಾಟಕ, ಕತೆ, ಕಾದಂಬರಿ, ಸಿನಿಮಾಗಳ ಮೂಲ ಸೆಲೆ ಇದೇ. ಉದಾಹರಣೆಗೆ ಮಾವೋನ ಬಗೆಗಿನ ಅವರ ಪ್ರಸಿದ್ಧ ಕವಿತೆಯಲ್ಲಿ ಅವರು ಸಮಾಜವಾದವನ್ನು ಮೆಚ್ಚುತ್ತಲೇ ಅದನ್ನು ಟೀಕೆಗೊಳಪಡಿಸುವುದು ಬಂಡವಾಳಶಾಹಿ ಅಥವಾ ಇನ್ನಾವುದೇ ಆಧುನಿಕ ಸಿದ್ಧಾಂತಗಳ ನೆಲೆಗಟ್ಟಿನಿಂದಲ್ಲ. ತಮ್ಮ ಪ್ರದೇಶದಲ್ಲಿ ಶತಮಾನಗಳಿಂದ ಪರಿಪುಷ್ಟವಾದ ಮೂಲನಿವಾಸಿಗಳ ಮಾಗಿದ ಲೋಕದೃಷ್ಟಿಯಿಂದ ಮಾವೋನ 'ಕಣ್ಣಕಾಮಾಲೆ'ಯನ್ನು ಅವರು ಗುರುತಿಸಿದ್ದಾರೆ. ಆ ಲೋಕದ ಧ್ವನಿ–ಪ್ರತಿಧ್ವನಿಗಳು ಅವರ ವೈವಿಧ್ಯಮಯ , ರಸಭರಿತ ಕೃತಿಗಳ ಆಕೃತಿಗಳನ್ನು ನಿರ್ಮಿಸಿವೆ.

ಇನ್ನೊಂದು ವಿಷಯವನ್ನು ಮರೆಯುವಂತಿಲ್ಲ. ಕಂಬಾರರು ಕುವೆಂಪು ಅವರ ನಂತರದ ದೊಡ್ಡ ಶೂದ್ರ ಪ್ರತಿಭೆ. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಕುವೆಂಪು ಕಂಬಾರರಿಗೆ ತುಂಬಾ ಹತ್ತಿರ. ಆದರೆ, ಕುವೆಂಪು ಅವರು ಶೂದ್ರಲೋಕದ ದೃಷ್ಟಿಯಿಂದ ಮೇಲುಪರಂಪರೆಯ ರಾಮಾಯಣಾದಿ ಕಥನಗಳನ್ನು ತಮ್ಮದಾಗಿಸಿಕೊಳ್ಳಲು ಯತ್ನಿಸಿದರು. ಕಂಬಾರರು ಆ ತಂಟೆಗೆ ಹೋಗಲೇ ಇಲ್ಲ ಅವರು ಎಂದೂ ಭಾರತೀಯ ಸಂಸ್ಕೃತಿಯ ಸಂಕೇತಗಳಾಗಿರುವ ರಾಮಾಯಣ, ಮಹಾಭಾರತ, ವೇದಾಂತಗಳಿಂದ ದೂರ ಉಳಿದು, ಸಮಾಜವಾದಿ ಅಥವಾ

ಉದಾರವಾದಿ ನೆಲೆಗಳೊಂದಿಗೆ ಸಮಜಾಯಿಷಿ ಮಾಡಿಕೊಳ್ಳದೆ ಬುಡಕಟ್ಟು-ಜನಪದ ಪರಂಪರೆಗಳ, ಧರ್ಮದ ಗೋಜಿಗೆ ಸಿಲುಕದ ವಚನಕಾರರ ಸ್ವಚ್ಛಂದತೆಗಳನ್ನು ದ್ರವ್ಯವಾಗಿ ಬಳಸಿ ಶೂದ್ರಪ್ರತಿಭೆ ಮತ್ತು ಸಂವೇದನೆಗಳಿಗೆ ಕುವೆಂಪು ಅವರಿಗಿಂತ ಭಿನ್ನವಾದ ರೀತಿಯಲ್ಲಿ ಹೊಸ ಶಕ್ತಿ ಮತ್ತು ಸಾಧ್ಯತೆಗಳನ್ನು ತಂದುಕೊಟ್ಟರು. ಕಂಬಾರರ ಶೂದ್ರತ್ವ ಒಂದು ಜಾತಿ ಕಲ್ಪನೆ ಮಾತ್ರವಾಗುಳಿಯದೆ ಒಂದು ಅನುಭವದ, ಅಭಿವ್ಯಕ್ತಿಯ ಪರಿಕರವಾಯಿತು. ಆದ್ದರಿಂದಲೇ ಕನ್ನಡ ಸಾಹಿತ್ಯ-ಸಂಸ್ಕೃತಿಯಲ್ಲಿ ದಲಿತ-ಸ್ತ್ರೀ ಪ್ರಜ್ಞೆಗಳು ತಂದ ಪಲ್ಲಟಗಳ ಪೂರ್ವದಲ್ಲಿಯೇ ಕಂಬಾರರು ನವ್ಯ, ನವೋದಯಕ್ಕಿಂತ ಬೇರೆಯೇ ಆದ ಮಹತ್ವದ ಮಾರ್ಪಾಟನ್ನು ತಂದರು.

ಕನ್ನಡದ, ಭಾರತದ ವಿಶಿಷ್ಟ ಪ್ರತಿಭೆಯಾದ ಕಂಬಾರರಿಗೆ ಸಿಕ್ಕ ಈ ಹಿರಿಯ ಪ್ರಶಸ್ತಿ ಅವರ ಅದ್ಭುತ ಪ್ರತಿಭೆಗೆ ಸಿಕ್ಕಿದ್ದು ಎಂಬುದರಷ್ಟೇ ಮುಖ್ಯವಾದುದು ಅವರು ವಹಿಸಿಕೊಳ್ಳುವ ಲೋಕ ದೃಷ್ಟಿಗಳಿಗೆ, ಜನಸಮುದಾಯಗಳಿಗೆ, ಪರಂಪರೆಗಳಿಗೆ ಸಿಕ್ಕಿದ ಗೌರವವೆಂಬುದು. ಕಂಬಾರರ ಕೃತಿ ಸಮುಚ್ಚಯ ಶಕ್ತ ಅನುವಾದಗಳ ಮೂಲಕ ಅಂತಾರಾಷ್ಟ್ರೀಯ ಓದುಗರನ್ನು ತಲುಪಲು ಸಾಧ್ಯವಾದರೆ ಅವರು ಜ್ಞಾನಪೀಠಕ್ಕಿಂತ ದೊಡ್ಡ ಪ್ರಶಸ್ತಿಗಳಿಗೆ ಅರ್ಹರೆಂದು ನಮ್ಮವರಿಗೆ ಗೊತ್ತಾಗದಿದ್ದರೂ ಜಗತ್ತಿಗೆ ಗೊತ್ತಾಗುವುದರಲ್ಲಿ ಸಂದೇಹವಿಲ್ಲ.

■ **ಡಾ. ಎಚ್.ಎಸ್. ಶಿವಪ್ರಕಾಶ್**

**ಕೃಪೆ : ವಿಜಯ ಕರ್ನಾಟಕ**

# ಕಂಬಾರರ ಒಡ್ಡೋಲಗದಿಂದ ಒಂದಿಷ್ಟು..

## ಗುಡ್ಡದಯ್ಯ

1992ರ ನವೆಂಬರ ತಿಂಗಳೆಂದು ತೋರುತ್ತದೆ. ಕನ್ನಡ ವಿಶ್ವವಿದ್ಯಾಲಯ ಅಧಿಕೃತವಾಗಿ ಆರಂಭವಾಗಿತ್ತು. ಡಾ. ಚಂದ್ರಶೇಖರ ಕಂಬಾರ ಅವರು ಅದರ ಮೊದಲ ಕುಲಪತಿಯಾಗಿ ಅಧಿಕಾರ ಸ್ವೀಕರಿಸಿದ್ದರು. ನಾನು ಆಗಿನ ಲಲಿತಕಲೆಗಳ ನಿಕಾಯದಲ್ಲಿ ಪ್ರಾಧ್ಯಾಪಕನಾಗಿ ಸೇರಿಕೊಂಡಿದ್ದೆ. ಹಂಪಿಯ ವಿರೂಪಾಕ್ಷ ದೇವಳದ ಇದಿರು ಭಾಗದಲ್ಲಿ ವಿಜಯನಗರ ಸಾಮ್ರಾಜ್ಯದ ಗತವೈಭವದ ಪಳೆಯುಳಿಕೆಗಳಾಗಿದ್ದ ಕಲ್ಲುಮಂಟಪದೊಳಗೆ ವಿಶ್ವವಿದ್ಯಾಲಯದ ಆರಂಭಿಕ ಕಚೇರಿ. ಈ ಕಚೇರಿಯಿಂದ ಸುಮಾರು ಆರೇಳು ಕಿ.ಮೀ. ದೂರದಲ್ಲಿ ಕಾಮಲಾಪುರ ಕೆರೆಯ ದಂಡೆಯಲ್ಲಿ ವಿಶ್ವವಿದ್ಯಾಲಯಕ್ಕೆ ಸ್ಥಳ ಮಂಜೂರಾಗಿತ್ತು. ಅಲ್ಲಿ ನಮ್ಮೆಲ್ಲರ ಕನ್ನಡ ವಿಶ್ವವಿದ್ಯಾಲಯ ತಲೆ ಎತ್ತಬೇಕಿತ್ತು. ಹಂಪೆಯ ಬಂಡೆಗಳನ್ನು ಹಸನಾಗಿ ಕರಗಿಸಬಲ್ಲ ಬೃಹತ್ ಕನಸಿನ ಡಾ. ಕಂಬಾರರ ಜೊತೆಗೆ ಹರಕು-ಮುರುಕು ಕನಸುಗಳೊಂದಿಗೆ ನಾವು ಕೆಲವರು.

ನಾನು ಪ್ರಾಧ್ಯಾಪಕನಾಗಿ ವಿಶ್ವವಿದ್ಯಾಲಯಕ್ಕೆ ಸೇರಲು ಹೋದ ಮೊದಲ ದಿನ. ಕಂಬಾರರು ಕಚೇರಿಯಲ್ಲಿ ಇದ್ದರು. ಅವರಿಗೆ ಸಹಜವಾಗಿದ್ದ ದೇಸೀ ನಗುವಿನೊಂದಿಗೆ ಅವರು ನನ್ನನ್ನು ಸ್ವಾಗತಿಸಿ, "ಬಿಳಿಮಲೆ, ನಿನಗೆ ಬೇಕಾದ ಕುರ್ಚಿ-ಮೇಜು ತರಿಸಿಕೋ, ಪಕ್ಕದ ಮಂಟಪದ ಕೆಳಗೆ ಜಾಗ ಇದೆ" ಅಂತ ಪೂರ್ತಿ ಅಧಿಕಾರ ನೀಡಿ ಬೀಳ್ಕೊಟ್ಟರು. ನಾನು ತಕ್ಷಣ ಹೊಸಪೇಟೆಗೆ ಹೋಗಿ ನನಗೆ ಬೇಕಾದ ಕುರ್ಚಿ-ಮೇಜು ತಂದೆ. ಕನ್ನಡ ವಿವಿಯಲ್ಲಿ ಪ್ರಾಧ್ಯಾಪಕನಾಗಿ ಸೇರಿದ ಮೇಲೆ ನಾನು ಮಾಡಿದ ಮೊದಲ ಕೆಲಸವೇ ಅದು. ಒಬ್ಬನೇ ಕುರ್ಚಿಯಲ್ಲಿ ಕುಳಿತುಕೊಳ್ಳುವ ನನ್ನ ಸಂಭ್ರಮವನ್ನೋ ಅಥವಾ ಕರುಣಾಜನಕ ಸ್ಥಿತಿಯನ್ನೋ ನೋಡಿ ಮರುಗುವವರೂ ಅಲ್ಲಿ ಇರಲಿಲ್ಲ. ಕುರ್ಚಿಯಲ್ಲಿ ಇನ್ನೂ ಕುಳಿತಿರಲಿಲ್ಲ. ಥಟ್ಟನೆ ಕಂಬಾರರು ಬಂದರು. "ಬಿಳಿಮಲೆ ನಡಿ, ಬೆಂಗಳೂರಿನಿಂದ ಸರಕಾರಿ ಒಡೆತನದ ಸಂಸ್ಥೆಯೊಂದರ ಇಂಜಿನಿಯರ್ ಒಬ್ಬರು ಬಂದಿದ್ದಾರೆ. ಅವರಿಗೆ ನಮ್ಮ ಹೊಸ ಜಾಗ ತೋರಿಸಬೇಕು" ಎಂದರು. 'ಸರಿ' ಎಂದು ಅವರೊಡನೆ ಹೊರಟೆ. ಕಂಬಾರರ ಕಾರು ನೇರವಾಗಿ ಕಾಮಲಾಪುರದ ಕೆರೆದಂಡೆಯವರೆಗೆ ಬಂದು ನಿಂತಿತು.

ಕೆರೆಯ ದಂಡೆಗೆ ಚಾಚಿಕೊಂಡಂತೆ ಒಂದು ಗುಡ್ಡವಿತ್ತು. ಅದು ಈಗಲೂ ಇದೆ. ಆ ಗುಡ್ಡವನ್ನು ನಿಧಾನವಾಗಿ ಏರಿ ಮೇಲಕ್ಕೆ ಹೋದರೆ, ಒಂದು ಕಡೆ ನೀಲಿ ಬಣ್ಣದ ಕಾಮಲಾಪುರ ಕೆರೆಯೂ, ಇನ್ನೊಂದೆಡೆ ಬೃಹತ್ ಕಲ್ಲುಬಂಡೆಗಳ ಒಂದು ಕಣಿವೆಯೂ ಕಾಣಿಸುತ್ತದೆ. ಡಾ. ಕಂಬಾರರು ಕಾರಿಂದಿಳಿದವರೇ ಸರಸರನೆ ಗುಡ್ಡವೇರಿದರು. ಬೆಂಗಳೂರಿನಿಂದ ಆಗಮಿಸಿದ್ದ ಆ ಅಧಿಕಾರಿಯೂ ಕಂಬಾರರನ್ನು ಹಿಂಬಾಲಿಸಿದ. ಕೆಲವೇ ನಿಮಿಷಗಳಲ್ಲಿ ನಾವು ಮೂವರೂ ಗುಡ್ಡೆಯ ನೆತ್ತಿಯ ಮೇಲಿದ್ದೆವು. ಸಾಯಂಕಾಲದ ಸೂರ್ಯ ಕೆರೆಯಲ್ಲಿ ಕೆಂಪಗೆ ಪ್ರತಿಫಲಿಸುತ್ತಿದ್ದ. ಕಂಬಾರರ ಕಣ್ಣಲ್ಲಿ ಕಾವ್ಯವಿತ್ತು. ಆ ಅಧಿಕಾರಿ ಮೆಲ್ಲನೆ ಹೇಳಿದ-"ಈ ಗುಡ್ಡವನ್ನು ಸಮತಟ್ಟಾಗಿಸಿ ಇಲ್ಲಿ ವಿಶ್ವವಿದ್ಯಾಲಯದ ಕಟ್ಟಡ ಮೇಲೇಳಲು ಸ್ವಲ್ಪ ಸಮಯ ತಗಲುತ್ತದೆ. ಖರ್ಚೂ ಆಗುತ್ತದೆ".ಆತ ಇನ್ನೂ ಮಾತು ಮುಗಿಸಿರಲಿಲ್ಲ, ಕಂಬಾರರು ಥಟ್ಟನೆ ಕಾರಿನಕಡೆ ತಿರುಗಿದರು. ನನ್ನೆಡೆಗೆ ನೋಡಿದರು. ಮತ್ತೆ ಸರಸರನೆ ವೇಗವಾಗಿ ಕಾರಿನಕಡೆ ನಡೆದರು. ನಾವಿಬ್ಬರೂ ಅವರನ್ನು ಹಿಂಬಾಲಿಸಿದೆವು. ಕಾರು ಮತ್ತೆ ಕಲ್ಲು ಮಂಟಪದ ಕಡೆ ಚಲಿಸಿತು. ಈ ಹಿಂಪಯಣದಲ್ಲಿ ಮೌನವೇ ಅಧಿಕ.

ಕಚೇರಿ ಒಳನುಗ್ಗುತ್ತಲೇ ಕಂಬಾರರು ನನ್ನನ್ನು ಮೂಲೆಯೊಂದಕ್ಕೆ ತಳ್ಳುತ್ತಾ, ಹೆಗಲ ಮೇಲೆ ಕೈಹಾಕಿ ಹೇಳಿದರು, "ಆ ಅಧಿಕಾರಿಯನ್ನು ಈಗಲೇ ಬೆಂಗಳೂರಿಗೆ ಕಳಿಸಿಬಿಡು.. ನಾನು ಆ ಗುಡ್ಡವನ್ನು ಉಳಿಸಿಕೊಂಡು, ಬಳಸಿಕೊಂಡು ಕಟ್ಟಡ ಕಟ್ಟಲು ಯೋಚಿಸುತ್ತಿದ್ದರೆ, ಆತ ಗುಡ್ಡವನ್ನೇ ನಾಶ ಮಾಡಲು ಯೋಚಿಸುತ್ತಿದ್ದಾನಲ್ಲ? ಇಂಥವರಿಂದ ಏನೂ ಆಗಲಿಕ್ಕಿಲ್ಲ ' ಎನ್ನುತ್ತಾ ತಲೆ ಕೆರೆದುಕೊಂಡರು. ನಾನು ಆ ಅಧಿಕಾರಿಯನ್ನು ನಯವಾಗಿ ಕಳಿಸಿಕೊಟ್ಟೆ. ಕಂಬಾರರ ಕನಸಿನ ಆ ಗುಡ್ಡದಲ್ಲಿ ಮುಂದೆ 'ಅಕ್ಷರ' ತಲೆ ಎತ್ತಿದ್ದು ಇತಿಹಾಸವಾಯಿತು.ಕಂಬಾರರು ಅಲ್ಲಿನ ಒಂದು ಬಂಡೆಯನ್ನೂ ಒಡೆಯಬಿಡಲಿಲ್ಲ, ಬದಲು ಅಲ್ಲೊಂದು 'ಶಿಲ್ಪವನ'ದ ಕನಸು ಕಂಡರು. 'ಹಂಪಿಯ ಬಂಡೆಗಳು' ಕವನ ಬರೆದು ನಾವೆಲ್ಲ ಬಂಡೆಗಳನ್ನು ಗೌರವಿಸುವಂತೆ ಮಾಡಿದರು.

## ಮುಳುಗಿದ್ದು ಕಲ್ಲುಮಂಟಪ, ವಿಶ್ವವಿದ್ಯಾಲಯವಲ್ಲ.

ಕಲ್ಲುಮಂಟಪದೊಳಗೆ ನಿಧಾನವಾಗಿ ಕನ್ನಡ ಅರಳತೊಡಗಿತ್ತು. ಆ ಲೋಕದೊಳಗೆ ಕಂಬಾರರು, ಕೆ ವಿ ನಾರಾಯಣ, ಓ. ಎಲ್ ನಾಗಭೂಷಣ ಸ್ವಾಮಿ, ಚಿ ಶ್ರೀನಿವಾಸರಾಜು, ಎಚ್ ಎಸ್ ರಾಘವೇಂದ್ರ ರಾವ್ ಮತ್ತಿತರರ ಒಡನಾಟ. ಮುಂದೆ ಶ್ರೀ ಜಿ ಆರ್ ರಾಮಮೂರ್ತಿ ಅವರೂ ಗ್ರಂಥಪಾಲಕರಾಗಿ ಸೇರಿಕೊಂಡರು. ಆ ಕಾಲಕ್ಕೆ ಅದೊಂದು ಕೂಡು-ಕುಟುಂಬ. ಕಂಬಾರರು ಆ ಅವಿಭಕ್ತ ಕುಟುಂಬದ ಯಜಮಾನರು. ಒಮ್ಮೆ, ಇದ್ದಕ್ಕಿದ್ದಂತೆ ಭಾರೀ ಮಳೆ ಸುರಿಯಲು ಆರಂಭವಾಯಿತು. ಹಂಪಿಯ ಮಳೆಗೆ ನೆನೆಯುವುದು ನಮಗೆಲ್ಲ ಇಷ್ಟದ ವಿಷಯವಾಗಿತ್ತು. ಈ ನಡುವೆ ಡಾ. ಚಿದಾನಂದಮೂರ್ತಿಯವರು, ನಾವಿದ್ದ ಕಲ್ಲುಮಂಟಪದ ಸನಿಹದಲ್ಲಿ 12ನೇ ಶತಮಾನದಷ್ಟು ಹಿಂದೆ ಪುಷ್ಪೋದ್ಯಾನ ಒಂದಿದ್ದು, ಅದರಿಂದ ಪ್ರೇರಣೆ ಪಡೆದ ಮಹಾಕವಿ ಹರಿಹರನು 'ಪುಷ್ಪ ರಗಳೆ' ಬರೆದ ಎಂದು ಸಾಬೀತುಪಡಿಸಿಬಿಟ್ಟಿದ್ದರು. ಮಳೆಯಲ್ಲಿ ಪುಷ್ಪೋದ್ಯಾನದ ಬಳಿ ನಡೆದು ಹರಿಹರನನ್ನು ನೆನಪಿಸಿಕೊಂಡು ರೋಮಾಂಚಿತರಾಗುವ ಸುಖವನ್ನು ನಾವು ಬಿಟ್ಟುಕೊಡುತ್ತಿರಲಿಲ್ಲ. ಆದರೆ ಆ ದಿನ ಸುರಿದ ಮಳೆ ಏಕೋ ಭಯಾನಕವಾಗಿ ಹರಿಹರನ 'ಗುಂಡಯ್ಯನ ರಗಳೆ'ಯನ್ನು ನೆನಪಿಸುತ್ತಿತ್ತು. ಮೆಲ್ಲನೆ ಹರಿಯುತ್ತಿದ್ದ ತುಂಗಭದ್ರೆ ಭಯಾನಕವಾಗಿ ಕಾಣಲಾರಂಭಿಸಿದಳು. ಡಾ. ಕಂಬಾರರು ಆ ದಿವಸ ಹಂಪಿಯಲ್ಲಿರಲಿಲ್ಲ. ಮಧ್ಯರಾತ್ರಿ ಸುದ್ದಿ ಬಂತು, 'ತುಂಗಭದ್ರೆ ಅಣೆಕಟ್ಟಿನ ಎಲ್ಲ ಬಾಗಿಲುಗಳನ್ನು ತೆರೆಯಲಾಗಿದೆ, ನೀರು ವೇಗವಾಗಿ ನದಿ ದಂಡೆಯನ್ನು ಆಕ್ರಮಿಸುತ್ತಿದೆ' ಅಂತ. ಜನರೆಲ್ಲ ನದಿ ದಂಡೆಯಿಂದ ಮಧ್ಯರಾತ್ರಿಯೇ ದೂರ ಸರಿದರು. ಆದರೆ ಕಲ್ಲುಮಂಟಪದೊಳಗೆ ಸ್ಥಾಪಿಸಲಾಗಿದ್ದ ಕನ್ನಡ ವಿವಿಯನ್ನು ಎಲ್ಲಿಗೂ ಸರಿಸುವಂತಿರಲಿಲ್ಲ. ಮರುದಿನ ಮುಂಜಾವದಲ್ಲಿ ಓಡೋಡಿ ಹಂಪಿಗೆ ತಲುಪಿದಾಗ ವಿಶ್ವವಿದ್ಯಾಲಯದ ಕಾಲುಭಾಗವನ್ನು ನೀರು ಆಕ್ರಮಿಸಿಕೊಂಡಿತ್ತು. ನಮ್ಮ ಕಣ್ಣಲ್ಲಿ ನೀರು. ಸ್ಥಳೀಯರ ಸಹಾಯದಿಂದ ಜೀವದ ಹಂಗು ತೊರೆದು ಕಚೇರಿಯೊಳಕ್ಕೆ ನುಗ್ಗಿದೆವು. ನಮ್ಮಿಂದ ಸಾಧ್ಯವಾದಷ್ಟು ಕಡತಗಳನ್ನು, ಪುಸ್ತಕಗಳನ್ನು ಹೊರತಂದೆವು, ದೋಣಿಗಳಲ್ಲಿ ತುಂಬಿಸಿ ದೂರ ಕಳಿಸಿದೆವು. ವಿದ್ಯುತ್ ಶಾಕ್‌ನಿಂದಾಗಬಹುದಾದ ಅಪಾಯವನ್ನು ತಪ್ಪಿಸಲು 'ಮೆಯ್ನ್ ಸ್ವಿಚ್' ಕೆಳಗಿಳಿಸಿದೆವು. ಆದರೆ ನೀರು ಒಂದೇ ಸಮನೆ ಏರುತ್ತಲಿತ್ತು. ಅದು ನಮ್ಮ ಎದೆಭಾಗಕ್ಕೆ ತಲುಪುವ ಹೊತ್ತಿಗೆ ನಾವೆಲ್ಲ ನಿಧಾನವಾಗಿ ಹಿಂದೆ ಸರಿದಿದ್ದೆವು. ನಮ್ಮ ಪುಸ್ತಕ-ಕಡತಗಳಲ್ಲಿ ತುಂಗೆಯ ಕೆಸರು, ಕನಸುಗಳನ್ನು ಕಳೆದುಕೊಂಡಿದ್ದ ನಮ್ಮ ಕಣ್ಣುಗಳಲ್ಲಿ ಭದ್ರವಿಲ್ಲದ ಭವಿಷ್ಯ!

ಸುದ್ದಿ ತಿಳಿದ ಕಂಬಾರರು ಸಾಯಂಕಾಲದ ಹೊತ್ತಿಗೆ ಓಡೋಡಿ ಬಂದರು.

ಅವರು ಪೂರ್ಣ ಖಿನ್ನರಾಗಿದ್ದರು. ಕಾಡುಕುದುರೆ ಬಸವಳಿದಿತ್ತು. ಮಾವೋತ್ಸೆ ತುಂಗ ತನ್ನ ಕ್ರಾಂತಿಗೆ ತಾನೇ ಶರಣಾಗಿ ಮೌನವಾಗಿದ್ದ. ತಾಯಿಕರುಣೆಯಿಂದ ಮಗುವನ್ನು ಸಂತೈಸುವ ಹಾಗೆ ನಮ್ಮನ್ನು ಸಂತೈಸಿದ ಕಂಬಾರರು, 'ಮುಳುಗಿದ್ದು ವಿಶ್ವವಿದ್ಯಾಲಯವಲ್ಲ, ಕೇವಲ ಕಲ್ಲುಮಂಟಪ' ಎಂಬ ಹೇಳಿಕೆ ನೀಡಿ ಮತ್ತೆ ನಮ್ಮನ್ನು ಕನ್ನಡ ವಿಶ್ವವಿದ್ಯಾಲಯ ಕಟ್ಟಲು ಹುರಿದುಂಬಿಸಿದರು. ನಿಧಾನವಾಗಿ ಪುಷ್ಪೋದ್ಯಾನದಲ್ಲಿ ಚಕೋರಿ ಮೈದೋರುವಂತಾಯಿತು. ಬಿಕ್ಕಟ್ಟಿನ ಘಳಿಗೆಯೊಂದರಲ್ಲಿ ಕಂಬಾರರು ನೀಡಿದ ಸಂದೇಶ 19 ವರ್ಷಗಳ ಆನಂತರ ಈಗಲೂ ನನ್ನ ಕಿವಿಯಲ್ಲಿ ಅನುರಣನಗೊಳ್ಳುತ್ತಿದೆ.

### ಬಲು ತೋಷವಾಯ್ತಯ್ಯ...

ನಾನಾಗಲೇ ಹೇಳಿದಂತೆ ಕನ್ನಡ ವಿವಿಯ ಆರಂಭಿಕ ದಿನಗಳಲ್ಲಿ ನಾವು ನಾಲ್ಕಾರು ಜನ ಮಾತ್ರ ಇದ್ದೆವು. ಕಂಬಾರರ ಕಚೇರಿಗೆ ತಾಗಿಕೊಂಡು ಹತ್ತಾರು ಜನ ಕುಳಿತುಕೊಳ್ಳಬಹುದಾದ ಸಣ್ಣದೊಂದು ಕೊಠಡಿಯಿತ್ತು. ಡಾ. ಕಂಬಾರರು ನೇರವಾಗಿ ಅವರ ಕಚೇರಿಯಿಂದ ಈ ಕೊಠಡಿಗೆ ನುಗ್ಗಬಹುದಿತ್ತು. ನಾವೆಲ್ಲ ಇನ್ನೊಂದು ಬಾಗಿಲಿನಿಂದ ಅದಕ್ಕೆ ಪ್ರವೇಶಿಸಬಹುದಿತ್ತು. ಪ್ರತಿ ದಿನ ಬೆಳಗ್ಗೆ 10 ಗಂಟೆಗೆ ನಾವು ಇದ್ದಷ್ಟು ಜನ ಒಂದು ಟಿಪ್ಪಣಿ ಪುಸ್ತಕ ಮತ್ತು ಪೆನ್ನು ಹಿಡಿದುಕೊಂಡು ಅಲ್ಲಿ ಹಾಜರಿರಬೇಕು. ಎಲ್ಲರೂ ಬಂದಾದ ಮೇಲೆ ಕಂಬಾರರು ಅವರ ಕೊಠಡಿಯಿಂದ ನೇರವಾಗಿ ಅಲ್ಲಿಗೆ ಬರುತ್ತಿದ್ದರು. ಬಂದವರೇ, "ಏನ್ರೀ ಎಲ್ಲರೂ ಚೆನ್ನಾಗಿದ್ದೀರಾ? ನಿನ್ನೆ ಏನೇನು ನಡೆಯಿತು? ಇವತ್ತು ಏನೇನು ಮಾಡಬೇಕೆಂದಿದ್ದೀರಿ? ನಾಳೆಗೆ ಏನು ಯೋಚನೆ?" ಅಂತ ಕೇಳುತ್ತಿದ್ದರು. ನಾವೆಲ್ಲ ವಿನೀತರಾಗಿ ವರದಿ ಒಪ್ಪಿಸುತ್ತಿದ್ದೆವು. ಇದು ನಮಗೆ ಬಯಲಾಟದ ಆರಂಭವನ್ನು ನೆನಪಿಸುತ್ತಿತ್ತು. ಬಯಲಾಟದಲ್ಲಿ ದೇವೇಂದ್ರನು ಸಭಾ ಪ್ರವೇಶ ಮಾಡಿ ಎಲ್ಲರನ್ನು ಕುಳ್ಳಿರಿಸಿ "ಕುಶಲವೇ" ಎಂದು ಕೇಳುವುದುಂಟು. ಆಗ ಅಲ್ಲಿನ ದಿಕ್ಪಾಲಕರೆಲ್ಲ ಅವರವರ ಸಾಹಸ, ಸಾಧನೆಗಳನ್ನು ಎಂದಿನಂತೆ ಪಟ್ಟಿಮಾಡಿ, "ಯಾರಾದರೂ ನಮ್ಮ ಸ್ವರ್ಗಕ್ಕೆ ದಾಳಿ ಮಾಡಿದರೆ, ಅವರನ್ನು ಕೊಂದು ಸ್ವರ್ಗವನ್ನು ರಕ್ಷಿಸಿ ಕೊಡುತ್ತೇವೆ... ಭಯಪಡಬೇಡ" ಅಂತಲೇ ಕಡ್ಡಾಯವಾಗಿ ಹೇಳಬೇಕು. ಅದನ್ನು ಕೇಳಿ ಸಂತಸಗೊಂಡು ದೇವೇಂದ್ರನು, "ಬಲು ತೋಷವಾಯ್ತಯ್ಯ ನೀವೆಂದ ನುಡಿಗೆ" ಎಂದು ತನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾನೆ. ಆಗ ಅವನ ಸಭೆಯಲ್ಲಿದ್ದ ಎಲ್ಲ ಸದಸ್ಯರೂ ಖುಷಿಯಿಂದ ಮುಂದಿನ ಕಾರ್ಯಗಳಿಗೆ ಸಜ್ಜಾಗಲು ಹೊರಟುಬಿಡುತ್ತಾರೆ. ಈ ಒಟ್ಟು ಪ್ರಕ್ರಿಯೆಗೆ 'ಒಡ್ಡೋಲಗ' ಅಂತ ಹೆಸರು. ಕಂಬಾರರ 'ಒಡ್ಡೋಲಗ'ವೂ ಬಹುಮಟ್ಟಿಗೆ ಹೀಗೆ ಇತ್ತು. ಬಹುಶಃ ಒ ಎಲ್ ನಾಗಭೂಷಣಸ್ವಾಮಿ ಅಂತ ನನ್ನ ನೆನಪು, ಒಮ್ಮೆ ಕಂಬಾರರಿಗೆ ಅದನ್ನು ಹೇಳಿಯೇ ಬಿಟ್ಟರು. ಬಯಲಾಟ ಪ್ರೇಮಿ ಕಂಬಾರರು ಅದನ್ನು ಮೆಚ್ಚಿಕೊಂಡರು. "ನಾಳೆ ಮತ್ತೆ ಒಡ್ಡೋಲಗದಲ್ಲಿ ಭೇಟಿಯಾಗೋಣ" ಅಂತ ಅವರೇ ಹೇಳಲಾರಂಭಿಸಿದರು. ಸುಮಾರು ಆರು ತಿಂಗಳಿಗೂ ಮೀರಿ ನಿರಂತರವಾಗಿ ನಡೆದ ಕಂಬಾರರ ಒಡ್ಡೋಲಗ ನನ್ನ ಇಷ್ಟದ ನೆನಪುಗಳಲ್ಲಿ ಒಂದು. ಅದರಲ್ಲಿ ಬಂದು ಹೋಗದ ವಿಷಯಗಳಿಲ್ಲ. ತಮಾಷೆಗೆ ಒಳಗಾಗದ ಸಾಹಿತಿಗಳಿಲ್ಲ. ಎಷ್ಟೋ ಬಾರಿ ಕಂಬಾರರ ಬಗೆಗೆ ನಾವು ಹೊರಗಡೆ ಕೇಳಿದ ಜೋಕುಗಳನ್ನು ಸ್ವತಹ ಕಂಬಾರರು ಬೇರೆಯವರ ಬಗ್ಗೆ ಹೇಳಿದಾಗ ನಾನಂತೂ ತಬ್ಬಿಬ್ಬಾಗಿಬಿಡುತ್ತಿದ್ದೆ. ಕಂಬಾರರ ಒಡ್ಡೋಲಗದಲ್ಲಿ ಅವರೇ ಬರೆದ ಕಾವ್ಯ, ಕತೆ, ನಾಟಕ, ಜಾನಪದ, ಸಿನಿಮಾಗಳ ಅನೇಕ ಪಾತ್ರಗಳೆಲ್ಲ ದಿನನಿತ್ಯ ಪ್ರತ್ಯಕ್ಷವಾಗುತ್ತಿದ್ದವು. ಜೊತೆಗೆ ಅಲ್ಲಿ ಸತ್ಯ, ಸುಳ್ಳು, ಪುರಾಣ, ಇತಿಹಾಸ, ವರ್ತಮಾನ, ಭವಿಷ್ಯಗಳೆಲ್ಲ ಒಂದಾಗಿ ಕಾಲಾತೀತಗೊಳ್ಳುತ್ತಿದ್ದವು.

### ಕುಳಿತೇನೆಂದರೆ ಹ್ಯಾಂಗ.

ಕನ್ನಡ ವಿಶ್ವವಿದ್ಯಾಲಯದ ಕಟ್ಟಡದ ಶಂಕು ಸ್ಥಾಪನೆಯ ದಿನ ನಿರ್ಧಾರಿತವಾಗಿತ್ತು. ಶ್ರೀ ಬಂಗಾರಪ್ಪನವರಿಂದ ಆ ಕೆಲಸ ನೆರವೇರುತ್ತದೆ ಎಂದು ಡಾ. ಕಂಬಾರರು ಒಡ್ಡೋಲಗದಲ್ಲಿ ಹೇಳಿದ್ದರು. ಕಾಮಲಾಪುರದ ಕೆರೆದಂಡೆಯ ಮೇಲೆ ಕಂಬಾರರೇ ಸ್ಥಳವೊಂದನ್ನು ಹುಡುಕಿದರು. ಕರೆಯೋಲೆ ಪ್ರಕಟವಾಯಿತು. ಕಾರ್ಯಕ್ರಮದ ಹಿಂದಿನ ದಿನ ನಾನು ಏವೆಮುಚ್ಚಿರಲಿಲ್ಲ. ಟೆಂಟು ಹಾಕಿಸುವುದು, ಮೈದಾನದಿಂದ ಪುಡಿಕಲ್ಲುಗಳನ್ನು ತೆಗೆಯುವುದು, ತೋರಣ ಕಟ್ಟುವುದು ಇತ್ಯಾದಿ ನೂರಾರು ಕೆಲಸ. ಕರೆಯೋಲೆಯಲ್ಲಿದ್ದ ಅತಿಥಿಗಳಿಗೆಲ್ಲ ವೇದಿಕೆಯಲ್ಲಿ ಒಳ್ಳೆಯ ಕುರ್ಚಿಗಳನ್ನು ಹಾಕಲು ಕಂಬಾರರು ನನಗೆ ಸೂಚಿಸಿದ್ದರು. ಆ ಪ್ರಕಾರ ವೇದಿಕೆಯನ್ನು ಸಿದ್ಧಪಡಿಸಲಾಗಿತ್ತು.

ನಿಗದಿತ ಸಮಯಕ್ಕೆ ಸರಿಯಾಗಿ ಬಂಗಾರಪ್ಪನವರು ಬಂದರು. ಅವರೊಂದಿಗೆ ನಿರೀಕ್ಷೆಗೂ ಮೀರಿದಷ್ಟು ರಾಜಕಾರಣಿಗಳು ಬಂದಿದ್ದರು. ವೇದಿಕೆಯ ಬಳಿಯಲ್ಲಿ ಇನ್ನೂ ಅನೇಕರು ಹಾಜರಿದ್ದರು. ಅವರೆಲ್ಲ ಸಾಲುಸಾಲಾಗಿ ಬಂಗಾರಪ್ಪನವರೊಡನೆ ವೇದಿಕೆ ಏರಿದರು ಮತ್ತು ಕಂಡ ಕಂಡ ಕುರ್ಚಿಯಲ್ಲಿ ಆಸೀನರಾದರು. ಹೆಚ್ಚು ಕುರ್ಚಿಗಳನ್ನು ಹಾಕಲು ವೇದಿಕೆಯಲ್ಲಿ ಸ್ಥಳವೂ ಇರಲಿಲ್ಲ. ನಮ್ಮ ನೆಚ್ಚಿನ ಕುಲಪತಿ ಕಂಬಾರರಿಗೆ ಕುಳಿತುಕೊಳ್ಳಲು ಕುರ್ಚಿ ದೊರೆಯದ್ದನ್ನು ಕಂಡು ನನಗಂತೂ ತೀವ್ರ ವಿಷಾದವಾಯಿತು. ಹೇಗೋ ಮಾಡಿ ಯಾರದೋ ಸಹಾಯದಿಂದ ಒಂದು ಕುರ್ಚಿಯನ್ನು ವೇದಿಕೆಗೇರಿಸಲಾಯಿತು. ಕಂಬಾರರು ಕುಳಿತುಕೊಂಡರು. ಕಾರ್ಯಕ್ರಮ ಆರಂಭವಾಯಿತು. ಕಂಬಾರರದು ಸ್ವಾಗತ ಭಾಷಣ. ಆ ಭಾಷಣಕ್ಕೆ ಅವರು ಸಾಕಷ್ಟು ಸಿದ್ಧತೆಯನ್ನು ಮಾಡಿಕೊಂಡಿದ್ದರು. ಕೀರ್ತಿನಾಥ ಕುರ್ತಕೋಟಿಯವರಂಥವರೊಡನೆ ಸಮಾಲೋಚಿಸಿ ಸಿದ್ಧಪಡಿಸಿದ ಭಾಷಣ ಎಂದರೆ ಕೇಳಬೇಕೇ? ಕನ್ನಡ ವಿಶ್ವವಿದ್ಯಾಲಯದ ಬಗೆಗಣ ತನ್ನ ಕಲ್ಪನೆಗಳನ್ನೆಲ್ಲ ಅವರು ತೆರೆದಿಟ್ಟರು. ನಾನು ಇದುವರೆಗೆ ಕೇಳಿದ ಅತ್ಯುತ್ತಮ ಭಾಷಣಗಳಲ್ಲಿ ಅದೊಂದು ಎನ್ನಲು ನನಗೆ ಹೆಮ್ಮೆಯಾಗುತ್ತದೆ (ಈ ಭಾಷಣವೇ ಮುಂದೆ ಪರಿಷ್ಕೃತಗೊಂಡು ನೆಲದ ಮರೆಯ ನಿದಾನವಾಗಿ ಪ್ರಕಟಗೊಂಡಿತು). ಹೀಗೆ ಕಂಬಾರರ ಭಾಷಣ ನಿರರ್ಗಳವಾಗಿ ನಡೆಯುತ್ತಿರುವಾಗ, ಕಾಮಲಾಪುರದ ಸ್ಥಳೀಯ ನಾಯಕರೊಬ್ಬರು ಮೆಲ್ಲಗೆ ವೇದಿಕೆಯೇರಿ ಕಂಬಾರರಿಗೆ ಇರಿಸಲಾಗಿದ್ದ ಕುರ್ಚಿಯಲ್ಲಿ ತಣ್ಣಗೆ ಕುಳಿತುಬಿಟ್ಟರು. ಅದ್ಭುತವಾದ ಭಾಷಣ ಮುಗಿಸಿದ ಕಂಬಾರರು ಏನೂ ಮಾಡುವಂತಿರಲಿಲ್ಲ, ಕಾರ್ಯಕ್ರಮದ ಕೊನೆವರೆಗೆ ಕುಲಪತಿಗಳು ನಿಂತುಕೊಂಡೇ ಇರಬೇಕಾಯಿತು.

### ಜಗಳ ಪರಿಹಾರ ಹೀಗೆ..

ವಿಶ್ವವಿದ್ಯಾಲಯ ಆರಂಭವಾಗುತ್ತಿದ್ದಂತೆಯೇ ಕಾಮಲಾಪುರದ ಸ್ಥಳೀಯರನೇಕರು ಕುಲಪತಿ ಕಂಬಾರರನ್ನು ಹಾಗೂ ಆಗ ಕುಲಸಚಿವರಾಗಿದ್ದ ಗೆಳೆಯ ಕೆ ವಿ ನಾರಾಯಣರನ್ನು ಕಾಣಲು ಬರಲಾರಂಭಿಸಿದರು. ಎಲ್ಲರದೂ ಒಂದೇ ಕೂಗು– "ಈ ವಿಶ್ವವಿದ್ಯಾಲಯದ ಜಾಗದಲ್ಲಿ ನಾವು ಬೇಸಾಯ ಮಾಡಿಕೊಂಡಿದ್ದೆವು. ಈಗ ಜಾಗವೆಲ್ಲ ಹೋಯಿತು. ನಮ್ಮ ಮಗನಿಗೆ ನಿಮ್ಮಲ್ಲಿ ಒಂದು ಕೆಲಸ ಕೊಟ್ಟರೆ ಬದುಕಿಕೊಳ್ಳುತ್ತೇವೆ". ಕವಿ ಹೃದಯದ ಕಂಬಾರರು ಇಂಥ ಕೂಗುಗಳಿಗೆ ಸುಲಭವಾಗಿ ಕರಗುತ್ತಿದ್ದರು. ಏನಾದರೂ ಮಾಡಲೇಬೇಕೆಂದು ಎಲ್ಲರಿಗೂ ಹೇಳುತ್ತಿದ್ದರು. ಸುದ್ದಿ ಬಹುಶ: ಕಾಮಲಾಪುರ ತಲುಪಿತ್ತೆಂದು ತೋರುತ್ತದೆ. ಕೆಲಸ ಕೇಳಲು ಬರುವ ಜನರ ಸಂಖ್ಯೆ ಗಮನಾರ್ಹವಾಗಿ ಹೆಚ್ಚಿತು. ಎಲ್ಲರದೂ ಒಂದೇ ಕೂಗು–"ಈ ಜಾಗ ನನ್ನದು–ನನ್ನ ಮಗನಿಗೆ ಕೆಲಸ ಕೊಡಿ' ಸಂಖ್ಯೆ ದಿನ ದಿನಕ್ಕೆ ಹೆಚ್ಚಾಗಿ, ನೂರರ ಹತ್ತಿರ ಹತ್ತಿರ ತಲುಪಿದಾಗ ನಮಗೆಲ್ಲ ತಲೆ ಬಿಸಿ ಆರಂಭವಾಯಿತು. ಇದ್ದಕ್ಕಿದ್ದಂತೆ ಕಂಬಾರರು ಒಂದಿನ ಕೆಲಸ ಕೇಳಲು ಬಂದ ಜನರ ಸಭೆ ಕರೆದರು. ಜನರೆಲ್ಲ ಸೇರಿದ ಆನಂತರ ಉತ್ತರ ಕರ್ನಾಟಕದ ಜನಪದ ಭಾಷೆಯಲ್ಲಿ ಅವರನ್ನು ಸಂಬೋಧಿಸಿ ಮಾತಾಡುತ್ತಾ–" ನೋಡಿ ನನ್ನ ಕೈಯಲ್ಲಿ ಇಲ್ಲಿಯ ನಕ್ಷೆ ಇದೆ, ಹಿಂಗಾಗಿ ನೀವು ಯಾರೂ ಸುಳ್ಳು ಹೇಳಲಿಕ್ಕಾಗುವುದಿಲ್ಲ. ಒಂದೇ ಜಾಗವನ್ನು ಹತ್ತು ಜನ ನಮ್ಮದು–ನಮ್ಮದು ಅಂತ ಹೇಳ್ತಾ ಇದ್ದೀರಾ? ನಿಮ್ಮಲ್ಲಿ ನಿಜವಾಗಿ ಯಾರಿಗೆ ಈ ಜಮೀನು ಸೇರಿದ್ದು ಅಂತ ಯಾರಿಗೆ ತಿಳೀಬೇಕು? ಮೊದಲು ನೀವೇ ತೀರ್ಮಾನ ಮಾಡಿ, ಆಮೇಲೆ ನನ್ನ ಹತ್ತಿರ ಬನ್ನಿ' ಎಂದು ಹೇಳಿ, ಅಲ್ಲಿಗೆ ಬಂದಿದ್ದ ಸ್ಥಳೀಯ ನಾಯಕರಿಗೆ ಆ ಜವಾಬ್ದಾರಿಯನ್ನು ವಹಿಸಿಬಿಟ್ಟರು. ಆಮೇಲೆ ಏನಾಯಿತೋ ತಿಳಿಯದು. ಕಾಮಲಾಪುರದಲ್ಲಿ ಜಗಳ ಸುರುವಾಗಿದೆ ಎಂಬ ಸುದ್ದಿ ಮಾತ್ರ ನನಗೆ ತಲುಪಿತ್ತು. ಕಂಬಾರರು ಆರಾಮವಾಗಿದ್ದರು.

ಜಾನಪದದ ವಿದ್ಯಾರ್ಥಿಯಾದ ನಾನು ಕಂಬಾರರ ಹೆಚ್ಚಿನ ಕೃತಿಗಳನ್ನು ಧ್ಯಾನಿಸಿ ಓದಿದ್ದೇನೆ. ಹಂಪಿಯಲ್ಲಿ ಆರು ವರ್ಷಗಳ ಕಾಲ ಅವರ ಕನಸುಗಳನ್ನು ಸಾಕಾರಗೊಳಿಸಲು ಬದ್ಧತೆಯಿಂದ ದುಡಿದಿದ್ದೇನೆ. ಜಾನಪದದಿಂದ ಸಂಭ್ರಮ–ಉತ್ಸಾಹಗಳನ್ನು ಮಾತ್ರ ಆಯ್ದು ತೆಗೆದು, ಅದನ್ನು ತನ್ನ ಕೃತಿಗಳಲ್ಲಿ ಸೃಜನಾತ್ಮಕವಾಗಿ ಬಳಸಿಕೊಂಡು ಉಳಿದುದನ್ನು ಮರೆತುಬಿಡುವ ಅವರ ನಗರ ಕೇಂದ್ರಿತ ಚಿಂತನಾಕ್ರಮಗಳ ಬಗ್ಗೆ ನನ್ನಲ್ಲಿ ಸಂಶಯ ಮೂಡಿದ್ದುಂಟು. ನನ್ನ ಬದ್ಧತೆಯನ್ನು ಅವರೇ ಸಂಶಯದಿಂದ ನೋಡಿದ್ದುಂಟು. ಇವೆಲ್ಲವುಗಳ ನಡುವೆಯೂ ಕಂಬಾರರ ಸೃಜನಶೀಲ ಪ್ರತಿಭೆ ಬಹಳ ವಿಶೇಷವಾದುದು ಎಂಬುದನ್ನು ಮೇಲಿನ ಘಟನೆಗಳು ಪ್ರತೀತಗೊಳಿಸಬಲ್ಲುವು ಎಂದು ಪ್ರಾಮಾಣಿಕವಾಗಿ ನಾನು ನಂಬುತ್ತೇನೆ. ಇಂದಿನ ಭಾರತದಲ್ಲಿ ಕಂಬಾರರ ಹಾಗೆ ಬರೆಯುವವರು ಕಂಬಾರ ಒಬ್ಬರೇ ಎಂಬುದರಲ್ಲಿ ಎರಡು ಮಾತಿಲ್ಲ.

**■ ಡಾ. ಪುರುಷೋತ್ತಮ ಬಿಳಿಮಲೆ**

**ಕೃಪೆ : ಮಯೂರ**

# ಸಾಂಸ್ಕೃತಿಕ ಬಾಗಿನ ಚಿತ್ರ ಕಲಾ ಪ್ರದರ್ಶನ

ಸಂಸ್ಕೃತಿ ಸಂಗಾತಿ ಐ.ಎಂ. ವಿಠ್ಠಲಮೂರ್ತಿ ಅವರನ್ನು ಅಭಿನಂದಿಸುವ ಸಲುವಾಗಿ ದೆಹಲಿ ಕರ್ನಾಟಕ ಸಂಘವು ಸಾಂಸ್ಕೃತಿಕ ಬಾಗಿನ ಕಾರ್ಯಕ್ರಮವನ್ನು ಸೆಪ್ಟಂಬರ್ 3 ಮತ್ತು 4ರಂದು ಸಂಘದಲ್ಲಿ ಹಮ್ಮಿಕೊಂಡಿತ್ತು. ಮೊದಲ ದಿನದ ಕಾರ್ಯಕ್ರಮದಲ್ಲಿ ಸಾಂಸ್ಕೃತಿಕ ಬಾಗಿನ ಕಾರ್ಯಕ್ರಮದ ಉದ್ಘಾಟನೆ, ಚಿತ್ರ ಕಲಾ ಶಿಬಿರದ ಉದ್ಘಾಟನೆ ಮತ್ತು ಸಂಜೆ 6ಕ್ಕೆ 'ಗಾಂಧಿ ಬಂದ' ನಾಟಕ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಡಾ. ಪುರುಷೋತ್ತಮ ಬಿಳಿಮಲೆ, ದೆಹಲಿಯ ಹಿರಿಯ ಕಲಾವಿದ ಶ್ರೀ ಭೀಮರಾವ್ ಮುರಗೋಡ, ಹಿರಿಯ ನಿವೃತ್ತ ಐ.ಎ.ಎಸ್. ಅಧಿಕಾರಿ ಎನ್.ಜೆ. ಕಾಮತ್, ಐ.ಎಂ. ವಿಠ್ಠಲಮೂರ್ತಿ ದಂಪತಿಗಳು, ಶ್ರೀನಿವಾಸ ಜಿ. ಕಪ್ಪಣ್ಣ, ಉದಯೋನ್ಮುಖ ಐ.ಎ.ಎಸ್. ಅಧಿಕಾರಿಣಿ ಧನಲಕ್ಷ್ಮಿ ಹಾಗೂ ಸಂಘದ ಅಧ್ಯಕ್ಷರಿಂದ ದೀಪ ಬೆಳಗಿಸುವುದರ ಮೂಲಕ ಆರಂಭವಾದ ಕಾರ್ಯಕ್ರಮ 10 ಜನ ಸುಪ್ರಸಿದ್ಧ ಚಿತ್ರಕಲಾವಿದರುಗಳ ಚಿತ್ರಕಲಾ ಶಿಬಿರದ ಉದ್ಘಾಟನೆಯನ್ನು ಒಳಗೊಂಡಿತ್ತು. ಕಲಾವಿದರು ಹಾಗೂ ದೆಹಲಿ ಕನ್ನಡಿಗರಿಂದ ತುಂಬಿದ್ದ ಆರ್ಟ್ ಗ್ಯಾಲರಿಯಲ್ಲಿ ಚಿಂತನ್ ವಿಕಾಸ್ ಮತ್ತು ವಿನಯ್ ಅವರ ಸುಮಧುರ ಕಂಠದಲ್ಲಿ ಕನ್ನಡ ಗೀತೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಅತಿಥಿಗಳನ್ನು ಸ್ವಾಗತಿಸುತ್ತಾ ಮತ್ತು ಅವರ ಕಿರುಪರಿಚಯವನ್ನು ಮಾಡಿಕೊಡುತ್ತ ವಿಠ್ಠಲಮೂರ್ತಿಯವರ ಕೆಲಸ ಕಾರ್ಯಗಳ ಬಗ್ಗೆ ತಿಳಿಸಿದರು. ಈ ಕಾರ್ಯಕ್ರಮಕ್ಕೆ ಸಹಕಾರ ನೀಡಿದ ಶ್ರೀ ಶ್ರೀನಿವಾಸ ಜಿ. ಕಪ್ಪಣ್ಣ ಅವರು ಸಾಂಸ್ಕೃತಿಕ ಬಾಗಿನದ ಬಗ್ಗೆ ತಿಳಿಸಿ ಹೇಳುತ್ತ, ವಿಠ್ಠಲಮೂರ್ತಿಯವರಿಗೆ ಹಮ್ಮಿಕೊಂಡಿರುವ ಈ ಸಾಂಸ್ಕೃತಿಕ ಬಾಗಿನ ಕಾರ್ಯಕ್ರಮವು ಅವರ ಸೇವಾವಧಿಯಲ್ಲಿ ಕನ್ನಡದ, ಕನ್ನಡ ಸಂಸ್ಕೃತಿಗೆ ಸಲ್ಲಿಸಿರುವ ಸೇವೆಗಾಗಿ ಎಂದರು. ಕರ್ನಾಟಕದಾದ್ಯಂತ




ಚಿತ್ರ ಕಲಾ ಶಿಬಿರದ ಉದ್ಘಾಟನೆ

ಮನೆಮಾತಾಗಿರುವ 'ನಿತ್ಯೋತ್ಸವ' ಕಾರ್ಯಕ್ರಮವನ್ನು ಮೊಟ್ಟ ಮೊದಲ ಬಾರಿಗೆ ಪ್ರಾರಂಭಿಸಿದ ಹೆಗ್ಗಳಿಕೆ ವಿಠ್ಠಲಮೂರ್ತಿಯವರದ್ದು ಎಂದು ಸ್ಮರಿಸುತ್ತಾ ಅವರ ಕನ್ನಡ ನಾಡು, ನುಡಿ, ಸಂಸ್ಕೃತಿಯ ಅಭಿಮಾನ ಎಂದಿಗೂ ಅವಿಸ್ಮರಣೀಯ, ಪ್ರಶಂಸನೀಯ ಹಾಗೂ ಅನುಕರಣೀಯ ಎಂದರು. ಸಂಘದ ಹಿರಿಯರಾದ ಶ್ರೀ ಎನ್.ಜೆ. ಕಾಮತ್ ಅವರು ಕರ್ನಾಟಕದ ಕಲೆ, ಸಾಹಿತ್ಯ, ಸಂಸ್ಕೃತಿಯ ಬಗ್ಗೆ ಹಿಂದಿನ ತಲೆಮಾರಿನಿಂದ ಈಗಿನವರೆಗಿನ ಕನ್ನಡತನವನ್ನು ಎತ್ತಿಹಿಡಿದಿರುವ ಕಲಾವಿದರು, ಸಾಹಿತಿಗಳು, ಕವಿಗಳು, ಲೇಖಕರು, ಕ್ರೀಡಾಪಟುಗಳು, ವೀರ ಕಲಿಗಳ ಬಗ್ಗೆ ತಿಳಿಸುತ್ತಾ ವಿಠ್ಠಲಮೂರ್ತಿಯವರು ಕನ್ನಡಕ್ಕೆ ಸಲ್ಲಿಸಿರುವ ಸೇವೆಯ ಬಗ್ಗೆ ತಿಳಿಸಿದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಡಾ. ಪುರುಷೋತ್ತಮ ಬಿಳಿಮಲೆ ಅವರು ಕನ್ನಡದ ಕಾದಂಬರಿಗಳು ಬೆಳೆದು ಬಂದ ಬಗ್ಗೆ ತಿಳಿಸುತ್ತ ವಿಠ್ಠಲಮೂರ್ತಿಯವರಂತಹ ಕನ್ನಡಾಭಿಮಾನಿ ಅಧಿಕಾರಿಗಳು ಕನ್ನಡ ಸಾಹಿತ್ಯ, ಸಂಸ್ಕೃತಿ, ಕಲೆಗೆ ತಮ್ಮ ಸಹಾಯ ಹಸ್ತ ನೀಡುತ್ತ ಹಲವಾರು ಅತ್ಯುತ್ತಮ ಕನ್ನಡ ಕಾರ್ಯಕ್ರಮಗಳಿಗೆ ಚಾಲನೆ ನೀಡಿದ್ದಾರೆ. ನಾಡಿನಲ್ಲಲ್ಲದೇ ಹೊರರಾಜ್ಯಗಳಲ್ಲೂ ಕೂಡ ಕನ್ನಡ ಕಾರ್ಯಕ್ರಮಗಳು ಜನ ಮೆಚ್ಚುಗೆ ಪಡೆಯುವಂತೆ ಮಾಡಿದ ವಿಠ್ಠಲಮೂರ್ತಿಯವರು ಅಭಿನಂದನಾರ್ಹರು ಎಂದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀಮತಿ ಧನಲಕ್ಷ್ಮಿ ಐ.ಎ.ಎಸ್., (ಕನ್ನಡದಲ್ಲಿ ಐ.ಎ.ಎಸ್.) ಅವರು "ವಿಠ್ಠಲಮೂರ್ತಿಯವರಂತಹ ಹಿರಿಯ ಜನಪ್ರಿಯ ಅಧಿಕಾರಿಯವರ ಜೊತೆ ವೇದಿಕೆ ಮೇಲಿರುವುದು ನನ್ನ ಭಾಗ್ಯ ಎಂದು ಭಾವಿಸುತ್ತೇನೆ. ಅವರು ಮಾಡಿರುವ ಕೆಲಸ ಕಾರ್ಯಗಳ ಬಗ್ಗೆ ತಿಳಿಯುವಾಗ ಬಹಳ ಸಂತೋಷವಾಯಿತು. ನಾನು ಐ.ಎ.ಎಸ್. ತರಬೇತಿಗೆ ಬಂದಾಗ ದೆಹಲಿ ಕರ್ನಾಟಕ ಸಂಘದಲ್ಲಿಯೇ ಉಳಿದಿದ್ದೆ. ನನಗೆ ಮನೆಯಂತೆಯೇ ಇತ್ತು. ಹೇಳುವುದಾದರೆ ಒಂದು ರೀತಿಯಲ್ಲಿ ನನ್ನ ತವರು ಮನೆಯಂತೆಯೇ" ಎಂದು ಸಂತೋಷ ವ್ಯಕ್ತಪಡಿಸಿದರು. ದೆಹಲಿಯ ಹಿರಿಯ ಕಲಾವಿದ ಶ್ರೀ ಭೀಮರಾವ್ ಮುರಗೋಡ ಅವರು ಚಿತ್ರಕಲಾ ಶಿಬಿರವನ್ನು ಉದ್ಘಾಟಿಸಿದರು. ಸ್ಥಳೀಯ ಕಲಾವಿದರಲ್ಲದೆ ಕರ್ನಾಟಕದಿಂದ ಬಂದಿದ್ದ ಕಲಾವಿದರುಗಳೂ ಭಾಗವಹಿಸಿದ್ದರು. ಸುಭಾಷ್ ಕಮ್ಮಾರ ಅವರು ಕಲಾವಿದರ ಪರಿಚಯ ಮಾಡಿದರು. ಬಂದಿದ್ದ ಅತಿಥಿಗಳೆಲ್ಲಾ ತಮ್ಮ ಹಸ್ತಾಕ್ಷರವನ್ನು ಹಾಕುವುದರ ಮೂಲಕ ಉದ್ಘಾಟಿಸಿದರು. ಬಂದಿದ್ದ ಅತಿಥಿಗಳಿಗೆ ಮತ್ತು ಭಾಗವಹಿಸಿದ್ದ ಕಲಾವಿದರುಗಳಿಗೆ ಪುಷ್ಪಗುಚ್ಛ ನೀಡಿ ಗೌರವಿಸಲಾಯಿತು. ಕಾರ್ಯದರ್ಶಿ ಸಿ.ಎಂ. ನಾಗರಾಜ ಅವರು ವಂದನಾರ್ಪಣೆ ಮಾಡಿದರು. ಸಖಾರಾಮ ಉಪ್ಪೂರು ಅವರು ಕಾರ್ಯಕ್ರಮವನ್ನು ನಿರೂಪಿಸಿದರು. ಸುಧೀರ್ ಫಡ್ನೀಸ್, ಗೌರಿ ಹುರ್‌ಕಡ್ಲಿ, ಬಿ.ಎಸ್.ದೇಸಾಯಿ, ಕಿಶೋರ್ ಕುಮಾರ್, ಬಾಬುರಾವ್ ನಾಡೋಣಿ, ಸುಭಾಷ್ ಕಮ್ಮಾರ್, ಎಸ್. ವಿಷ್ಣುಕುಮಾರ್, ಮಂಜು ಹಾಸನ್, ಎಚ್. ಮಂಜುನಾಥ್, ಲಕ್ಷ್ಮಣ, ಮಂಜುನಾಥ್ ಹೊನ್ನಾಪುರ, ಸಂತೋಷ್ ಅಂಬಾರ್‌ಕರ್, ಶ್ರೀ ಕೃಷ್ಣ ರಾಯಚೂರು ಅವರು ಸ್ಥಳದಲ್ಲಿಯೇ ಕ್ಯಾನ್‌ವಾಸ್ ಮೇಲೆ ಎರಡು ದಿನ ಚಿತ್ರವನ್ನು ಬಿಡಿಸಿ, ಕಲೆಯ ಬಗ್ಗೆ ಎಲ್ಲರಿಗೂ ಆಸಕ್ತಿ ಮೂಡುವಂತೆ ಪ್ರೇರೇಪಿಸಿದರು ಹಾಗು ಹೊಸ ಮಾದರಿಯ ಚಿತ್ರಗಳ ಅರ್ಥ, ಉದ್ದೇಶ ಭಾವನೆಗಳನ್ನು ವಿವರಿಸಿದರು. ಮನೆಯಲ್ಲಿ ಚಿತ್ರ ಬಿಡಿಸಿದರೆ 4–8 ದಿನಗಳ ಅವಧಿ ತೆಗೆದುಕೊಳ್ಳುವ ಶ್ರೇಷ್ಠ ಕಲಾಕಾರರು ದೆಹಲಿ ಕರ್ನಾಟಕ ಸಂಘಕ್ಕೆ ಬಂದು ಕೇವಲ ಎರಡು ದಿನಗಳಲ್ಲಿ ಕೆಲವೇ ಗಂಟೆಗಳನ್ನು ಉಪಯೋಗಿಸಿ, ಸ್ಥಳದಲ್ಲೇ ಚಿತ್ರಗಳನ್ನು ಸಿದ್ಧಪಡಿಸಿದರು. ಕಲಾವಿದರು ಪರಿಸರ, ಗ್ರಾಮೀಣ ಬದುಕು, ಗ್ರಾಮೀಣ ಕಲೆ, ನಗರದ ಯಾಂತ್ರಿಕ ಬದುಕು, ಪ್ರಕೃತಿ ಮೊದಲಾದ ದಿನ ನಿತ್ಯದ ಬದುಕಿನ ಹತ್ತು ಹಲವು ಮುಖಗಳನ್ನು ಅತ್ಯಂತ ಅರ್ಥಪೂರ್ಣವಾಗಿ ಕುಂಚದ ಮೂಲಕ ಅಭಿವ್ಯಕ್ತಿಸಿ ಪ್ರಶಂಸೆಗೆ ಪಾತ್ರರಾದರು.

■ ಎಸ್.ಸಿ. ಹೇಮಲತಾ





ಸಮಾರಂಭದಲ್ಲಿ ಪಾಲ್ಗೊಂಡ ಮುಖ್ಯ ಅತಿಥಿಗಳು

# ಸಂಸ್ಕೃತಿ-ಕಲೆಗಳ (ಸಾ
# ಐ.ಎಂ. ವಿಠಲಮೂರ್ತಿ ಅ



ಮೂರು ದಶಕಗಳಿಗೂ ಹೆಚ್ಚು ಕಾಲ ಐ.ಎ.ಎಸ್. ಅಧಿಕಾರಿಯಗಿ ಕರ್ನಾಟಕ ಸರ್ಕಾರದಲ್ಲಿ ಸೇವೆ ಸಲ್ಲಿಸಿದ ಐ.ಎಂ.ವಿಠಲಮೂರ್ತಿ ಅವರನ್ನು ಸೆಪ್ಟಂಬರ್ 4 ರಂದು, ದೆಹಲಿ ಕರ್ನಾಟಕ ಸಂಘದಲ್ಲಿ ಹಮ್ಮಿಕೊಂಡಿದ್ದ ಸಂಸ್ಕೃತಿ ಬಾಗಿನ ಕಾರ್ಯಕ್ರಮದಲ್ಲಿ ಆತ್ಮೀಯವಾಗಿ ಅಭಿನಂದಿಸಲಾಯಿತು. ಕಾರ್ಯಕ್ರಮದ ಆರಂಭದಲ್ಲಿ ಅವರ ಆಡಳಿತಾವಧಿಯಲ್ಲಿ ಗುರುತರವಾದ ಹೊಣೆಯನ್ನು ಸಮರ್ಥವಾಗಿ ನಿರ್ವಹಿಸಿದ ವಿಶ್ವ ಕನ್ನಡ ಸಮ್ಮೇಳನದ ಸಾಕ್ಷ್ಯಚಿತ್ರವನ್ನು ಪ್ರದರ್ಶಿಸಲಾಯಿತು. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಸ್ವಾಗತಿಸುತ್ತ, ಐ.ಎಂ.ವಿಠಲಮೂರ್ತಿ ಅವರ ಕಲೆ ಮತ್ತು ಸಂಸ್ಕೃತಿ ಜೊತೆಗಿನ ಸುದೀರ್ಘ ಒಡನಾಟ. ವಿಶ್ವಕನ್ನಡ ಸಮ್ಮೇಳನವನ್ನು ಆಯೋಜಿಸಿ ಅದನ್ನು ಖ್ಯಾತಿಗೊಳಿಸಿದ ಹೆಗ್ಗಳಿಕೆಯನ್ನು ನೆನೆಸಿಕೊಳ್ಳುತ್ತ ಆಡಳಿತ ಸೇವೆಯಿಂದ ನಿವೃತ್ತರಾದ ವಿಠಲಮೂರ್ತಿ ಅವರನ್ನು ಕರೆಸಿಕೊಳ್ಳುವುದರ ಮೂಲಕ ವಿಶ್ವ ಕನ್ನಡ ಸಮ್ಮೇಳನವನ್ನೇ ದೆಹಲಿಗೆ ತಂದುಕೊಂಡಂತಾಗಿದೆ ಎಂದು ನುಡಿದು, ಸಭೆಯಲ್ಲಿ ನೆರೆದ ಗಣ್ಯರನ್ನು ಹಾರ್ದಿಕವಾಗಿ ಸ್ವಾಗತಿಸಿದರು.

ನಂತರ ಕಲಾವಿದೆ ಪ್ರತಿಭಾ ಪ್ರಹ್ಲಾದ್ ಅವರು ವಿಠಲಮೂರ್ತಿ ಅವರೊಂದಿಗಿನ ಇಪ್ಪತ್ತೈದು ವರ್ಷಗಳ ತಮ್ಮ ಆಪ್ತತೆ, ಸ್ನೇಹವನ್ನು ಮೆಲುಕು ಹಾಕುತ್ತ. ಕರ್ನಾಟಕದ ಶ್ರೀಮಂತ ಕಲಾ ಪರಂಪರೆಯನ್ನು ಇನ್ನಷ್ಟು ಶ್ರೀಮಂತಗೊಳಿಸಿದವರು ಯಾರಾದರೂ ಇದ್ದರೆ ಅದು ವಿಠಲಮೂರ್ತಿ ಎಂದು ಹೆಮ್ಮೆಯಿಂದ ಅಭಿನಂದಿಸಿದರು.

ರಾಜ್ಯ ಸಭಾ ಸದಸ್ಯೆ, ಖ್ಯಾತ ರಂಗಭೂಮಿ ಕಲಾವಿದೆ ಬಿ. ಜಯಶ್ರೀ ಅವರು ಕಲೆ ಮತ್ತು ಸಂಸ್ಕೃತಿಯನ್ನು ಬೆಳೆಸಿದ ವಿಠಲಮೂರ್ತಿ ಅವರು ಯಾಕೋ ರಂಗಭೂಮಿಗೆ ಮನಸ್ಸು ಕೊಡಲಿಲ್ಲ ಎನಿಸುತ್ತದೆ ಎಂದರು. ವಿಠಲಮೂರ್ತಿ ಅವರು ಕಾರಂತರ ಹಾಡುಗಳನ್ನು ಬೆನಕ ತಂಡದಿಂದ ಹಾಡಿಸಿದ್ದು. ಹವ್ಯಾಸಿ ಮತ್ತು ವೃತ್ತಿ ರಂಗಭೂಮಿಯ ಹಾಡುಗಳನ್ನು ಸಿ.ಡಿ. ರೂಪದಲ್ಲಿ ತಂದುದನ್ನು ಸ್ಮರಿಸಿಕೊಳ್ಳುತ್ತ–"ಸರ್, ತಾವು ಸರಕಾರದಿಂದ ಹೊರಗಿದ್ದರೂ ಕಲಾವಿದರನ್ನು ಮುಂದೆಯೂ ಕೈಹಿಡಿದು ನಡೆಸಿ" ಎಂಬ ಕಳಕಳಿಯ ಮಾತುಗಳಿಂದ ಅಭಿನಂದಿಸಿದರು.

ಖ್ಯಾತ ರಂಗಭೂಮಿ ನಿರ್ದೇಶಕ ಕಪ್ಪಣ್ಣ ಅವರು ವಿಠಲಮೂರ್ತಿ ಅವರೊಡನೆ ತಮ್ಮ ಒಡನಾಟ, ಅವರು ಅನೇಕ ಕಾರ್ಯಕ್ರಮಗಳನ್ನು ಆಯೋಜಿಸಿ ನಡೆಸುತ್ತಿದ್ದ ರೀತಿ. ಕಲಾವಿದರನ್ನು ಮಕ್ಕಳಂತೆ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದ ಬಗೆಯನ್ನು ಎಲ್ಲರೊಂದಿಗೆ ಹಂಚಿಕೊಂಡರು. ಅವರು ತಮ್ಮ ಆಡಳಿತಾವಧಿಯಲ್ಲಿ ಕಲಾವಿದರ ಸಂಭಾವನೆಯನ್ನು ಹೆಚ್ಚಳಗೊಳಿಸಿದರು. ವಿನಾಶದ ಹಂತದಲ್ಲಿದ್ದ 125 ಜಾನಪದ ಕಲಾ ಪ್ರಕಾರಗಳನ್ನು ಬೆಳಕಿಗೆ ತಂದು ತುಮಕೂರಿನ 650 ಸರಕಾರಿ ಶಾಲಾ ಮಕ್ಕಳಿಗೆ ತರಬೇತಿ ನೀಡಿ ಅವರಿಗೆ ಚಪ್ಪಲಿಯಿಂದ ಡ್ರೆಸ್ ವರೆಗೂ ಸೌಕರ್ಯ ಒದಗಿಸಿ ವಿಧಾನಸೌಧದ ಮೆಟ್ಟಲಿನ ಮೇಲೆ ಭರ್ಜರಿ "ಜಾನಪದ ಜಾತ್ರೆ" ನಡೆಸಿದ ಹೆಗ್ಗಳಿಕೆಯನ್ನು ಸ್ಮರಿಸಿದರು. ಕಾರ್ಯಕ್ರಮ ಆಯೋಜನೆಗೆ ಸಹಕರಿಸಿದ ಸಂಘದ ಮಾಜಿ ಉಪಾಧ್ಯಕ್ಷ ವಸಂತಶೆಟ್ಟಿ ಬೆಳ್ಳಾರೆ ಅವರು ಮಾತನಾಡುತ್ತ ತಾವು ವಿಠಲಮೂರ್ತಿ ಅವರನ್ನು ಫರೀದಾಬಾದ್ ಕನ್ನಡ ಸಂಘ ಆಯೋಜಿಸಿದ್ದ 'ಸ್ವಾಗತ–ಸುಸ್ವಾಗತ' ಕಾರ್ಯಕ್ರಮದಲ್ಲಿ ಭೇಟ್ಟಿಯಾಗಿದ್ದು, ನಂತರ ಅವರ ನಿರಂತರ ಸಾಂಸ್ಕೃತಿಕ ಯಾತ್ರೆ ಕುರಿತು ವಿವರಿಸಿದರು.



◀ ಸುವರ್ಣ ಕರ್ನಾಟಕ ನೃತ್ಯರೂಪಕ

ನಂತರ ಮೂರು ದಶಕಗಳಿಂದಲೂ ಕನ್ನಡದ ಸಂಸ್ಕೃತಿ ಮತ್ತು ಜನಪದ ಉಳಿವಿಗಾಗಿ ಶ್ರಮಿಸಿದ ಐ.ಎಂ.ವಿಠಲಮೂರ್ತಿ ದಂಪತಿಗಳಿಗೆ ಮಹಿಳೆಯರು ಸಾಂಪ್ರದಾಯಿಕವಾಗಿ ಸಾಂಸ್ಕೃತಿಕ ಬಾಗಿನ ಅರ್ಪಿಸಿ ಅಭಿನಂದಿಸಿದರು. ಸನ್ಮಾನ ಸ್ವೀಕರಿಸಿದ ಐ.ಎಂ. ವಿಠಲಮೂರ್ತಿ ಅವರು ಮಾತನಾಡುತ್ತ ಮೊದಲಿಗೆ ಕಪ್ಪಣ್ಣನವರಲ್ಲಿ 'ಇನ್ನು ಮುಂದೆ ಈ ರೀತಿ ಯಾವ ಸನ್ಮಾನ ಕಾರ್ಯಕ್ರಮವನ್ನು ಮಾಡಕೂಡದು' ಎಂದು ವಿನಂತಿಸಿಕೊಂಡರು. ಸರ್ಕಾರಿ ಅಧಿಕಾರಿಯಾಗಿ



ಶರಣು ಜನಪದಕೆ ನೃತ್ಯರೂಪಕ

# ...ಂಸ್ಕೃತಿಕ) ರಾಯಭಾರಿ ...ವರಿಗೆ 'ಸಂಸ್ಕೃತಿ ಬಾಗಿನ'



ಸೇವೆ ಸಲ್ಲಿಸಿದ್ದು ನನ್ನ ಕರ್ತವ್ಯ. ಅದಕ್ಕಾಗಿ ಯಾರೂ ಕೂಡ ಸನ್ಮಾನ ಮಾಡಬೇಕಾಗಿಲ್ಲ. ಸನ್ಮಾನ-ಪ್ರಶಸ್ತಿಗಳು ಮುಜುಗರ ತರುತ್ತವೆ. ಈಗ ಯಾರು ಬೇಕಾದರೂ ಖರೀದಿಸಬಹುದಾದ ಪ್ರಶಸ್ತಿಗಳಲ್ಲಿ ಗೌರವ, ನಂಬಿಕೆ ಹೊರಟು ಹೋಗಿದೆ. ಯಾವಾಗ ಬೇಕಾದರೂ ಕರೆಯಿರಿ, ಬಂದು ಕಾರ್ಯಕ್ರಮವನ್ನು ನೋಡಿ ಆನಂದಿಸುತ್ತೇನೆ. ಯಾಕೆಂದರೆ ನಾನು ಸಾಹಿತಿ-ಕಲಾವಿದರೊಡನೆ ಜೀವನ ಮಾಡಿದವನು. ನನ್ನೊಬ್ಬನದೇ ಏನೂ ಇಲ್ಲ" ಎಂದು ಮುಕ್ತವಾಗಿ ತಮ್ಮ ಅನಿಸಿಕೆಯನ್ನು ಹಂಚಿಕೊಂಡರು.

ಕನ್ನಡ ಸಂಸ್ಕೃತಿ ಇಲಾಖೆಯ ಹೆಚ್ಚುವರಿ ನಿರ್ದೇಶಕರಾಗಿ ಕೆಲಸ ಮಾಡಿದ್ದರಿಂದ ಹಿಡಿದು ಬೆಳಗಾವಿಯ ವಿಶ್ವ ಕನ್ನಡ ಸಮ್ಮೇಳನದ ವಿಶೇಷ ಅಧಿಕಾರಿಯಾಗಿ ಕೆಲಸ ಮಾಡಿದ ಸಿಹಿ-ಕಹಿ ನೆನಪುಗಳನ್ನು ವಿಠಲಮೂರ್ತಿ ಅವರು ತೆರೆದಿಟ್ಟರು. ತಮ್ಮ ತಂದೆ ಮಲ್ಲಯ್ಯ ಗೌಡರನ್ನು ನೆನಪಿಸಿಕೊಂಡ ಅವರು ತಾವು



ನಿತ್ಯೋತ್ಸವ -ಸುಗಮ ಸಂಗೀತ




ಬಿ. ಜಯಶ್ರೀ ಮತ್ತು ತಂಡದಿಂದ ರಂಗಗೀತೆಗಳು

ಕೂಲಿಮಠದಲ್ಲಿ ಓದಿ ಈ ಮಟ್ಟಕ್ಕೆ ಬೆಳೆಯಲು ತನ್ನ ತಂದೆ ಕಲಿಸಿದ ಶಿಸ್ತು ಮತ್ತು ಆದರ್ಶಗಳೇ ಕಾರಣ ಎಂದು ಭಾವಪರವಶರಾಗಿ ನೆನೆದರು. ಮಾಸ್ತಿ, ಡಾ. ರಾಜ್‌ಕುಮಾರ್, ಹಾ.ಮಾ.ನಾಯಕ್, ಗಿರೀಶ್ ಕಾಸರವಳ್ಳಿ, ರಾಮಕೃಷ್ಣ ಹೆಗಡೆ, ದೇವರಾಜ್ ಅರಸ್, ಗುಂಡೂರಾವ್, ಬಂಗಾರಪ್ಪ, ಮುಂತಾದವರ ಜೊತೆಗಿನ ಒಡನಾಟ ಸವಿನೆನಪುಗಳನ್ನು ಮೆಲುಕು ಹಾಕುತ್ತ, ಮಾಸ್ತಿ ಅವರಿಗೆ ಜ್ಞಾನಪೀಠ ಪ್ರಶಸ್ತಿ ಬಂದಾಗ ಅವರು ಚಾಕಲೇಟ್ ಕೊಟ್ಟಿದ್ದು, ವಿಮಾನದಲ್ಲಿ ಡಾ.ರಾಜ್ ಜತೆ ಕುಳಿತಿದ್ದಾಗ 'ತೆರೆಯ ಮೇಲೆ ಒಳ್ಳೇ ಪಾತ್ರ ಮಾಡುವ ತಾವು ಒಳ್ಳೆ ವ್ಯಕ್ತಿಯೇ' ಎಂದು ಪ್ರಶ್ನೆ ಕೇಳಿ ರಾಜ್ ಅವರನ್ನು ತಬ್ಬಿಬ್ಬುಮಾಡಿದ್ದು, ರಾಜ್ ಕುಮಾರ್ ಅವರು 'ಹೌದಯ್ಯ-ಒಳ್ಳೆ ಪಾತ್ರಗಳನ್ನು ಮಾಡೋದು ಸುಲಭ, ಆದರೆ ನಿಜ ಜೀವನದಲ್ಲಿ ಒಳ್ಳೆಯವರಾಗಿರೋದು ತುಂಬಾ ಕಷ್ಟದ್ದು' ಎಂದು ಹೇಳಿದ್ದು, ಹೀಗೆ ಅನೇಕ ನೆನಪುಗಳನ್ನು ಹಂಚಿಕೊಂಡ ವಿಠಲಮೂರ್ತಿ ಅವರು ಈ ದೇಶಕ್ಕೆ ಎಲ್ಲ ರಂಗಗಳಲ್ಲೂ ಅಗ್ರಗಣ್ಯ ನಾಯಕರನ್ನು ಕೊಟ್ಟ ರಾಜ್ಯ ನಮ್ಮದು. ಕಳೆದ ಐದಾರು ವರ್ಷಗಳಿಂದ ನಮ್ಮ ರಾಜಕೀಯ ನಾಯಕತ್ವ ದಿಶಾರಹಿತವಾಗಿದೆ ಎಂದು ಖಾರವಾಗಿ ನುಡಿದರು.

ಅಧ್ಯಕ್ಷತೆ ವಹಿಸಿದ್ದ ಪ್ರಧಾನ ಮಂತ್ರಿಗಳ ಮಾಜಿ ವಾರ್ತಾ ಸಲಹೆಗಾರ ಹಾಗೂ ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷರಾದ ಹಿರಿಯ ದೆಹಲಿ ಕನ್ನಡಿಗ ಐ. ರಾಮಮೋಹನ ರಾವ್ ಒಬ್ಬ ಅಧಿಕಾರಿಗೆ ನಿವೃತ್ತಿಯಾದ ನಂತರ ಸಿಗುತ್ತಿರುವ ಸನ್ಮಾನ ನಿಜಕ್ಕೂ ಅಪರೂಪದ್ದು ಎಂದು ಸಂತಸ ವ್ಯಕ್ತಪಡಿಸಿದರು. ಸಾಂಸ್ಕೃತಿಕ ಬಾಗಿನ ಕಾರ್ಯಕ್ರಮದಲ್ಲಿ ಡಾ. ಮಾಯಾ ರಾವ್ ನಾಟ್ಯ ಇನ್‌ಸ್ಟಿಟ್ಯೂಟ್ ಆಫ್ ಕೊರಿಯೋಗ್ರಫಿ ಅವರಿಂದ ಸುವರ್ಣ ಕರ್ನಾಟಕ ನೃತ್ಯರೂಪಕ ಪ್ರದರ್ಶಿಸಿತು. ನಿತ್ಯೋತ್ಸವ-ಸುಗಮ ಸಂಗೀತ ತಂಡ ನಡೆಸಿಕೊಟ್ಟ ನಿತ್ಯೋತ್ಸವ ಗೀತೆಗಳ ಕಾರ್ಯಕ್ರಮ ಪ್ರೇಕ್ಷಕರ ಮನಸೂರೆಗೊಂಡಿತು. 'ಭ್ರಮರಿ' ಬೆಂಗಳೂರು, ಸ್ನೇಹ ನಿರ್ದೇಶನದ ಶರಣು ಜನಪದಕೆ ಕಾರ್ಯಕ್ರಮದಲ್ಲಿ ಸೋಲಿಗರ ಕುಣಿತ, ಲಂಬಾಣಿ ಕುಣಿತ, ಸುಗ್ಗಿ ಕುಣಿತ, ತರ್ಲೆ ಬರ್ಲೆ, ಭೂತಾರಾಧನೆ, ಕಂಸಾಳೆ, ಡೊಳ್ಳು ಕುಣಿತ, ಜೋಗತಿ ನೃತ್ಯ, ಹಳ್ಳಿ ಮದುವೆ ಮುಂತಾದ 15ಕ್ಕೂ ಹೆಚ್ಚು ಜಾನಪದ ಪ್ರಾಕಾರಗಳನ್ನು ಭ್ರಮರಿ ತಂಡದ ಯುವಕ-ಯುವತಿಯರು ಅದ್ಭುತವಾಗಿ ಪ್ರದರ್ಶಿಸಿದರು.

ರಾಜ್ಯಸಭಾ ಸದಸ್ಯೆ ಬಿ.ಜಯಶ್ರೀ ಹಾಡಿದ ಕೆಲ ರಂಗಗೀತೆಗಳ ಮೋಡಿಗೆ ಪ್ರೇಕ್ಷಕರು ಮಂತ್ರ ಮುಗ್ಧರಾದರು. ಪ್ರೇಕ್ಷಕರ ಕೋರಿಕೆಯ ಗೀತೆಯನ್ನು ಜಯಶ್ರೀ ತಂಡ ಹಾಡಿ ಅಭಿಮಾನಿಗಳನ್ನು ರಂಜಿಸಿದರು. ಒಟ್ಟಾರೆ ಕಪ್ಪಣ್ಣ ಆಯೋಜಿಸಿ ನಡೆಸಿದ 'ಸಂಸ್ಕೃತಿ ಬಾಗಿನ' ಕಾರ್ಯಕ್ರಮ ದೆಹಲಿ ಕನ್ನಡಿಗರ ವಾರಾಂತ್ಯಕ್ಕೆ ರಸದೌತಣವಾಯಿತು. ಕಾರ್ಯಕ್ರಮವನ್ನು ಸಾಂಸ್ಕೃತಿಕ ಸಮಿತಿಯ ಅಧ್ಯಕ್ಷ, ಸಖಾರಾಮ ಉಪ್ಪೂರು ಮತ್ತು ಬೆಂಗಳೂರಿನ ಸುಷ್ಮಾರಘು ನಿರ್ವಹಿಸಿದರು. ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ವಂದಿಸಿದರು.

**■ ರೇಣುಕಾ ನಿಡಗುಂದಿ**

ಶರಣು ಜನಪದಕೆ ನೃತ್ಯರೂಪಕ ▶



# ‘ಗಾಂಧಿ ಬಂದ’ ನಾಟಕ

ಸೆಪ್ಟಂಬರ್ 3ರ ಸಂಜೆ ಬೆಂಗಳೂರಿನ ರಂಗಮಂಟಪ ತಂಡದವರಿಂದ ‘ಗಾಂಧಿ ಬಂದ’ ನಾಟಕ ಪ್ರದರ್ಶನ ನಡೆಯಿತು. ಡಾ. ನಾಗವೇಣಿಯವರ ಮೂಲ ಕೃತಿ ಆಧಾರಿತ ಈ ನಾಟಕವನ್ನು ಸಂಯೋಜಿಸಿ, ನಿರ್ದೇಶಿಸಿದವರು ಚಂಪಾಶೆಟ್ಟಿ. ಒಂದು ಅತ್ಯಂತ ಸಂವೇದನಾಶೀಲ ವಸ್ತುವನ್ನೊಳಗೊಂಡ ಸಾಮಾಜಿಕ ನಾಟಕವನ್ನು ಸ್ವಾತಂತ್ರಪೂರ್ವ ಭಾರತದ ಹಳ್ಳಿಯ ಸುಂದರ ವಾತಾವರಣದಲ್ಲಿ ಸೃಷ್ಟಿಸಲಾಗಿತ್ತು. ದಕ್ಷಿಣ ಕನ್ನಡ ಜಿಲ್ಲೆಯ ಕಂಬಳ, ಭೂತಕೋಲ, ತೆಂಗಿನಕಾಯಿ ಜೂಜಾಟ ಹೀಗೆ ಇನ್ನು ಮುಂತಾದ ಸುಂದರ ದೃಶ್ಯಗಳಿಂದ ಕೂಡಿದ ನಾಟಕ ಗ್ರಾಮದ ಪಟೇಲ ಹೆಬ್ಬಾರರ ಮುದ್ದಿನ ಮಗಳು ವಿಧವೆ. ಮನೆಯಲ್ಲಿ ಕೆಲಸ ಮಾಡಿಕೊಂಡಿದ್ದ ಮುಸ್ಲಿಂ ಯುವಕನೊಡನೆ ಮರು ಮದುವೆ ಆಗುವ ಸನ್ನಿವೇಶ, ಊರಿನ ಶೆಟ್ಟರು ಆ ಮದುವೆಗೆ ಸಹಕರಿಸುವ ರೀತಿ ಹಾಗೂ ಮುಂದೆ ಹೋಗಿ ಪೋಲಿಸರ ವಿರುದ್ಧದ ಚಳವಳಿಯಲ್ಲಿ ಆ ಮುಸ್ಲಿಂ ಯುವಕ ಸಾವಿಗೀಡಾಗಿ ಹೆಬ್ಬಾರರ ಮಗಳು ಮತ್ತೆ ವಿಧವೆ ಆಗುವ ಸಂದರ್ಭ ನಾಟಕವನ್ನು ಉತ್ತುಂಗಕ್ಕೆ ಕೊಂಡೊಯ್ಯುತ್ತದೆ. ಮತ್ತೆ ಮತ್ತೆ ಬರುವ ಸೂರಕ್ಕೆ, ಅವರ ಕೋಳಿ ಸಾರಿಗಾಗಿ ಕದ್ದು ಮುಚ್ಚಿ ಬರುವ ಪೂಜಾರಿ (ಹೆಬ್ಬಾರರ ಮನೆ ಆಳು), ಹೆಬ್ಬಾರರ ಧರ್ಮ, ಜಾತಿಯ ಆರ್ಭಟ, ತೊಳಲಾಟ ಹಾಗೂ ಕೆಳ ವರ್ಗದ ತನಿಯ, ಕರಿಯರ ಬಾಳು ಅತ್ಯಂತ ನೈಜವಾಗಿ ಮೂಡಿ ಬಂದವು. ಹೆಬ್ಬಾರರ ಮಡದಿ ಹಾಗೂ ಅವರ ಮಡದಿಗೆ ಹೊರತಾಗಿ ನಡೆಯುವ ಹೊರಗಿನ ಸಂಬಂಧ ಹಾಗೂ ಗಾಂಧಿನಿಧಿಗಾಗಿ ಬಂದ ಚಿನ್ನಾಭರಣವನ್ನು ಹೆಬ್ಬಾರರು ದುರುಪಯೋಗಪಡಿಸಿಕೊಳ್ಳುವ ರೀತಿ, ಗಾಂಧಿಯನ್ನು ಸದಾ ಬೈಯುತ್ತಲೇ ಇರುವ ತನ್ನ ಮಗನಿಗೆ ಮದುವೆ ಆಗಿ, ಆತ ಮನೆ, ಗದ್ದೆ-ಬೇಸಾಯದ ಜವಾಬ್ದಾರಿ ಹೊರದೆ-ಗಾಂಧಿ-ಕಾಂಗ್ರೆಸ್ ಅಂತ ಹಗಲಿರುಳು ಅದರಲ್ಲೇ ಮುಳುಗಿ ಹೋಗಿರುವುದರಿಂದ ಬೇಸತ್ತ-ಸೂರಕ್ಕ ನಾಟಕದ ಕೊನೆಗೆ ಗಾಂಧಿಯಿಂದಾಗಿ ವಿಧವೆಗೆ ಮತ್ತೆ ಮುತ್ತೈದೆ ಶೃಂಗಾರವಾದದ್ದು ನೋಡಿ ತಾನೆಂಥಾ ದುರಾದೃಷ್ಟೆ-ಆ ಗಾಂಧಿಯನ್ನು ನೋಡದೇ ಹೋದೆನಲ್ಲಾ-ಓ ಗಾಂಧಿ ನೀ ಮತ್ತೊಮ್ಮೆ ಯಾವಾಗ ಬರುವೆ ಎನ್ನುವ ಆ ಮುಗ್ಧ ಭಾವನೆ ನಾಟಕದ ಕೊನೇ ಮಾತು. ಇತ್ತೀಚೆಗಷ್ಟೇ ಗಾಂಧಿ ಟೋಪಿ ಹಾಕಿಕೊಂಡು ಉಪವಾಸ ಸತ್ಯಾಗ್ರಹ ಹೂಡಿದ ಅಣ್ಣ ಹಜಾರೆಯವರ ಅನುಭವ ದೆಹಲಿಯಲ್ಲಿ ಹಸಿ ಹಸಿಯಾಗಿಯೇ ಇರುವಾಗ ಮೂಡಿ ಬಂದ ಈ ನಾಟಕ ಗಾಂಧಿಯಲ್ಲಿ, ಗಾಂಧೀ ವಾದದಲ್ಲಿ ಮತ್ತೆ ವಿಶ್ವಾಸ ಮೂಡುವಂತೆ ಮಾಡಿತು. ಇದೊಂದು ಅದ್ಭುತ ಪ್ರಯೋಗ.

**▪ ಸಖಾರಾಮ ಉಪ್ಪೂರು**

## ಬವಣೆ ನೀಗಲು ಬರುವನೆ !? . . .

ಭಾರತೀಯರಿಗೆ ‘ಗಾಂಧಿ’ ಹೆಸರಿನ ಮಾಯಾಛಡಿ ಸ್ವಾತಂತ್ರ ಪೂರ್ವದಿಂದ ಇಂದಿನವರೆಗೆ ಸದಾ ಸ್ಫೂರ್ತಿಯ ಸೆಲೆ, ಆಶಾಕಿರಣವಾಗಿ ಈ ಎಲ್ಲ ಬವಣೆಗಳ ಮಧ್ಯ ಮುನ್ನಡೆಸುತ್ತಿದೆ ಎಂದರೆ ಅತಿಶಯೋಕ್ತಿ ಆಗಲಾರದು.

1930 ರಿಂದ 1934ರ ಕಾಲ ಘಟ್ಟದಲ್ಲಿ ದೇಶವ್ಯಾಪಿ ಗಾಂಧೀಜಿಯವರ ಕರನಿರಾಕರಣೆ, ಉಪ್ಪಿನ ಸತ್ಯಾಗ್ರಹಗಳ ಕರೆಗೆ ಓಗೊಟ್ಟು ಪ್ರತಿ ಭಾರತೀಯರ ಸಹಭಾಗಿತ್ವ. ಅದರಂತೆ ಆಗಿನ ಮುಂಬೈ ಕರ್ನಾಟಕದ ಭಾಗವಾದ ದಕ್ಷಿಣ ಕನ್ನಡದ ಜನಮಾನಸದ ಸಹಭಾಗಿತ್ವ ತನು, ಮನ, ಧನದಿಂದ ಯಶಸ್ವಿಯಾಗಿಸಿದ್ದಂತಹ ಸಮಯದ ಒಂದು ಚಿತ್ರಣ ‘ಗಾಂಧಿ ಬಂದ’ ನಾಟಕ.

ಇಡೀ ನಾಟಕದಲ್ಲ ಗಾಂಧಿ ವ್ಯಾಪಿಸಿದ್ದಾರೆ. ಅಂದಿನ ದಿನಗಳ ಆ ಪರಿಸರದ ಜನ ಜೀವನದ ಚಿತ್ರಣ, ‘ಮೇಲು-ಕೀಳು, ಸ್ತ್ರೀ-ಪುರುಷ, ಜಾತಿ-ಸಂಘರ್ಷ ಯಾವುದೇ ಬೇಧಭಾವವಿಲ್ಲದೆ ಜನರು ಒಗ್ಗೂಡಿ ಒಂದು ಚಳುವಳಿಯ ಯಶಸ್ಸಿಗೆ ನಡೆಸಿದ ಹೋರಾಟದ ಯಥಾವತ್ ಚಿತ್ರಣ ಕಟ್ಟಿಕೊಡುವಲ್ಲ ನಾಟಕ ಯಶಸ್ವಿಯಾಗಿದೆ.

ಗಾಂಧೀಜಿಯವರ ಆಶಯಗಳಾದ ಸ್ತ್ರೀ ಸಮಾನತೆ, ಅಸ್ಪೃಶ್ಯತಾ ನಿವಾರಣೆ ಮುಂತಾದ ವಿಷಯಗಳು ಆ ಜನಗಳ ಮನಃಪಟಲದಲ್ಲ ಮೂಡಿಸಿದ ಆಶಾಭಾವ, ಅದಕ್ಕಾಗಿ ಅವರೆಲ್ಲರ ಒಮ್ಮನದ ಹೋರಾಟ. ಈ ಮಧ್ಯೆ ಇಂದಿನಂತೆ ಅಂದೂ ಕೂಡಾ ಸಾಂಪ್ರದಾಯಿಕತೆ, ಸ್ವಾರ್ಥ, ಲಾಲಸೆ, ಅಧಿಕಾರ, ದರ್ಪಗಳು ಸಮಾಜದಲ್ಲ ಹಾಸುಹೊಕ್ಕಾಗಿದ್ದರೂ ಇಂಥಹ ಸ್ಥಿತಿ, ಸಂದರ್ಭಗಳನ್ನು ಜನರು ತಮ್ಮ ದಿನನಿತ್ಯದ ಕಷ್ಟ ಸಂಕೋಲೆಗಳ ಮಧ್ಯ ಮರೆತು ಒಗ್ಗೂಡಿ ಒಟ್ಟಾರೆ ಚಳುವಳಿಯ ಮುಂದುವರಿಕೆಗೆ ಸೆಣಸಾಟ.

ಜನರ ದೈವದ ಮೇಲಣ ನಂಬುಗೆ, ಹೊಟ್ಟೆಪಾಡಿಗಾಗಿ ದಿನನಿತ್ಯದ ದುಡಿಮೆ-ಸಾಮಾಜಿಕ ಸಾಮರಸ್ಯಕ್ಕಾಗಿ ತುಡಿತ. ಗಾಂಧಿ ಎಂಬ ಸ್ಫೂರ್ತಿಯ ದರ್ಶನ ಭಾಗ್ಯಕ್ಕಾಗಿ ಮನಮನಗಳಲ್ಲ ಮೂಡುವ ಕಾತುರ ಸಾಮಾಜಿಕ ಸ್ಥಿತ್ಯಂತರಗಳ ಮಧ್ಯೆ ಗಾಂಧಿ ಎಂಬ ಮಂತ್ರದಂಡದ ಒಟ್ಟು ಸೂತ್ರದಲ್ಲ ಎಲ್ಲ ಮರೆತು, ಬರುವ ಸುದಿನಕ್ಕಾಗಿ ಸ್ವಾತಂತ್ರ್ಯಕ್ಕಾಗಿ ಹೋರಾಟ. ಪ್ರತಿ ಕ್ಷಣ ರಂಗದಲ್ಲ ಬರುವ ದೃಶ್ಯಗಳಂದ ಪ್ರೇಕ್ಷಕ ಕಣ್ಣು ಕೀಲಸದೆ ಸವಿದ, ಈ ನಾಟಕದ ಇಡೀ ತಂಡ ಹಾಗೂ ಇಂಥ ಕ್ಲಿಷ್ಟ ವಿಷಯವನ್ನು ರಂಗಕ್ಕೆ ಅಳವಡಿಸಿ, ಸುಮಾರು 40-45 ಕಲಾವಿದರನ್ನು ಕಲೆ ಹಾಕಿ ನಾಟಕ ನಿರ್ದೇಶಿಸಿದ ಕಲಾವಿದೆ ಶ್ರೀಮತಿ ಚಂಪಾಶೆಟ್ಟಿ ಪ್ರಯತ್ನ ಫಲಕಾರಿಯಾಗಿದೆ. ತುಂಬಾ ದಿನಗಳ ನಂತರ ದೆಹಲ ಕನ್ನಡಿಗರಿಗೆ ಒಂದು ವಿಚಾರ ಪ್ರಚೋದಕ ನಾಟಕ ನೋಡಲು ಸಿಕ್ಕಿದ್ದು-ಇತಿಹಾಸದಲ್ಲ ಮರೆತ ಘಳಗೆಗಳಗೆ ನಮ್ಮನ್ನು ಕೊಂಡೊಯ್ದರು. ಇಂದಿನ ಪೀಳಗೆಗೆ ಅಂದಿನ ಸಮಯದ ಜನರ ಹೋರಾಟ, ತ್ಯಾಗ, ಬಲದಾನಗಳ ಅರಿವು ಮೂಡಿಸಿತು ನಾಟಕ ಗಾಂಧಿ ಬಂದ. ಇಲ್ಲಗೆ ನಾಟಕವೇನೋ ಮುಗಿಯಿತು. ಆದರೆ ಇಂದಿನ ಸ್ಥಿತಿಯಲ್ಲೂ ಮತ್ತೆ ಗಾಂಧಿ ಬರಬೇಕಿದೆ ನಮ್ಮೊಳಗಣ ಕಲ್ಮಶಗಳ ನಿವಾರಣೆಗೆ- ಬರುವನೆ ಗಾಂಧಿ. . . .!?

**▪ ಶಿವಾನಂದ ಇಂಗಳೇಶ್ವರ**



‘ಗಾಂಧಿ ಬಂದ’ ನಾಟಕದಲ್ಲಿ ಭಾಗವಹಿಸಿದ ಕಲಾವಿದರುಗಳು



# ಬಹುಮುಖ ಪ್ರತಿಭೆಯ ದೆಹಲಿ ಕನ್ನಡಿಗ ಎಂ.ಸಿ. ವೆಂಕಟೇಶ್



ವೃತ್ತಿಯಲ್ಲಿ ರಾಷ್ಟ್ರೀಯ ಹೆದ್ದಾರಿಗಳನ್ನು ನಿರ್ಮಿಸುವ ಇಂಜಿನಿಯರ್, ಪ್ರವೃತ್ತಿಯಲ್ಲಿ ಸುಂದರ ಕಲಾಕೃತಿಗಳನ್ನು ಸೃಷ್ಟಿಸುವ ಸೃಜನಶೀಲ ಕಲಾವಿದ! ಕರ್ನಾಟಕದ ಸೊರಬದ ಗುಡಿಗಾರರ ಮನೆತನದಿಂದ ಬಂದಿರುವ ಶ್ರೀ ಎಂ.ಸಿ.ವೆಂಕಟೇಶ್ ಅವರೊಳಗೆ ಹುದುಗಿರುವ ಕಲಾಸಕ್ತಿ ನಿಜಕ್ಕೂ ಅಚ್ಚರಿ ಮೂಡಿಸುತ್ತದೆ. ಗಂಧದ ಮರದಲ್ಲಿ ಒಂದೇ ದಿನದಲ್ಲಿ ಕೆತ್ತಿದ ಗಣೇಶ, ಲಕ್ಷ್ಮೀನಾರಾಯಣ ಮೂರ್ತಿ, ಪಾರ್ಶ್ವನಾಥ ಸ್ವಾಮಿ, ಮೊದಲಾದ ಕಲಾಕೃತಿಗಳು ಅವರ ಕಲಾವಂತಿಕೆಯ ಸಾಕ್ಷಿಗಳಾಗಿವೆ. ಬಹುಶಃ ಹಿರಿಯರ ಮಾರ್ಗದರ್ಶನ ಹಾಗೂ ಪ್ರೋತ್ಸಾಹ ದೊರೆತಿದ್ದರೆ ಹೆಸರಾಂತ ಕಲಾವಿದರಾಗಬಹುದಿದ್ದ ವೆಂಕಟೇಶ್ ಅವರು ಶಿವಮೊಗ್ಗ ಜಿಲ್ಲೆಯ ಸೊರಬದವರು. ದೇಶದಲ್ಲಿಯೇ ಕೇವಲ ಸುಮಾರು 4,000 ಗಂಧದ ಮರದ ಕೆತ್ತನೆ ಕಲಾವಿದರನ್ನೊಳಗೊಂಡ ಖ್ಯಾತಿ ಸೊರಬದ್ದು. ಕನ್ನಡ ಹಾಗೂ ಕೊಂಕಣಿ ಮನೆಮಾತಾಗಿರುವ ಗುಡಿಗಾರರ ಮನೆತನದ ಖ್ಯಾತ ಕಲಾವಿದ ಎಂ.ಜೆ. ಚೌಡಪ್ಪ ಅವರ ದ್ವಿತೀಯ ಪುತ್ರರಾದ ವೆಂಕಟೇಶ್ ಅವರಲ್ಲಿ ಕಲೆ ಹುಟ್ಟಿನಿಂದಲೇ ಬಂದಿತ್ತು. 1904ರಲ್ಲಿ ಅಂದಿನ ಮೈಸೂರು ಅರಮನೆ ಬೆಂಕಿಗೆ ಆಹುತಿಯಾಗಿ, ಪುನರ್‌ನಿರ್ಮಿಸಿದಾಗ ವೆಂಕಟೇಶ್ ಅವರ ಪೂರ್ವಜರು ಆ ನಿರ್ಮಾಣದಲ್ಲಿ ತಮ್ಮ ಕಲಾಕೌಶಲ್ಯವನ್ನು ಮೆರೆದ ಖ್ಯಾತ ಕಲಾವಿದರು. ದುರಾದೃಷ್ಟವಶಾತ್ ತಂದೆಯವರು ತಮ್ಮ ಮಕ್ಕಳಿಗೆ ಈ ಕಲೆಯನ್ನು ಮುಂದುವರಿಸಲು ಪ್ರೋತ್ಸಾಹ ನೀಡಲಿಲ್ಲವಂತೆ. ಡಾಕ್ಟರ್ ಆದ ಇವರ ಅಣ್ಣ ಮತ್ತು ಇಂಜಿನಿಯರ್ ಆದ ಇವರು ಸ್ವತಃ ತಂದೆಯವರನ್ನು ನೋಡಿ ಕಲಿತಿದ್ದಂತೆ! ಮುಂಬೈ ಜೆ.ಜೆ. ಕಲಾಶಾಲೆಯಲ್ಲಿ ಕಲಿತಿದ್ದ ಖ್ಯಾತ ಕಲಾವಿದ, ತಂದೆಯವರ ಶಿಷ್ಯರಾಗಿದ್ದ ಶ್ರೀ ರಾಮಚಂದ್ರಪ್ಪ ಅವರು ವೆಂಕಟೇಶ್ ಅವರ ಶಾಲಾ ದಿನಗಳಲ್ಲಿ ಮಾರ್ಗದರ್ಶನ ನೀಡಿದರ ಫಲವಾಗಿ ಕಲೆಯತ್ತ ಅಭಿರುಚಿ ಬೆಳೆಯಲು ಸಹಕಾರಿಯಾಗಿದ್ದನ್ನು ವೆಂಕಟೇಶ್ ಇಂದಿಗೂ ಮರೆತಿಲ್ಲ. ತಮ್ಮ ಶಾಲಾ ಮತ್ತು ಕಾಲೇಜು ವ್ಯಾಸಂಗದ ದಿನಗಳಲ್ಲಿ ಗಂಧದ ಮರ, ಮಣ್ಣು ಮತ್ತು ಮರದಿಂದ ಸುಂದರ ಮೂರ್ತಿಗಳನ್ನು ಕೆತ್ತುವುದರಲ್ಲಿ ಅಭಿರುಚಿ ಇದ್ದ ವೆಂಕಟೇಶ್ ಅವರು ಮುಂದೆ ನೌಕರಿಯ ಜಂಜಾಟದಲ್ಲಿ ಅಷ್ಟಾಗಿ ಮುಂದುವರಿಸಲು ಸಾಧ್ಯವಾಗಲಿಲ್ಲ. ಆದರೆ, ಈಗಲೂ ಬಿಡುವಿನ ವೇಳೆಯಲ್ಲಿ ತಮ್ಮ ಈ ಹವ್ಯಾಸದಿಂದ ಮನಸ್ಸಿಗೆ ಅತ್ಯಂತ ಸಂತೋಷ, ಶಾಂತಿ ಮತ್ತು ಸಮಾಧಾನ ದೊರೆಯುತ್ತದೆ ಎಂದು ವೆಂಕಟೇಶ್ ಅಭಿಪ್ರಾಯ ಪಡುತ್ತಾರೆ.

ಸೊರಬ ಹಾಗೂ ಮೈಸೂರಿನಲ್ಲಿ ಪದವಿಪೂರ್ವ ವ್ಯಾಸಂಗ ಪಡೆದ ವೆಂಟೇಶ್ ಅವರು 1966ರಲ್ಲಿ ಸುರತ್ಕಲ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಸಿವಿಲ್ ಇಂಜಿನಿಯರ್ ಪದವಿ ಹಾಗೂ 1968ರಲ್ಲಿ ಬೆಂಗಳೂರಿನ ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ಎಂ.ಇ. ಸ್ನಾತಕೋತ್ತರ ಪದವಿ ಪಡೆದರು. 1969ರಲ್ಲಿ ದೆಹಲಿಯ ಕೇಂದ್ರ ರಸ್ತೆ ಸಂಶೋಧನೆ ಇನ್ಸ್‌ಟಿಟ್ಯೂಟ್‌ನ ಸೇವೆಗಾಗಿ ದೆಹಲಿಗೆ ಬಂದರು. ಈ ಸಂಸ್ಥೆಯ 12 ವರ್ಷಗಳ ಸೇವಾವಧಿಯಲ್ಲಿ ಅತ್ಯಂತ ಗುರುತರವಾದ ಹೊಣೆಗಾರಿಕೆಯನ್ನು ಸಮರ್ಥವಾಗಿ ನಿರ್ವಹಿಸಿದ ವೆಂಕಟೇಶ್ ಅವರು ಲಿಬಿಯಾ, ಸೌದಿ ಅರೇಬಿಯಾ ಹಾಗೂ ಜೋರ್ಡಾನ್‌ನಲ್ಲಿ ಸೇವೆ ಸಲ್ಲಿಸಿದ್ದಾರೆ. ಅತ್ಯಾಧುನಿಕ ತಂತ್ರಜ್ಞಾನದ ಅನುಭವ ಪಡೆದ ವೆಂಕಟೇಶ್ ಅವರು ಜೋರ್ಡಾನ್‌ನ 180 ಕಿ.ಮೀ. ಸಿಮೆಂಟ್ ಮತ್ತು ಕಾಂಕ್ರೀಟ್ ಹೆದ್ದಾರಿ ಯೋಜನೆಯಲ್ಲಿ ಸಲಿಸಿದ ಅತ್ಯುತ್ತಮ ಸೇವೆಗಾಗಿ ಪ್ರಶಂಸೆ ಗಳಿಸಿದ್ದಾರೆ.

1991ರಲ್ಲಿ ಭಾರತಕ್ಕೆ ಹಿಂದಿರುಗಿದ ವೆಂಕಟೇಶ್ ಅವರು ದೇಶದ ಪ್ರತಿಷ್ಠಿತ ಹೆದ್ದಾರಿ ಇಂಜಿನಿಯರ್ ಡಾ. ಲಕ್ಷ್ಮೀಪತಿ ಆರ್. ಕಡಿಯಾಳ ಅವರ ಜೊತೆಗೂಡಿ ದೇಶದಾದ್ಯಂತ ಹಲವಾರು ಪ್ರತಿಷ್ಠಿತ ಹೆದ್ದಾರಿ ರೂಪಿಸುವ ಯೋಜನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಬೆಂಗಳೂರು-ದೇವನಹಳ್ಳಿ (ವಿಮಾನ ನಿಲ್ದಾಣ ರಸ್ತೆ) ತುಮಕೂರು-ರಾಣೀಬೆನ್ನೂರು, ಹುಬ್ಬಳ್ಳಿ-ಧಾರವಾಡ, ಬೆಂಗಳೂರು-ಮುಳಬಾಗಿಲು 4 ಕಿರುದಾರಿಗಳ ರಸ್ತೆ ಯೋಜನೆಗಳು, ಬೆಳಗಾಂ ಬೈಪಾಸ್ ರಸ್ತೆ ಯೋಜನೆ ಮೊದಲಾದ ಪ್ರತಿಷ್ಠಿತ ಯೋಜನೆಗಳನ್ನು ಸಮರ್ಥವಾಗಿ ನಿರ್ವಹಿಸಿದ ಖ್ಯಾತಿ ಇವರ ಸಂಸ್ಥೆಯದ್ದು. ವಿಶ್ವ ಬ್ಯಾಂಕಿನ ಹೆದ್ದಾರಿ ಯೋಜನೆಗಳಲ್ಲಿ ಪರಿಣಿತರಾಗಿ ವರ್ಷಕ್ಕೆರಡು ಬಾರಿ ಭೇಟಿ ನೀಡಿ ಕೆಲ ಕಾಲ ವೆಂಕಟೇಶ್ ಅವರು ಪರಿವೀಕ್ಷಕರಾಗಿ ತಮ್ಮ ಅನುಭವದ ಸೇವೆ ಸಲ್ಲಿಸಿದ್ದಾರೆ.



1969ರಲ್ಲಿ ದೆಹಲಿಗೆ ಆಗಮಿಸಿದ ವೆಂಕಟೇಶ್ ಅವರಿಗೆ ದೆಹಲಿ ಕರ್ನಾಟಕ ಸಂಘದೊಡನೆ ಸುದೀರ್ಘ ಒಡನಾಟ. 70ರ ದಶಕದಲ್ಲಿದ್ದ ಅಂದಿನ ಕಾರ್ಯದರ್ಶಿ ಶ್ರೀ ಸೀತಾರಾಂ ಅವರೊಡನೆ ಗೆಳೆತನ ಹೊಂದಿದ್ದ ವೆಂಕಟೇಶ್, ಮಾಜಿ ಅಧ್ಯಕ್ಷ, ದೆಹಲಿ ಕರ್ನಾಟಕ ಸಂಘದ ರೂವಾರಿ ದಿವಂಗತ ಕೆ.ಆರ್. ನಾಗರಾಜ್ ಅವರು ಮೊಟ್ಟ ಮೊದಲ ಬಾರಿಗೆ ದೆಹಲಿಗೆ ಬಂದಾಗ ಕೆಲಕಾಲ ತಮ್ಮ ಮನೆಯಲ್ಲಿಯೇ ಉಳಿದಿದ್ದನ್ನು ಅತ್ಯಂತ ಅಪ್ಯಾಯತೆಯಿಂದ ನೆನೆಯುತ್ತಾರೆ. ದೆಹಲಿ ಕರ್ನಾಟಕ ಸಂಘದ ನೂತನ ಸಾಂಸ್ಕೃತಿಕ ಸಮುಚ್ಚಯ ಕಟ್ಟಡ ನಿರ್ಮಾಣದ ಹಂತದಿಂದ ಇಂದಿನವರೆಗೂ ಕಟ್ಟಡ ಉಪಸಮಿತಿಯ ಸದಸ್ಯರಾಗಿ ತಮ್ಮ ಉತ್ಕೃಷ್ಟ ಸಲಹೆ, ಸಹಕಾರ, ಮಾರ್ಗದರ್ಶನ ನೀಡುತ್ತಾ ಬಂದಿರುವುದು ನಿಜಕ್ಕೂ ಹೆಮ್ಮೆಯ ಸಂಗತಿ. ತಮ್ಮ ಬಿಡುವಿಲ್ಲದ ವೇಳೆಯ ನಡುವೆಯೂ ಸಂಘದ ಒಳಿತಿಗಾಗಿ ಸಮಯ ನೀಡಿ ತಮ್ಮ ಕೈಲಾದ ನೆರವನ್ನು ನೀಡುತ್ತಾ ಬಂದಿದ್ದಾರೆ. ಬಾಳಸಂಗಾತಿ ವಸಂತಿ ಅವರೊಡಗೂಡಿ ಸಂಘದ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ತಪ್ಪದೇ ಬರುವ ವೆಂಕಟೇಶ್ ಅವರದ್ದು ಸುಖೀ ಸಂಸಾರ. ಕ್ರಿಯಾಶೀಲ ವ್ಯಕ್ತಿತ್ವವುಳ್ಳ ಮಗ ಚೇತನ್ ಇಂಜಿನಿಯರ್ ಆಗಿ ಹಾಗೂ ಮಗಳು ಚಂದನ ಪ್ರಧಾನ ವಸ್ತ್ರವಿನ್ಯಾಸಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. 68ರ ಹರೆಯದ ವೆಂಕಟೇಶ್ ಅವರು ಇಂದಿಗೂ ಹೆದ್ದಾರಿ ಯೋಜನೆಗಳ ಸಲಹಾಕಾರರಾಗಿ ತಮ್ಮ ಸೇವೆಯನ್ನು ನೀಡುತ್ತಿದ್ದಾರೆ.

ಸರಳ, ಸಜ್ಜನಿಕೆಯ, ಮೃದುಭಾಷಿ ವೆಂಕಟೇಶ್ ಅವರು ಕನ್ನಡ ನಾಡು, ನುಡಿಯ ಅಭಿಮಾನದಿಂದ ದೆಹಲಿ ಕರ್ನಾಟಕ ಸಂಘದೊಡನೆ ಸುದೀರ್ಘ ನಿಕಟ ಸಂಪರ್ಕ ಹೊಂದಿದ್ದು ನಿಸ್ವಾರ್ಥ ಸೇವೆ ನೀಡುತ್ತಿರುವುದು ನಿಜಕ್ಕೂ ಅಭಿನಂದನೀಯ, ಅನುಕರಣೀಯ. ಅವರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು.

■ ಉಷಾ ಭರತಾದ್ರಿ

# ಪ್ರಭಾಕರ ರಾಯರ ನೆನಪಿನಲ್ಲಿ



ಸಂಘದ ಸಮಾರಂಭದಲ್ಲಿ ಹೂಗುಚ್ಛ ಸ್ವೀಕರಿಸುತ್ತಿರುವ ಪ್ರಭಾಕರ ರಾವ್

ಇತ್ತೀಚೆಗೆ ಶ್ರೀ ಪ್ರಭಾಕರ ರಾಯರು ನಮ್ಮನ್ನೆಲ್ಲ ಬಿಟ್ಟು ಅಗಲಿದ್ದಾರೆ. ಅವರ ನಿಧನ ದೆಹಲಿಯ ಕನ್ನಡಿಗರೆಲ್ಲರಿಗೂ ಅತೀವ ದುಃಖವನ್ನುಂಟು ಮಾಡಿದೆ. ಸುಮಾರು ಐದು ದಶಕಗಳಿಗೂ ಮೀರಿ ದೆಹಲಿಯಲ್ಲಿದ್ದ ಪ್ರಭಾಕರ ರಾಯರು ದೆಹಲಿಯಲ್ಲಿನ ಕನ್ನಡಪರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದವರು. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿಗಳಾಗಿ, ದೆಹಲಿ ಕರ್ನಾಟಕ ಸಂಘದ ಸಕ್ರಿಯ ಸದಸ್ಯರಾಗಿ ಅವರು ಕಾರ್ಯ ನಿರ್ವಹಿಸಿದ್ದಾರೆ. ಇವೆಲ್ಲದಕ್ಕೂ ಮಿಗಿಲಾಗಿ ಅವರು 'ಕನ್ನಡ-ಭಾರತಿ'ಯ ಸ್ಥಾಪಕ ಸದಸ್ಯರಾಗಿದ್ದರು. 'ಕನ್ನಡ-ಭಾರತಿ' ದೆಹಲಿಯಲ್ಲಿ ಅರವತ್ತರ ದಶಕದಲ್ಲಿ ಹಲವಾರು ಸಾಂಸ್ಕೃತಿಕ ಆಯಾಮಗಳೊಂದಿಗೆ, ಮುಖ್ಯವಾಗಿ ನಾಟಕಗಳನ್ನು ತಯಾರಿಸಿ ಪ್ರದರ್ಶಿಸುವುದರೊಂದಿಗೆ ಅಸ್ತಿತ್ವಕ್ಕೆ ಬಂದಿತ್ತು. ನಾಟಕ ಹಾಗೂ ಸಿನಿಮಾ ರಂಗದ ದೊಡ್ಡ ಹೆಸರುಗಳು ಈ 'ಕನ್ನಡ-ಭಾರತಿ'ಯೊಂದಿಗೆ ಸೇರಿದ್ದವು. ಮುಖ್ಯವಾಗಿ ಶ್ರೀ ಬಿ.ವಿ. ಕಾರಂತ್, ಶ್ರೀ ಎಂ.ಎಸ್. ಸತ್ಯು, ಶ್ರೀ ನಾರಾಯಣ ರಾವ್, ಶ್ರೀ ಕೆ.ಆರ್. ನಾಗರಾಜ, ಶ್ರೀಮತಿ ಜ್ಯೋತ್ಸ್ನಾರಾವ್, ಶ್ರೀ ಎಚ್.ಎಸ್. ಕುಲಕರ್ಣಿ. . .ಹೀಗೆ ಈ ಪಟ್ಟಿ ತುಂಬಾ ದೊಡ್ಡದಿದೆ. ಈ ಹಿರಿಯರೆಲ್ಲರೂ ದೆಹಲಿ ಕರ್ನಾಟಕ ಸಂಘದೊಂದಿಗೂ ಸೇರಿ ಅವಿರತವಾಗಿ ಕೆಲಸ ಮಾಡಿದವರು. ಈ 'ಕನ್ನಡ-ಭಾರತಿ'ಯ ಗರಡಿಯಲ್ಲಿ ಪಳಗಿ ಬಂದ ಪ್ರಭಾಕರ ರಾಯರು ಅಸಾಮಾನ್ಯ ವ್ಯಕ್ತಿಯಾಗಿದ್ದರು.

ಅಭಿಮತವನ್ನು ಪ್ರಾರಂಭಿಸಿದಾಗ ಅದಕ್ಕೆ ಶ್ರೀ ಪ್ರಭಾಕರ ರಾಯರು ನೀಡಿದ ಸಲಹೆ-ಸೂಚನೆಗಳು ತುಂಬಾ ಸಹಕಾರಿಯಾಗಿದ್ದವು. ಸಂಘದ ಅಭಿಮತ ಹಾಗೂ ಪ್ರಕಾಶನ ಸಮಿತಿಯಲ್ಲಿ ಅವರಿದ್ದರು. ಶ್ರೀ ರಾಯರು ಎನ್.ಸಿ.ಆರ್.ಟಿ.ಯಲ್ಲಿ ಪುಸ್ತಕ ಪ್ರಕಾಶನ ವಿಭಾಗದ ಮುಖ್ಯಸ್ಥರಾಗಿದ್ದರು ಎಂಬುದು ಈಗ ನನಗೆ ನೆನಪಾಗುತ್ತಿದೆ. ಪುಸ್ತಕ ಹಾಗೂ ಪತ್ರಿಕೆಗಳನ್ನು ಯಾವ ರೀತಿಯಲ್ಲಿ ವಿನ್ಯಾಸಗೊಳಿಸಬೇಕೆಂಬುದರ ಬಗ್ಗೆ ಅವರಿಗೆ ವಿಶೇಷ ಪರಿಣತಿ ಇತ್ತು. ಅವರ ಪರಿಣತಿಯ ಲಾಭ ಅಭಿಮತಕ್ಕೆ ಕಾಲಕಾಲಕ್ಕೂ ದಕ್ಕಿದೆ. ಅವರ ಸಲಹೆ-ಸೂಚನೆಗಳು ತೀರಾ ಸೂಕ್ತವಾಗಿರುತ್ತಿದ್ದವು.

ನನ್ನ ನೆನಪಿನಾಳದಿಂದ ಬರುವ ಚಿತ್ರಗಳೆಂದರೆ ಶ್ರೀ ಪ್ರಭಾಕರ ರಾಯರು ಹಾಗೂ ಅವರ ಶ್ರೀಮತಿಯವರು ಸಂಘದ ಎಲ್ಲ ಕಾರ್ಯಕ್ರಮಗಳಲ್ಲೂ ಸದ್ದಿಲ್ಲದೆ ಭಾಗವಹಿಸುತ್ತಿದ್ದರು. ಶ್ರೀ ರಾಯರು ಮಾತನಾಡುವುದೇ ಮೆಲ್ಲಗೆ ಹಾಗೂ ನಿಧಾನವಾಗಿ. ಮಾತನಾಡುವಾಗ ಅವರ ಮಾತಿನಲ್ಲಿರುತ್ತಿದ್ದ ಖಚಿತತೆಗೆ ಹಾಗೂ ಕಳಕಳಿಗಳನ್ನು ಕಂಡು ನಾನು ಬೆರಗಾಗುತ್ತಿದ್ದೆ. ಅವರು ಕಂಡಾಗಲೆಲ್ಲ ತೀರಾ ವಿಶ್ವಾಸದಿಂದ ಹಾಗೂ ಪ್ರೀತಿಯಿಂದ ಮಾತನಾಡುತ್ತಿದ್ದರು.

ಸಂಘದ ಸಾಂಸ್ಕೃತಿಕ ಸಮುಚ್ಚಯವನ್ನು ಕಟ್ಟಬೇಕೆಂಬ ನಿರ್ಧಾರದ ವಿಚಾರಗಳನ್ನು ನಾವು ಕಾರ್ಯಗತ ಮಾಡುವ ಪ್ರಕ್ರಿಯೆಯಲ್ಲಿರುವಾಗ ಶ್ರೀ ಪ್ರಭಾಕರ ರಾಯರು ನೀಡಿದ ಮಾರ್ಗದರ್ಶನವನ್ನು ಮರೆಯುವಂತಿಲ್ಲ. ಎಷ್ಟೋ ವಿಚಾರಗಳು ಅವರಿಗೆ ಒಪ್ಪಿಗೆಯಾಗದಿದ್ದರೂ ಅವರು ಪ್ರೀತಿಯಿಂದ, ಆದರದಿಂದ ಮಾತನಾಡಿಸುತ್ತಿದ್ದರು. ನಾನು ನೋಡಿದ ಹಾಗೆ ಅವರು ಒಂದು ಖಚಿತವಾದ ನಿಲುವನ್ನು ಹೊಂದಿದ್ದರೆ, ಅದರಿಂದ ಅವರ ಮನವನ್ನು ಬದಲಾಯಿಸುವುದೇ ಅಸಾಧ್ಯವಾಗಿ ಬಿಡುತ್ತಿತ್ತು.

ಶ್ರೀ ಪ್ರಭಾಕರ ರಾಯರು ಇತ್ತೀಚಿನ ವರುಷಗಳಲ್ಲಿ ದೆಹಲಿಯಿಂದ ದೂರವಾಗಿ, ಕರ್ನಾಟಕದತ್ತ ನಡೆದಿದ್ದರು. ಅವರ ಆರೋಗ್ಯವು ಅಷ್ಟೊಂದು ಚೆನ್ನಾಗಿರಲಿಲ್ಲವೆಂಬ ಸುದ್ದಿಯೂ ಆಗಾಗ್ಗೆ ನಮಗೆಲ್ಲ ಬರುತ್ತಿತ್ತು. ಈಗ ಅವರು ನಮ್ಮನ್ನೆಲ್ಲಾ ಅಗಲಿದ್ದಾರೆ. ಅವರಿಗೆ ನನ್ನ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ನಮನಗಳು.

**■ ಡಾ. ವೆಂಕಾಟಚಲ ಹೆಗಡೆ**

## ದೆಹಲಿ ಕರ್ನಾಟಕ ಸಂಘದಲ್ಲಿ ರಾಜ್ಯ ಸರ್ಕಾರದ ಪ್ರಗತಿ ಹಾಗೂ ಸಾಧನೆ ಬಿಂಬಿಸುವ ವಸ್ತು ಪ್ರದರ್ಶನ



ರಾಜ್ಯ ಸರ್ಕಾರದ ಸಾಧನೆಗಳು, ಅಭಿವೃದ್ಧಿ ಕಾಮಗಾರಿಗಳು, ನೂತನ ತಂತ್ರಜ್ಞಾನಗಳ ಅಳವಡಿಕೆ, ಬಂಡವಾಳ ಹೂಡಿಕೆಯ ಅವಕಾಶಗಳು, ಕರ್ನಾಟಕದ ಕಲೆ, ಸಂಸ್ಕೃತಿ ಹಾಗೂ ಪ್ರವಾಸೋದ್ಯಮದ ಕುರಿತಂತೆ 'ವಸ್ತು ಪ್ರದರ್ಶನ'ವನ್ನು ವಾರ್ತಾ ಇಲಾಖೆಯು ಸೆಪ್ಟಂಬರ್ 15ರಿಂದ 21ರವರೆಗೆ ದೆಹಲಿ ಕರ್ನಾಟಕ ಸಂಘದ ಆವರಣದಲ್ಲಿ ಏರ್ಪಡಿಸಿತ್ತು. 'ವಸ್ತು ಪ್ರದರ್ಶನ' ಮಳಿಗೆಯನ್ನು ಉದ್ಘಾಟಿಸಿದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ರಾಜ್ಯ ಸರ್ಕಾರವು ಜನ ಸಾಮಾನ್ಯರ ಕಲ್ಯಾಣಕ್ಕಾಗಿ ಹಮ್ಮಿಕೊಂಡಿರುವ ಹಲವಾರು ಅಭಿವೃದ್ಧಿ ಯೋಜನೆಗಳು ಹಾಗೂ ರಾಜ್ಯ ಸರ್ಕಾರವು ವಿವಿಧ ಕ್ಷೇತ್ರಗಳಲ್ಲಿ ಸಾಧಿಸಿರುವ ಪ್ರಗತಿ ಹಾಗೂ ಸಾಧನೆಯ ಕುರಿತ ಮಾಹಿತಿಯು ಈ ವಸ್ತು ಪ್ರದರ್ಶನದಲ್ಲಿ ಒಳಗೊಂಡಿದ್ದು, ಇದರ ಸದುಪಯೋಗ ಪಡೆದುಕೊಳ್ಳುವಂತೆ ಅವರು ದೆಹಲಿ ಕನ್ನಡಿಗರಿಗೆ ಕರೆ ನೀಡಿದರು. ಈ ಸಂದರ್ಭದಲ್ಲಿ ಕರ್ನಾಟಕ ವಾರ್ತಾ ಕೇಂದ್ರದ ಉಪ ನಿರ್ದೇಶಕ ಗಿರೀಶ್ ಎಲ್.ಪಿ. ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ಹಾಗೂ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಕನ್ನಡ ಭಾರತಿ ಕಟ್ಟಿದ ಪ್ರಭಾಕರ ರಾವ್ – ಒಂದು ನೆನಪು

ಮಹಾಭಾರತದ ಅತ್ಯಂತ ಕ್ಲಿಷ್ಟ ಪಾತ್ರಗಳು, ಅವುಗಳ ಒಳ ತುಮುಲಗಳು, ಸಂಘರ್ಷಗಳು, ಧರ್ಮಾಧರ್ಮದ ವ್ಯಾಖ್ಯೆಗಳು ಇಂದಿನ ಕಾಲದಲ್ಲೂ ಪ್ರಸ್ತುತವಾಗಿದೆ ಎಂಬ ಅರಿವು ನನಗಾಗಿದ್ದು, ಉಚ್ಚಿಲ ಪ್ರಭಾಕರ ರಾವ್ ಅವರನ್ನು ನೋಡಿ. ಹಟವಾದಿಗಳಲ್ಲಿ ಹಟವಾದಿ. ಮುಗ್ಧರಲ್ಲಿ ಮುಗ್ಧ; ವಿರೋಧವೆಂದರೆ ಮಹಾವಿರೋಧ. ತಾವು ಮಾಡುವ ಕೆಲಸದಲ್ಲಿ ಅಪಾರ ಶ್ರದ್ಧೆ, ನಂಬಿಕೆ, ಶಿಸ್ತು. ಅಟಲ–ಅಚಲ ನಿಲುವು.

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಹೋರಾಟದ ಸಂದರ್ಭದಲ್ಲಿ 1984ರ ಸುಮಾರಿಗೆ ಎನ್‌ಸಿಇಆರ್‌ಟಿಯಲ್ಲಿ ಚೀಫ್ ಪ್ರೊಡಕ್ಷನ್ ಆಫೀಸರ್ ಆಗಿದ್ದ ಪ್ರಭಾಕರ ರಾವ್ ಅವರ ಪರಿಚಯವಾಗಿತ್ತು. ಕಾರ್ಯಾಲಯದಲ್ಲಿ ಅವರ ದಕ್ಷತೆ, ಮತ್ತು ಪ್ರಾಮಾಣಿಕತೆ ಮನೆ ಮಾತಾಗಿತ್ತು. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ, ಅಂದಿನ ಮ್ಯಾನೇಜ್‌ಮೆಂಟಿನ ದುರಾಡಳಿತದ ವಿರುದ್ಧ ಹೋರಾಡಿದ ಅರವಿಂದ ಮದಭಾವಿ, ಎಸ್‌ಜಿ ಹೆಗಡೆ, ಪ್ರಭುದೇವಯ್ಯ, ಚಂದ್ರಶೇಖರ, ಎಸ್‌ಎನ್ ಚಂದ್ರಶೇಖರ, ಕೆ ಆರ್ ನಾಗರಾಜ ಮುಂತಾದ ಗಣ್ಯರ ಮುಂಚೂಣಿಯಲ್ಲಿದ್ದ ಮತ್ತೊಬ್ಬ ವ್ಯಕ್ತಿ ಯು. ಪ್ರಭಾಕರ ರಾವ್. ಶಾಲಾ ಕನ್ನಡ ಅಧ್ಯಾಪಕರ ಪರವಾಗಿ ಹೋರಾಟ ನಡೆಸಿದ್ದರು. ಚುನಾವಣೆಯಲ್ಲಿ ಗೆದ್ದು, ಕನ್ನಡ ಶಾಲೆಯ ಕಾರ್ಯದರ್ಶಿಗಳಾದರು. ಎರಡು ಬಣಗಳ ಸದಸ್ಯರು ಸುಮಾರಾಗಿ ಸಮಬಲದಲ್ಲಿದ್ದರೂ, ಪ್ರಭಾಕರ ರಾವ್ ಶಾಲೆಯ ಮ್ಯಾನೇಜರ್ ಆಗಿ ಬಂದರೆ, ಆಗಿನ ಪ್ರಿನ್ಸಿಪಾಲರಿಗೆ ಕಷ್ಟವಾದೀತೆಂಬ ನಿಲುವಿನಿಂದ, ಸೊಸೈಟಿಯ ಸ್ಕೀಮ್ ಆಫ್ ಮ್ಯಾನೇಜ್‌ಮೆಂಟಿನ ಸೂತ್ರ ಹಿಡಿದು, ಶಾಲೆಯ ಮ್ಯಾನೇಜರ್ ಆಗಿ ಅಂದಿನ ಉಪಾಧ್ಯಕ್ಷ ಡಾ. ಸೇತುಮಾಧವ ರಾವ್ ಅವರನ್ನು ನೇಮಿಸಲಾಯಿತು. ಎರಡು ವರ್ಷಗಳ ಕಾಲ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಯಾಗಿ ದುಡಿದು, ಬಹಳ ಚಿಂತಾಜನಕ ಸ್ಥಿತಿಯಲ್ಲಿದ್ದ ಕಟ್ಟಡದ ದುರಸ್ತಿ ರಿಪೇರಿಗಳನ್ನು ಮಾಡಿಸಿದ್ದರು. ಶೌಚಾಲಯಗಳನ್ನು ಮಾಡಿಸಿದ್ದರು. ಶಾಲೆಯ ದುರಸ್ತಿ ನಿರ್ಮಾಣಗಳೆಲ್ಲ ರಜೆಯ ಸಮಯದಲ್ಲಿ ಆಗಬೇಕು. ಕೆಲಸ ಪ್ರಾರಂಭಿಸಿದಾಗ ಒಂದೊಂದೇ ಕೆಲಸಗಳನ್ನು ಮಾಡಿಸಬೇಕಾಗಿ ಬಂತು. ಅಂತೂ ಮಾಡಿಸಿ, ತದನಂತರ ಸಮಿತಿಯ ಅನುಮತಿ ಪಡೆದರೂ, ಅವರ ವಿರೋಧಿಗಳು ಆ ಖರ್ಚುವೆಚ್ಚಗಳನ್ನು ಮಂಜೂರು ಮಾಡಲು ಒಪ್ಪಿಕೊಳ್ಳದೆ ಹಲವಾರು ವರ್ಷಗಳ ಕಾಲ ಅದು, 'ರಚ್ಚೆಯಿಂದ ಬಿಡದ, ಗೂಂಜಿನಿಂದ ಬಿಡದ ಹಲಸಿನ ಹಣ್ಣಾಗಿತ್ತು.' ಆದರೆ ಅವರು ಮಾಡಿಸಿದ ಕೆಲಸಗಳ ಉದ್ದೇಶ, ಉಪಯೋಗ, ಮಾಡಿದ ಖರ್ಚುಗಳೆಲ್ಲ ಪ್ರಶ್ನಾತೀತವಾಗಿದ್ದರೂ 'ಪೂರ್ವಾನುಮತಿ'ಯ ತಾಂತ್ರಿಕತೆಯ ಮೇಲೆ ಲೆಕ್ಕಪತ್ರಗಳು ಮಂಜೂರಾಗದೆ ಹಲವಾರು ವರ್ಷಗಳ ಕಾಲ ಉಳಿದಿದ್ದವು. ಕಾಲಕ್ರಮೇಣ ಸರಿಹೋಯಿತು. ಹಾಗೆಂದು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಹೋರಾಟವನ್ನು ಅವರು ಮುಂದುವರಿಸಿದ್ದರು. ತಮಗೆ ಮಕ್ಕಳಿಲ್ಲದ್ದರಿಂದ ಮಕ್ಕಳಿಗಾಗಿ ಏನನ್ನಾದರೂ ಮಾಡುವ ಅವರ ಹಂಬಲ ಅವರ ಪ್ರತಿಯೊಂದು ಕೆಲಸದಲ್ಲೂ ಎದ್ದು ಕಾಣಿಸುತ್ತಿತ್ತು.

ದೆಹಲಿಗೆ ಬಂದು ಹಲವಾರು ದಶಕಗಳ ಕಾಲ ದುಡಿದಿದ್ದರಿಂದ, ಮತ್ತು ಬಿ ವಿ ಕಾರಂತ, ಎಂ ಎಸ್ ಸತ್ಯು, ಗಿರೀಶ್ ಕಾರ್ನಾಡ, ಎಂ ವಿ ನಾರಾಯಣ ರಾವ್, ಬಿ ಎಫ್ ಮುರುಗೋಡ, ಪ್ರಭಾಕರ್ ರಾವ್ ಅವರ ಮಡದಿ ಶ್ರೀಮತಿ ಕಲಾವತಿ, ಶ್ರೀಮತಿ ಮತ್ತು ಶ್ರೀ ಎಚ್ ಎಸ್ ಕುಲಕರ್ಣಿ, ಷಾ ಬಾಲೂ ರಾವ್, ಉಪೇಂದ್ರ ರಾವ್ ದಂಪತಿ, ಸತೀಶ್, ಜ್ಯೋತ್ಸ್ನಾ ರಾವ್ ಮುಂತಾದವರ ಬಹುದೊಡ್ಡ ತಂಡವೇ 'ಕನ್ನಡ ಭಾರತಿ'ಯಾಗಿ ದೆಹಲಿಯಲ್ಲಿ ಹಲವಾರು ನಾಟಕಗಳನ್ನು ನೀಡಿ ದೆಹಲಿಯಲ್ಲಿ ಕನ್ನಡ ಸಂಸ್ಕೃತಿಯ ಉಳಿವಿಗೆ ಕಾರಣವಾಗಿತ್ತು. ಕನ್ನಡ ಭಾರತಿಗೆ ಪ್ರಭಾಕರ ರಾವ್ ಅವರ ಕೊಡುಗೆ ಅನನ್ಯವಾದುದು. 'ಮೋಟೇ ರಾಮನ ಸತ್ಯಾಗ್ರಹ' ಎಂಬ ನಾಟಕ ಸಿದ್ಧವಾಗುವ ಮೊದಲ ದಿನಗಳಲ್ಲಿ ನಾನು ಹೋಗಿದ್ದೆ. ನನ್ನ ತಾಯಿಗೆ ಹುಷಾರಿಲ್ಲದೆ, ಮತ್ತೆ ನನಗೆ ಭಾಗವಹಿಸಲು ಸಾಧ್ಯವಾಗಲಿಲ್ಲ. ಆದರೆ, ಪ್ರಭಾಕರ ರಾವ್ ಅವರ ಕಠಿಣ ನಿರ್ದೇಶನದ ಬಿರುಸನ್ನು ಸ್ವತಹ ಕಂಡಿದ್ದೆ.

ಅಲ್ಲಿ ತನಕ ಪ್ರಭಾಕರ ರಾವ್ ಅವರು ಕರೋಲ್‌ಬಾಗ್‌ನಲ್ಲಿದ್ದರು. ಸ್ವಲ್ಪ ಸಮಯ ಸಾಕೇತ್‌ನಲ್ಲಿದ್ದವರು. ಕೊನೆಗೆ ತಮ್ಮ ಸ್ವಂತ ಮನೆಯನ್ನು ಪಶ್ಚಿಮ ವಿಹಾರದಲ್ಲಿ ಮಾಡಿಕೊಂಡರು. ನನ್ನ ಮನೆಯೂ ಪಶ್ಚಿಮವಿಹಾರದಲ್ಲಿತ್ತು. ನನ್ನ ಮತ್ತು ಅವರ ಸಂಪರ್ಕ ತುಂಬಾ ಹತ್ತಿರವಾಗಿದ್ದು ಆ ಸಮಯದಲ್ಲಿಯೇ. ಪಶ್ಚಿಮ ವಿಹಾರದ ಕನ್ನಡ ಕುಸುಮ ಬಹಳ ಚಟುವಟಿಕೆಗಳನ್ನು ನಡೆಸುತ್ತಿದ್ದ ಕಾಲವದು. ಎಂ ಎ ರಾವ್, ಡಾ. ನಾಗರಾಜ, ಸತೀಶ್ ರಾವ್, ಚಂದ್ರಶೇಖರ, ಚಂದ್ರಕಾಂತ ಮಲ್ಯ ಮತ್ತು ನಾವೆಲ್ಲ ಸಕ್ರಿಯವಾಗಿ ತೊಡಗಿಸಿಕೊಂಡಿದ್ದೆವು. ಅನೇಕ ಕಾರ್ಯಕ್ರಮಗಳನ್ನು ಪ್ರಭಾಕರ ರಾವ್ ಅವರ ಮನೆಯಂಗಳದಲ್ಲೇ ಮಾಡಿದ್ದುಂಟು.

ಈ ಎಲ್ಲ ಸಂದರ್ಭಗಳಲ್ಲಿ ಅವರ ಹಲವಾರು ಮುಖಗಳನ್ನು ಕಾಣುವ ಅವಕಾಶ ನನಗೆ ಸಿಕ್ಕಿತ್ತು. ಆದರ್ಶವಾದಿ; ಕಿವಿ ಹಿತ್ತಾಳೆ. ಕರುಣಾಳು; ಸಂಘ ಜೀವಿಯಲ್ಲ, ನಿಷ್ಠುರ, ನೇರ ಮಾತು. ಸಂಜೆ ಕುಟುಂಬ ಸಮೇತ ಅವರ ಮನೆಗೆ ಹೋದರೆ, ಆಮಾತು ಈ ಮಾತು, ಚರ್ಚೆ, ವಾದ–ವಿವಾದ, ಊಟ ಎಲ್ಲ ಮುಗಿಸಿ ರಾತ್ರೆ ಸುಮಾರು 2 ಗಂಟೆಗೆ ಕಳಿಸಿಕೊಡುತ್ತಿದ್ದರು. ವಾರಕ್ಕೆರಡು ಬಾರಿಯಾದರೂ ಈ ರೀತಿ ನಡೆಯುತ್ತಿತ್ತು. ಆಗ ನಾನಿನ್ನೂ ಸಂಘದಲ್ಲಿ ಪದಾಧಿಕಾರಿಯಾಗಿರಲಿಲ್ಲ. ದೆಹಲಿ ಕರ್ನಾಟಕ ಸಂಘದ ಸ್ವರ್ಣಜಯಂತಿ ಸಮಾರಂಭದ ಆಯೋಜನೆಯ ವಿಷಯದಲ್ಲಿ ಅಂದಿನ ಅಧ್ಯಕ್ಷ ಶ್ರೀ ಕೆ ಆರ್ ನಾಗರಾಜರೊಡನೆ ಬಹಳ ಕಟುವಾಗಿ, ತೀವ್ರವಾಗಿ ಮಾತನಾಡಿದ್ದರು. ಕೊನೆಗೆ ಕೆ ಆರ್ ನಾಗರಾಜವರು ಪ್ರಭಾಕರ ರಾಯರ ಮನೆಗೆ ಬಂದು, ಆಯೋಜನೆ ಹೇಗೆ ಮಾಡಬೇಕು ಎಂಬಿತ್ಯಾದಿ ಸಲಹೆ ಕೇಳಿದ್ದರು. ವಿರೋಧವನ್ನು ತಪ್ಪಿಸಬೇಕೆಂಬುದು ನಾಗರಾಜರ ನೀತಿಯಾಗಿತ್ತು. ಅಂತೂ ಅವರ ಸಲಹೆಯಂತೆ ಕೆಲವೊಂದು ಮಾರ್ಪಾಟುಗಳನ್ನು ನಾಗರಾಜರು ಮಾಡಿಕೊಂಡಿದ್ದರು. ಆದರೆ, ಸುವರ್ಣ ಜಯಂತಿ ನಾಗರಾಜರ ಎಣಿಕೆಯಂತೆ ನಡೆಯಲಿಲ್ಲ. ಹಣ ಖರ್ಚಾಯಿತು. ಅವರ ವಿರೋಧಿಗಳು ಪ್ರಭಾಕರ ರಾಯರನ್ನು ಚೆನ್ನಾಗಿ ಬಳಸಿಕೊಂಡರು. ಅಂದಿನ ಪರಿಸ್ಥಿತಿ, ಸಂಘದ ಹಿತದೃಷ್ಟಿ, ನಾಗರಾಜರ ಪ್ರಯತ್ನಶೀಲತೆ, ಕನ್ನಡಿಗರ ಕನಸು ಇವು ಒಂದೆಡೆ; ಪ್ರಭಾಕರ ರಾವ್ ಅವರ ನಾಗರಾಜ ವಿರೋಧ ಇನ್ನೊಂದೆಡೆ. ನಾಗರಾಜ್ ಅವರು ಅನುಸರಿಸುತ್ತಿದ್ದ ಕೆಲವು ನೀತಿಗಳು, ತಂತ್ರಗಳನ್ನು ಎಲ್ಲರೂ ಮೆಚ್ಚುವಂತಿರಲಿಲ್ಲ. ನಿಜ, ಆದರೆ ದೆಹಲಿ ಕರ್ನಾಟಕ ಸಂಘವನ್ನು ಅವರು ಬೆಳೆಸುವಲ್ಲಿ ಅವರು ಅನುಸರಿಸಿದ ನೀತಿಯೇ ಸರಿಯಿತ್ತೇನೋ ಎಂದು ಈಗ ಅನಿಸುತ್ತಿದೆ. ಒಳ್ಳೆಯ ಆದರ್ಶವನ್ನು ಸಾಧಿಸಲು, ಮೇಲ್ನೋಟಕ್ಕೆ ಸರಿಯಲ್ಲವೆಂದು ಕಂಡುಬರುವ ಕೆ ಆರ್ ನಾಗರಾಜರ ವಿಧಿ–ವಿಧಾನಗಳು, ಅಂದಿನ ದಿನದಲ್ಲಿ ಅನಿವಾರ್ಯ ಎಂಬುದನ್ನು ಸಕಾರಣ ಸಹಿತ ಪ್ರಭಾಕರ ರಾವ್ ಅವರಿಗೆ ವಿವರಿಸಿದರೂ, ನನ್ನ ಆ ವಾದದಿಂದಲೇ ನಾನು ಪ್ರಭಾಕರ ರಾವ್ ಅವರಿಂದ ದೂರ ಬರುವಂತಾಯಿತು. ಅಷ್ಟು ಹೊತ್ತಿಗಾಗಲೇ, ಆ ತನಕ ಪ್ರಭಾಕರ ರಾವ್ ಅವರ ಹೆಸರನ್ನು ಕೇಳಿದರೂ ಮೈ ಉರಿದುಕೊಳ್ಳುತ್ತಿದ್ದವರನೇಕರು, ನಾಗರಾಜ ವಿರೋಧದ 'ಸಾಮಾನ್ಯವೇದಿಕೆ'ಯಲ್ಲಿ ಪ್ರಭಾಕರ ರಾವ್ ಅವರ ಜೊತೆಗೂಡಿ ಸಮರ ಸಾರಿದ್ದರು.

ಸುವರ್ಣ ಜಯಂತಿಯ ಕಾರ್ಯಕ್ರಮ. ಎಣಿಸಿದ್ದು ಬರಲಿಲ್ಲ, ಬಂದದನ್ನು ಎಣಿಸಿರಲಿಲ್ಲ. ಹಣ ಬರಲಿಲ್ಲ; ಗುಡ್‌ವಿಲ್ ಬಂತು, ಹೆಸರು ಬಂತು. ಆಮೇಲೆ ಅದೇ ಗುಡ್‌ವಿಲ್, ಹಣ ತಂದಿತು. ಕಟ್ಟಡ ತಲೆಎತ್ತಿ ನಿಂತಿತು ಅದೆಲ್ಲ ಈಗ ಇತಿಹಾಸ. ಈ ಇತಿಹಾಸದ ಹಿಂದಿನ ಎಲ್ಲ ನೋವು, ಪಟ್ಟ ಪಾಡನ್ನು ಬರೆಯ ಹೊರಟರೆ ಬಹುದೊಡ್ಡ ಪುಸ್ತಕವಾದೀತು. ಇರಲಿ.

ಸುವರ್ಣ ಜಯಂತಿ ಕಾರ್ಯಕ್ರಮಗಳ ಸಫಲತೆ–ವಿಫಲತೆ–ಖರ್ಚು ವೆಚ್ಚಗಳ ಬಗ್ಗೆ ತಕರಾರು ಎತ್ತಿದವರೆಲ್ಲ ಸಂಘದ ಸರ್ವಸದಸ್ಯರ ಸಭೆಗೆ ಬಂದರು. ಬೆಳಗ್ಗೆ 10ಗಂಟೆ 30 ನಿಮಿಷಕ್ಕೆ ಆರಂಭವಾದ ಮಹಾಸಭೆ ರಾತ್ರೆ 8 ಗಂಟೆ 30 ನಿಮಿಷದ ಹೊತ್ತಿಗೆ ಮುಗಿಯಿತು. ಮಧ್ಯಾಹ್ನ 1 ಗಂಟೆಯ ಲಂಚ್ ಬ್ರೇಕ್. ಅಂದರೆ 9 ಗಂಟೆಗಳ ನಿರಂತರ ಸಭೆ. ಪ್ರಶ್ನೆ–ಉತ್ತರ–ಸಮರ್ಥನೆ–ಖಂಡನೆ–ಮರುಸಮರ್ಥನೆ. ಸುವರ್ಣ ಜಯಂತಿ ಉತ್ಸವದ ಸಮಯದಲ್ಲಿ ನಾನು ಪ್ರೇಕ್ಷಕ; ಆದರೆ, ಈ ಪ್ರಶ್ನೆಗಳಿಗೆ ಉತ್ತರಿಸುವ ಸಮಯದಲ್ಲಿ ಕಾರ್ಯದರ್ಶಿ. ಕಾರ್ಯದರ್ಶಿಯ ಪಾತ್ರವನ್ನು ನಿಭಾಯಿಸಿದ್ದೆ. ಕೊನೆಗೆ ಸಭೆ ಒಮ್ಮತದ ನಿರ್ಧಾರಕ್ಕೆ ಬಂದು ಎಲ್ಲವೂ ಸರಿಯಾಗಿವೆ ಎಂಬ ನಿರ್ಧಾರವನ್ನು ಕೈಗೊಂಡಿತು. ಆ ಸಭೆಯಲ್ಲಿ ಪ್ರಭಾಕರ ರಾವ್ ಅವರು ಸಹ ಇದ್ದರು. ಸಭೆ ಮುಗಿದು ಮನೆಗೆ ಹೋದ ಪ್ರಭಾಕರ ರಾವ್ ಅವರು, ಸಭೆಯಲ್ಲಿ ತಾವು ತೆಗೆದುಕೊಂಡ ನಿರ್ಧಾರಕ್ಕೆ ವ್ಯತಿರಿಕ್ತವಾಗಿ, ಆಪಾದನೆಗಳ ದೊಡ್ಡ ಪಟ್ಟಿಯನ್ನೇ ಕರ್ನಾಟಕ ಸರಕಾರಕ್ಕೆ ಕಳಿಸಿಕೊಟ್ಟರು. ಸರಕಾರ, ಸಂಘಕ್ಕೆ ನೀಡಿದ್ದ 50 ಲಕ್ಷ ರೂಪಾಯಿಗಳು ಸುರಕ್ಷಿತವಾಗಿಲ್ಲ ಎಂದು ದೂರಿದ್ದರು. ಕರ್ನಾಟಕ ಸರಕಾರ ಅಧಿಕಾರಿ ಒಬ್ಬರನ್ನು ಕಳಿಸಿಕೊಟ್ಟು ಸಂಘದ ಲೆಕ್ಕ ಪತ್ರಗಳನ್ನು ನೋಡಿ, ಎಲ್ಲವೂ ಸರಿಯಾಗಿದೆ ಎಂದು ವರದಿ ಸಲ್ಲಿಸಿದ್ದರಿಂದ ಸಂಘದ ಕಟ್ಟಡ ಈಗ ನಿಂತಿದೆ. ಸಭೆಯಲ್ಲಿ ಸಮ್ಮತಿಸಿ, ಹೊರಹೋದ ನಂತರ ಸಂಘಕ್ಕೆ ವಿರುದ್ಧವಾದ ಕೆಲಸ ಮಾಡಿದರೆಂದು ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಪ್ರಭಾಕರ ರಾವ್ ಅವರ ವಿರುದ್ಧ ಶಿಸ್ತಿನ ಕ್ರಮ ಕೈಗೊಂಡು, ಸಂಘದ ಸದಸ್ಯತ್ವದಿಂದ ಅವರನ್ನು ತೆಗೆದು ಹಾಕಿತು. ಈ ಸಮಯದಲ್ಲೂ ನಾನೇ ಪ್ರಧಾನ ಕಾರ್ಯದರ್ಶಿ. ಹೃದಯಕ್ಕೆ ಅತ್ಯಂತ ಹತ್ತಿರವಾದ, ವೈಚಾರಿಕವಾಗಿ ದೂರವಾದ, ಆತ್ಮೀಯ....ವಿರೋಧಿ.... ಅಬ್ಬಬ್ಬಾ! ಆದರೆ, ಸಂಘ ಸಾಧನೆಯನ್ನು ಮಾಡುತ್ತ

ಹೋದಂತೆ, ಪ್ರಭಾಕರ ರಾವ್ ಅವರ ಸಿಟ್ಟು ತಣ್ಣಗಾಗಿತ್ತು. ಅವರ ಜೊತೆ ಸುತ್ತುವರಿದಿದ್ದವರು, ದೂರವಾಗಿದ್ದರು. ಸತ್ಯ ಹೊರಬಂದಿತ್ತು. ಸಂಘದಲ್ಲೂ ಬದಲಾವಣೆ ಆಗಿತ್ತು. ಆ ಬದಲಾವಣೆಯಲ್ಲಿ ಮತ್ತೆ ಪ್ರಭಾಕರ ರಾವ್ ಅವರು ನನಗೆ ಸಿಟ್ಟಿನಿಂದಲೇ ಬೆಂಬಲಿಸಿದ್ದರು.

ದಿನಗಳು ಉರುಳಿದವು. ಡಾ. ಪುರುಷೋತ್ತಮ ಬಿಳಿಮಲೆ ತಂಡ ಬಂತು. ಹೊಸ ಚಿಗುರು, ಹಳೆ ಬೇರು.....ಪ್ರಭಾಕರ ರಾವ್ ಅವರನ್ನು ಮತ್ತೆ ಸಂಘಕ್ಕೆ ಸೇರಿಸಿಕೊಳ್ಳಲಾಯಿತು. ಕಾರ್ಯಕ್ರಮಗಳಿಗೆ ಬರುತ್ತಿದ್ದರು. ಆರೋಗ್ಯ ಅಷ್ಟೊಂದು ಸರಿ ಇರಲಿಲ್ಲ. ಅತ್ಮೀಯವಾಗಿ ಮಾತನಾಡುತ್ತಿದ್ದರು. ಊರಿಗೆ ಮರಳಿದರು. ಕೆಲ ಸಮಯದ ನಂತರ ಕಲಾಕ್ಕ ಅವರು ತೀರಿಕೊಂಡರು. ಇತ್ತೀಚೆಗೆ ಉಚ್ಚಿಲ ಪ್ರಭಾಕರ ರಾವ್ ಅವರೂ ತೀರಿಕೊಂಡರೆಂದು ತಿಳಿದು ದುಃಖವಾಯಿತು. ಅವರೊಡಗಿನ ಗುದ್ದಾಟ– ಗಂಥದ ಜೊತೆಗಿನ ಗುದ್ದಾಟ. ಸರಸದಲ್ಲೂ ಕಲಿತೆ; ವಿರಸದಲ್ಲೂ ಕಲಿತೆ. ಅವರನ್ನು ನೋಡುವ ಪ್ರಯತ್ನ ಮಾಡುತ್ತೇನೆ. ಇಲ್ಲ ಅವರು ಕಾಣಿಸುವುದಿಲ್ಲ. ನಿರಂತರವಾಗಿ ಸೇದುವ ಸಿಗರೇಟಿನ ಧೂಮ ಸುರುಳಿ ಸುರುಳಿಯಾಗಿ ಮೇಲೇಳುವುದು ಮಾತ್ರವೇ ಕಾಣಿಸುತ್ತದೆ. ಅವರ ಮಾತು, ಅನುಭವ, ನಿರೂಪಣೆ, ವಾದ, ವಿವಾದ, ಶ್ಲಾಘನೆ, ವಿಶ್ವಾಸಭರಿತ ಆತ್ಮೀಯ ಮಾತುಗಳು ಕೇಳಿಸುತ್ತವೆ. ಕಲಾಕ್ಕ ಫ್ಯಾನ್ ಸ್ವಿಚ್ ಆನ್ ಮಾಡಿದ್ರು... ಸಿಗರೇಟಿನ ಹೊಗೆ ದೂರವಾಯಿತು. ಕೆಮ್ಮುತ್ತಿರುವ ಪ್ರಭಾಕರ ರಾವ್ ನನ್ನ ಮುಂದಿದ್ದಾರೆ......ಕಣ್ಣುಗಳು ಶ್ಲಾಘನೆಯನ್ನು ಸೂಚಿಸುತ್ತವೆ..... ತಲೆಬಾಗಿ ನಮಿಸುತ್ತೇನೆ..... ಉಚ್ಚಿಲ ಪ್ರಭಾಕರ ರಾಯರಿಗೆ..

■ **ಸರವು ಕೃಷ್ಣ ಭಟ್ಟ**

# ಯು. ಪ್ರಭಾಕರ ರಾವ್ : ಪ್ರಜ್ವಲಿಸಿದ ಸೂರ್ಯ ಅಸ್ತಂಗತ

ಘನವಾದ ಕೌಟುಂಬಿಕ ಹಿನ್ನೆಲೆ ಮತ್ತು ಅಗಾಧ ಪ್ರತಿಭೆಯ ಯು. ಪ್ರಭಾಕರ ರಾವ್ ತೀರಿಕೊಂಡಿದ್ದಾರೆ. ಜ್ಞಾನ ಮತ್ತು ಪ್ರತಿಭೆಯಿಂದ ಪ್ರಜ್ವಲಿಸುವ ಸೂರ್ಯನಂತೆ ಇದ್ದ ಪ್ರಭಾಕರ ರಾವ್ ಕಡಲ ತಡಿಯ ಮಂಗಳೂರಿನಲ್ಲಿ ಅಸ್ತಂಗತರಾಗಿದ್ದು ಕಾಕತಾಳೀಯ.

ದೆಹಲಿಯಲ್ಲಿ ಹಲವು ದಶಕಗಳ ಕಾಲ ಇದ್ದು ಪ್ರಭಾಕರ ರಾವ್ ರಾಜಧಾನಿಯ ಕನ್ನಡ ರಂಗಭೂಮಿಯಲ್ಲಿ ವಿಶಿಷ್ಟ ಛಾಪನ್ನು ಮೂಡಿಸಿದ್ದರು. ಆದರೆ ಅವರು ಮೂಲತಃ ಓರ್ವ ಶಿಕ್ಷಣ ತಜ್ಞರಾಗಿದ್ದರು. ಶಿಕ್ಷಣ, ಸಂಶೋಧನೆ ಮತ್ತು ತರಬೇತಿಯ ರಾಷ್ಟ್ರೀಯ ಆಯೋಗದ ನಿರ್ದೇಶಕರಾಗಿದ್ದ ಉಚ್ಚಿಲ ಪ್ರಭಾಕರ ರಾವ್ ದೇಶದ ಶಿಕ್ಷಣದ ಬೆಳವಣಿಗೆಗೆ ದೂರದೃಷ್ಟಿಯನ್ನು ಹೊಂದಿದ್ದರು. ಸರಕಾರಿ ಸೇವೆಯಿಂದ ನಿವೃತ್ತರಾದ ಬಳಿಕವೂ ಬ್ರಿಟಿಷ್ ಕೌನ್ಸಿಲ್, ಯುನೆಸ್ಕೊ ಮೊದಲಾದ ಅಂತಾರಾಷ್ಟ್ರೀಯ ಸಂಸ್ಥೆಗಳು, ಬಿಹಾರ ರಾಜ್ಯದ ಶೈಕ್ಷಣಿಕ ಯೋಜನೆಗಳಲ್ಲಿ ಅವರು ತೊಡಗಿಕೊಂಡಿದ್ದು ಇದಕ್ಕೆ ನಿದರ್ಶನ. ಪ್ರಭಾಕರ ರಾವ್ ಕೇಂದ್ರ ಸಂಗೀತ ನಾಟಕ ಅಕಾಡೆಮಿ, ಆಕಾಶವಾಣಿ ಸೇರಿದಂತೆ ಸರಕಾರದ ಉನ್ನತ ಸಮಿತಿಗಳ ಸದಸ್ಯರಾಗಿದ್ದರು.

ಯು. ಪ್ರಭಾಕರ ರಾವ್ ಅವರು ಸ್ವಾತಂತ್ರ್ಯ ಹೋರಾಟಗಾರರ ಮನೆತನದಲ್ಲಿ ಜನಿಸಿದ್ದರು. ಅವರ ತಂದೆ ಯು. ರಾಮರಾವ್ ಅವರು ಮಹಾತ್ಮ ಗಾಂಧೀಜಿ ಹಾಗೂ ಜವಾಹರಲಾಲ್ ನೆಹರೂ ಅವರ ನಿಕಟವರ್ತಿಯಾಗಿದ್ದರು. ಈ ಕಾರಣದಿಂದಲೇ ಭಾರತದ ಪ್ರಥಮ ಪ್ರಧಾನಿ ಪಂಡಿತ್ ನೆಹರೂ ಸ್ಥಾಪಿಸಿದ 'ನ್ಯಾಷನಲ್ ಹೆರಾಲ್ಡ್' ಪತ್ರಿಕೆಯ ಪತ್ರಕರ್ತರಾಗಿ ರಾಮ ರಾವ್ ಕಾರ್ಯ ನಿರ್ವಹಿಸಿದರು.

ಮಹಾನ್ ರಾಷ್ಟ್ರವಾದಿಯಾಗಿದ್ದ ಪ್ರಭಾಕರ ರಾಯರ ಚಿಕ್ಕಪ್ಪ ಯು. ಎಸ್. ಮೋಹನ್ ರಾವ್ ಅವರು ಆಂಗ್ಲರ ದಬ್ಬಾಳಿಕೆಯನ್ನು ವಿರೋಧಿಸಿ ಮುಂಬಯಿಯಲ್ಲಿ ದೇಶೀಯ ಪ್ರಕಾಶನ ಸಂಸ್ಥೆಯನ್ನು ಪ್ರಾರಂಭಿಸಿದರು. ಆ ದಿನಗಳಲ್ಲಿ ಅವರು ಮಾಜಿ ರಾಷ್ಟ್ರಪತಿಗಳಾದ ಎಸ್. ರಾಧಾಕೃಷ್ಣನ್, ಬಾಬು ರಾಜೇಂದ್ರ ಪ್ರಸಾದ್ ಮೊದಲಾದವರ ಕೃತಿಗಳನ್ನು ಪ್ರಕಟಿಸಿದ್ದರು. ಭಾರತಕ್ಕೆ ಸ್ವಾತಂತ್ರ್ಯ ದೊರಕಿದ ಮೇಲೆ ಭಾರತ ಸರಕಾರ ತನ್ನದೇ ಆದ ಪ್ರಕಾಶನ ಸಂಸ್ಥೆಯನ್ನು ಆರಂಭಿಸಲು ಯೋಜನೆ ಹಾಕಿತು. ಆಗ ಜನಿಸಿದ್ದೇ 'ನ್ಯಾಷನಲ್ ಬುಕ್ ಟ್ರಸ್ಟ್ ಆಫ್ ಇಂಡಿಯಾ'. ಈ ಸಂದರ್ಭದಲ್ಲಿ ಯು.ಎಸ್. ಮೋಹನ ರಾಯರನ್ನು ಭಾರತ ಸರಕಾರ ದೆಹಲಿಗೆ ಕರೆಸಿಕೊಂಡಿತು. ಅವರು ಅದರ ಸ್ಥಾಪನೆಯ ಹಿಂದೆ ಪ್ರೇರಕ ಶಕ್ತಿಯಾಗಿ ಸೇವೆ ಸಲ್ಲಿಸಿದರು ಮತ್ತು ಎನ್.ಬಿ.ಟಿ. ಮೂಲಕ ಮಹತ್ವದ ಕೃತಿಗಳು ಹೊರ ಬರುವಂತೆ ನೋಡಿಕೊಂಡರು. ಈ ಮೂಲಕ 'ಭಾರತದ ಆಧುನಿಕ ಪ್ರಕಾಶನದ ಜನಕ' ಎನಿಸಿಕೊಂಡರು. ಪ್ರಭಾಕರ ರಾಯರ ಇನ್ನೋರ್ವ ಚಿಕ್ಕಪ್ಪ ಖ್ಯಾತ ನೃತ್ಯ ಗುರು ದಿ. ಯು.ಎಸ್. ಕೃಷ್ಣರಾವ್.

ದೆಹಲಿಯಲ್ಲಿ 'ಕನ್ನಡ ಭಾರತಿ' ಎಂಬ ರಂಗಭೂಮಿ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಅದರ ಪ್ರಮುಖರಲ್ಲಿ ಒಬ್ಬರಾಗಿದ್ದ ಪ್ರಭಾಕರ ರಾವ್ ಹಲವು ನಾಟಕಗಳನ್ನು ನಿರ್ದೇಶಿಸಿದ್ದರು. ಅವರ ಪತ್ನಿ ಕಲಾ ಅವರು ಕೂಡಾ ಕಲಾವಿದೆಯಾಗಿ ಅಭಿನಯಿಸಿದ್ದರು. ದಿ.ಬಿ.ವಿ. ಕಾರಂತ, ಎಂ.ಎಸ್. ಸತ್ಯು, ಕಾರ್ನಾಡ, ಈಚೆಗೆ ಜ್ಞಾನಪೀಠ ಪ್ರಶಸ್ತಿ ಪಡೆದ ಡಾ. ಕಂಬಾರ, ನಾರಾಯಣ ರಾವ್, ಉಡುಪಿಯ ಸಾಂಸ್ಕೃತಿಕ ನೇತಾರ ದಿ.ಕು.ಶಿ. ಹರಿದಾಸ ಭಟ್, ದೆಹಲಿಯಲ್ಲೇ ಇರುವ ಎಚ್. ಎಸ್. ಕುಲಕರ್ಣಿ ಅಲ್ಲದೆ ಸಮಕಾಲೀನ ರಂಗಭೂಮಿಯ ಶ್ರೀನಿವಾಸ ಜಿ. ಕಪ್ಪಣ್ಣ ಸೇರಿದಂತೆ ರಂಗಭೂಮಿಯ ಹಿರಿ–ಕಿರಿಯರು ಅವರ ಆಪ್ತ ಬಳಗದಲ್ಲಿದ್ದರು. ನನ್ನ ಸಂಬಂಧಿಕರೂ ಆಗಿದ್ದ ಪ್ರಭಾಕರ ರಾಯರನ್ನು ನಾನು ಸಂಪರ್ಕಿಸಿದ್ದು ಬೇರೆ ಕಾರಣಕ್ಕೆ. ದೆಹಲಿಗೆ ಬಂದ ನಂತರ ನನಗೆ ರಾಷ್ಟ್ರೀಯ ಗ್ರಂಥಾಲಯದ ಪ್ರಥಮ ಗ್ರಂಥಪಾಲಕ ದಿ.ಬಿ.ಎಸ್. ಕೇಶವನ್ ಕುರಿತು ಆಸಕ್ತಿ ಬೆಳೆಯಿತು. ಕೇಶವನ್ ಕನ್ನಡಿಗರು ಎಂಬುದು ಈ ಅಭಿಮಾನಕ್ಕೆ ಕಾರಣ. ಕೇಶವನ್ ಕುರಿತು ಬರೆಯುವುದು ನನ್ನ ಇಚ್ಛೆಯಾಗಿತ್ತು. ಕೇಶವನ್ ಅವರು ಪ್ರಭಾಕರ ರಾಯರಿಗೆ ಆತ್ಮೀಯರಾಗಿದ್ದ ಕಾರಣ ಪ್ರಭಾಕರ ರಾಯರ ಮನೆಗೆ ಹೋಗಿದ್ದೆ. 'ದಿ ಬುಕ್ ಇನ್ ಇಂಡಿಯಾ', 'ದಿ ಪ್ರಿಂಟಿಂಗ್ ಆ್ಯಂಡ್ ಪಬ್ಲಿಷಿಂಗ್ ಇನ್ ಇಂಡಿಯಾ' ಎಂಬ ಮಹತ್ವದ ಕೃತಿಗಳನ್ನು ಕೇಶವನ್ ಬರೆದಿದ್ದರು. ಇದರ ರಚನೆಯ ಹಿಂದೆ ಪ್ರಭಾಕರ ರಾವ್ ನೆರವಾಗಿದ್ದರು. ಕೇಶವನ್ ಸಹಿ ಮಾಡಿದ್ದ ಪುಸ್ತಕವನ್ನು ಪ್ರಭಾಕರ ರಾವ್ ನನಗೆ ಉಡುಗೊರೆಯಾಗಿ ನೀಡಿದ್ದರು. ನಂತರ ಹಲವು ಬಾರಿ ಪ್ರಭಾಕರ ರಾಯರನ್ನು ನಾನು ಭೇಟಿಯಾಗಿದ್ದೆ.

ನಿಷ್ಠುರವಾದಕ್ಕೆ ಇನ್ನೊಂದು ಹೆಸರಾಗಿದ್ದ ಯು. ಪ್ರಭಾಕರ ರಾವ್ ಅವರಲ್ಲಿ ಹಾಸ್ಯ ಪ್ರಜ್ಞೆಯೂ ಇತ್ತು. ಹಲವರಿಗೆ ಒಗಟಾಗಿದ್ದ ಯು. ಪ್ರಭಾಕರ ರಾವ್ ಅವರನ್ನು ಈ ನವರಾತ್ರಿಯ ವೇಳೆ ಮಂಗಳೂರಿನಲ್ಲಿ ಭೇಟಿಯಾಗಲು ಬಯಸಿದ್ದೆ. ಅವರ ಕುರಿತು ಒಂದು ಪುಸ್ತಕವನ್ನು ತರುವ ಯೋಚನೆ ಇತ್ತು. ಅದು ಈಗ ದೂರದ ಮಾತು.

ಸೂರ್ಯ ಮುಳುಗುವ ಮತ್ತು ಹುಟ್ಟುವ ಮೊದಲು ಯಾರ ಅಪ್ಪಣೆಯನ್ನೂ ಕೇಳುವುದಿಲ್ಲ. ಪ್ರಭಾಕರ ರಾವ್ ಸದ್ದಿಲ್ಲದೆ ತೆರಳಿದ್ದಾರೆ. ಸಂಧ್ಯಾ ಕಾಲದಲ್ಲಿ ಮುಳುಗುವ ಸೂರ್ಯ ಮತ್ತೆ ಉಷಾ ಕಾಲದಲ್ಲಿ ಉದಯಿಸುತ್ತಾನೆ.

■ **ವೈ. ಅವನೀಂದ್ರನಾಥ್ ರಾವ್**

**ದೆಹಲಿ ಕರ್ನಾಟಕ ಸಂಘ**
**ವಿದ್ಯಾರ್ಥಿ ವೇತನ 2011–12**

**2011–12ನೇ ಸಾಲಿಗಾಗಿ ನೀಡುವ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿಗಳನ್ನು ಕರೆಯಲಾಗಿದೆ. ಸಂಘದ ಸದಸ್ಯರು ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಅರ್ಜಿಯನ್ನು ಸಂಘದ ಕಾರ್ಯಾಲಯದಿಂದ ಪಡೆಯಬಹುದು. ಭರ್ತಿ ಮಾಡಿದ ಅರ್ಜಿಯನ್ನು ದಿನಾಂಕ : 05.11.2011ರೊಳಗಾಗಿ ಸಂಘದ ಕಾರ್ಯಾಲಯಕ್ಕೆ ತಲುಪಿಸಬೇಕು.**

**ಪ್ರಧಾನ ಕಾರ್ಯದರ್ಶಿ**

**ದಿವಂಗತ ಯು. ಪ್ರಭಾಕರ್ ರಾವ್**
**ಸ್ಮರಣಾರ್ಥ ಏಕಾಂಕ ನಾಟಕ ಸ್ಪರ್ಧೆ**

**ಈ ಸಾಲಿನ ಏಕಾಂಕ ನಾಟಕ ಸ್ಪರ್ಧೆಯು ನವೆಂಬರ್ ತಿಂಗಳ 11,12 ಮತ್ತು 13, 2011 ರಂದು ನಡೆಯಲಿದೆ.**

**ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ**
**011–26109615 / 65643615**



ದೆಹಲಿ ಕರ್ನಾಟಕ ಸಂಘ

ಡಾ.ದ.ರಾ.ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಧಾರವಾಡ

ಮತ್ತು

ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಸಹಯೋಗದೊಂದಿಗೆ

# ರಾಜಧಾನಿಯಲ್ಲಿ ವರಕವಿ ದ.ರಾ.ಬೇಂದ್ರೆ ಒಂದು ನೆನಪು
## ನವೆಂಬರ್ 5 ಮತ್ತು 6, 2011

ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ದ.ರಾ.ಬೇಂದ್ರೆಯವರ ಸಾಹಿತ್ಯ ಕುರಿತಾದ
ವಿಚಾರ ಗೋಷ್ಠಿ, ಬೇಂದ್ರೆ ಗೀತ ಗಾಯನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು

**ಭಾಗವಹಿಸುವ ವಿದ್ವಾಂಸರು:**

ಡಾ.ಶ್ಯಾಮಸುಂದರ್ ಬಿದರಕುಂದಿ, ಧರಣೀಂದ್ರ ಕುರಕುರಿ, ಡಾ. ಸರ್ಫ್ರಾಜ್ ಚಂದ್ರಗುತ್ತಿ, ಎಚ್.ಎಸ್. ವೆಂಕಟೇಶ್ ಮೂರ್ತಿ,
ಎಚ್.ಎಸ್. ರಾಘವೇಂದ್ರ ರಾವ್, ಒ.ಎಲ್. ನಾಗಭೂಷಣ ಸ್ವಾಮಿ, ಅಗ್ರಹಾರ ಕೃಷ್ಣಮೂರ್ತಿ,
ಡಾ.ಪುರುಷೋತ್ತಮ ಬಿಳಿಮಲೆ, ಡಾ.ಟಿ.ಎಸ್.ಸತ್ಯನಾಥ್ ಮತ್ತಿತರರು

ಪ್ರಮುಖ ಆಕರ್ಷಣೆ: ಶ್ರೀ ಚಂದ್ರಶೇಖರ್ ಕೆದಿಲಾಯ ಅವರಿಂದ ಬೇಂದ್ರೆ ಗೀತೆಗಳು

**ಎಲ್ಲರಿಗೂ ಸುಸ್ವಾಗತ**

**ಡಾ.ವೆಂಕಟಾಚಲ ಹೆಗಡೆ**
ಅಧ್ಯಕ್ಷರು

**ಸಿ.ಎಂ.ನಾಗರಾಜ**
ಪ್ರಧಾನ ಕಾರ್ಯದರ್ಶಿ


# Saujanya Printing Press

**A HOUSE OF QUALITY PRINTING**

C-95, Okhla Industrial Area, Phase-I,
New Delhi - 110 020
Phone : 26815778, 41611143
Mobile : 9811104398, 9811604398
e-mail : saujanyapp2010@gmail.com / hpgp2006@gmail.com

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ
ಬಹುವರ್ಣದ ಸುಸಜ್ಜಿತ ಮುದ್ರಣಾಲಯ

**ಸೌಜನ್ಯ ಪ್ರಿಂಟಿಂಗ್ ಪ್ರೆಸ್** ಮತ್ತು **ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್**

ನಾವು ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು, ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡುತ್ತೇವೆ.

ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು, ಬೈಂಡಿಂಗ್ ಕೆಲಸಗಳಿಗಾಗಿ ನಮ್ಮನ್ನು ದಯವಿಟ್ಟು ಸಂಪರ್ಕಿಸಿರಿ.

**ಮುದ್ರಣವೂ ಒಂದು ಕಲೆ, ಅದುವೇ ನಮ್ಮ ನೆಲೆ**

# ಮುಂಬಯಿಯ ಕರ್ನಾಟಕದಲ್ಲಿ ಸವಿನಯ ಕಾನೂನು ಭಂಗ ಚಳವಳಿಯಲ್ಲಿ ಮಹಿಳೆಯರ ಪಾತ್ರ

ಮುಂಬಯಿ ಕರ್ನಾಟಕದಲ್ಲಿ ನಡೆದ ಸವಿನಯ ಕಾನುನುಭಂಗ ಚಳವಳಿಯಲ್ಲಿ ಮಹಿಳೆಯರು ಪುರುಷರಂತೆ ಸಕ್ರಿಯವಾಗಿ ಭಾಗವಹಿಸಿದರು. ಈ ಭಾಗದ ವೀರ ಮಹಿಳೆಯರು ಸವಿನಯ ಕಾನೂನುಭಂಗ ಚಳವಳಿಯ ಅಂಗವಾಗಿ ನಡೆದ ಉಪ್ಪಿನ ಸತ್ಯಾಗ್ರಹ, ಈಚಲ ಗಿಡಗಳ ಸಂಹಾರ, ಪ್ರಭಾತಫೇರಿ, ಸೆರೆ-ಸೆಂದಿ ಹಾಗೂ ವಿದೇಶಿ ಅರಿವೆ ಅಂಗಡಿಗಳ ಮುಂದೆ ಪಿಕೆಟಿಂಗ್, ಚುನಾವಣೆಗಳ ಬಹಿಷ್ಕಾರ, ನಗರಸಭೆಗಳ ಮೇಲೆ ಧ್ವಜಾರೋಹಣ, ಕರನಿರಾಕರಣ, ಬೀಗ ಮುದ್ರೆಗಳ ಸಂಹಾರ, ಉಪವಾಸ ಸತ್ಯಾಗ್ರಹ ಮೊದಲಾದ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ, ಪೋಲಿಸರ ಹಾಗೂ ಕಂದಾಯ ಅಧಿಕಾರಿಗಳ ದಬ್ಬಾಳಿಕೆಗಳನ್ನು ಸಹಿಸಿ, ಕಾರಾಗೃಹ ಶಿಕ್ಷೆಯನ್ನು ಅನುಭವಿಸಿದರಲ್ಲದೇ ತಮ್ಮ ಮನೆ, ಆಸ್ತಿಪಾಸ್ತಿಗಳನ್ನು ಕಳೆದುಕೊಂಡು ದೇಶ ಸೇವೆ ಮಾಡಿದರು. ಈ ಮಹಿಳಾ ಹೋರಾಟಗಾರರ ಸಾಹಸ, ತ್ಯಾಗಗಳ ವೃತ್ತಾಂತ ಹೀಗಿದೆ.

**ಉಪ್ಪಿನ ಸತ್ಯಾಗ್ರಹ :** ಸತ್ಯಾಗ್ರಹ ಮಂಡಲದ ನಿರ್ಣಯದಂತೆ ಮುಂಬಯಿ ಕರ್ನಾಟಕದಲ್ಲಿ 13-4-1930ರಂದು ಉಪ್ಪಿನ ಕಾಯ್ದೆ ಭಂಗವಾಯಿತು. ಅಂದು ಕಾರವಾರದಲ್ಲಿ ಸಮುದ್ರದ ದಡದಿಂದ ಮೆರವಣಿಗೆಯಿಂದ ತಂದ ನೀರನ್ನು ಕುದಿಸಿ, ಉಪ್ಪನ್ನು ತಯಾರಿಸಿ ಲೀಲಾವು ಮಾಡಲಾಯಿತು. ಅದನ್ನು ಗಂಗೋವಳಿ ಮನೆತನದ ಮಹಿಳೆಯು 16ರೂ.ಗೆ ಕೊಂಡಳು. ಅದು ತರುಣ ಪೀಳಿಗೆಗೆ ಹೆಮ್ಮೆಯ ಮಾತಾಗಿ, ಬೀದಿ ಬೀದಿಯಲ್ಲಿ ಸುದ್ದಿಯಾಗಿ, ಜನರ ಮನದಲ್ಲಿ ದೇಶಭಕ್ತಿಯ ಕಂಪೂ ಮೂಡಲಾರಂಭಿಸಿತು.



ಅದರಂತೆ ಬಾಗಲಕೋಟೆಯಲ್ಲಿ 13-4-1930ರಂದು ಶ್ರೀನಿವಾಸರಾವ್ ಮಂಗಳವೆಡೆಯವರು ನಿಯಮಬಾಹಿರ ಉಪ್ಪನ್ನು ಮಾರಿ ಸತ್ಯಾಗ್ರಹ ಮಾಡಿದಾಗ, ಸತ್ಯಾಗ್ರಹ ಉಪ್ಪನ್ನು ಕೊಂಡುಕೊಳ್ಳಲು ಮಕ್ಕಳು, ಸ್ತ್ರೀಯರು ನೂಕುನುಗ್ಗಲು ಆಗಿ, ಪೋಲಿಸರಿಗೆ ಅವರ ಹೆಸರು ತಿಳಿಯದೇ ಪೇಚಾಡಿದರು. ರಂಗರಾವ್ ದಿವಾಕರರು 16-4-1930ರಂದು ಧಾರವಾಡದ ಸಾರ್ವಜನಿಕ ಸಭೆಯಲ್ಲಿ ಕರಮುಕ್ತ ಉಪ್ಪನ್ನು ಹಂಚಿ ಸತ್ಯಾಗ್ರಹ ಮಾಡಿದರು. ಅವರ ಕಟ್ಲೆಯ ವಿಚಾರಣೆ ನಡೆದಾಗ ಕೃಷ್ಣಾ ಬಾಯಿ ಪಂಜೇಕರರು ನ್ಯಾಯಾಲಯದಲ್ಲಿ ಮ್ಯಾಜಿಸ್ಟ್ರೇಟರಿಗೆ "ಯಾವ ಉಪ್ಪನ್ನು ಹಂಚಿದ ಅಪರಾಧಕ್ಕಾಗಿ ದಿವಾಕರರಿಗೆ ಶಿಕ್ಷೆ ಕೊಡಲಿರುವಿರೋ ಅದೇ ಉಪ್ಪನ್ನು ನಿಮಗೆ ಅರ್ಪಿಸುವೆ" ಎಂದು ಕರಮುಕ್ತ ಉಪ್ಪನ್ನು ಕೊಟ್ಟರು. ಆದರೆ ಕೃಷ್ಣಾಬಾಯಿಯನ್ನು ಬಂಧಿಸುವ ಧೈರ್ಯ ಮ್ಯಾಜಿಸ್ಟ್ರೇಟರಿಗಿರಲಿಲ್ಲ.

ನಿಪ್ಪಾಣಿಯ ನೆಹರು ಚೌಕನಲ್ಲಿ 24-1-1932ರಂದು ಗಂಗೂಬಾಯಿ ಭೀಮಾಜಿ ಕಿನರೆ ಎಂಬುವಳು ಉಪ್ಪಿನ ಸತ್ಯಾಗ್ರಹ ಮಾಡಿದಳು. ಇದರಿಂದ ಅವಳಿಗೆ ನಾಲ್ಕು ತಿಂಗಳ ಶಿಕ್ಷೆಯಾಯಿತು. ಮುಂಬಯಿ ಕರ್ನಾಟಕದ ಮಹಿಳೆಯರು ಉಪ್ಪಿನ ಸತ್ಯಾಗ್ರಹದಲ್ಲಿ ಪುರುಷರಂತೆ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಳ್ಳಲಿಲ್ಲ. ಅವರು ತಮ್ಮ ಕೈಲಾದ ಕಾರ್ಯ ಮಾಡಿದರು.

**ಚುನಾವಣೆ ಬಹಿಷ್ಕಾರ :** ಸವಿನಯ ಕಾನುನುಭಂಗ ಚಳವಳಿ ಅವಧಿಯಲ್ಲಿ 1930ರಲ್ಲಿ ನ್ಯಾಯ ಮಂಡಲಗಳಿಗೆ ಚುನಾವಣೆಗಳು ನಡೆದವು. ಅಖಿಲ ಭಾರತ ಕಾಂಗ್ರೆಸ್ ಕಮಿಟಿಯು ಚುನಾವಣೆಗಳನ್ನು ಬಹಿಷ್ಕರಿಸುವಂತೆ ಕರೆ ಕೊಟ್ಟಿತು. ಕಾಂಗ್ರೆಸ್ಸಿನ ಕರೆಯ ಮೇರೆಗೆ ಮುಂಬಯಿ ಕರ್ನಾಟಕದಲ್ಲಿ ನಡೆದ ನ್ಯಾಯ ಮಂಡಲಿಗಳ ಚುನಾವಣೆಯನ್ನು ಸಂಪೂರ್ಣವಾಗಿ ಬಹಿಷ್ಕರಿಸಲಾಯಿತು. ಈ ಬಹಿಷ್ಕಾರ ಚಳವಳಿಯಲ್ಲಿ ಮಹಿಳೆಯರು ತಮ್ಮ ಅಳಿಲು ಸೇವೆಯನ್ನು ಸಲ್ಲಿಸಿರುವರು. ಬಾಗಲಕೋಟೆಯಲ್ಲಿ 10-9-1930ರಂದು ಚುನಾವಣೆ ನಿಮಿತ್ತ 144ನೇ ಕಲಮನ್ನು ಜಾರಿಗೊಳಿಸಲಾಗಿತ್ತು. ಆದರೂ ಮಂಗಳವಡೆ, ಜಂಗಿನ್, ಜೋರಾಪುರ, ನರಗುಂದ, ಪದಕಿ, ನಿರಲಕೇರಿ ಮನೆತನದ ಮಹಿಳೆಯರು ಇತರ ನೂರಾರು ಮಹಿಳೆಯರೊಂದಿಗೆ 144ನೆ ಕಲಮನ್ನು ಮುರಿದು, ಚುನಾವಣೆಯನ್ನು ಬಹಿಷ್ಕರಿಸುವಂತೆ ಮತದಾರರಿಗೆ ವಿನಂತಿಸಿಕೊಂಡರು. ಅದರಿಂದ ನೂರಾರು ಮಹಿಳೆಯರನ್ನು ಬಂಧಿಸಿ ಸಾಯಂಕಾಲ ಬಿಡುಗಡೆ ಮಾಡಿದರು.

**ಕರನಿರಾಕರಣ :** ಗಾಂಧಿ-ಇರ್ವಿನ್ ಒಪ್ಪಂದ ಹಾಗೂ ದಿವಾಕರ-ಸ್ಮಾರ್ಟ್ ಒಪ್ಪಂದಗಳು ವಿಫಲವಾದ್ದರಿಂದ ಮುಂಬಯಿ ಕರ್ನಾಟಕದಲ್ಲಿ ಸವಿನಯ ಕಾನೂನುಭಂಗ ಚಳವಳಿಯನ್ನು ನವೀಕರಿಸಲಾಯಿತು. 1932 ರ ಕರನಿರಾಕರಣ ಚಳವಳಿಯಲ್ಲಿ ಉತ್ತರ ಕನ್ನಡ ಜಿಲ್ಲೆಯ ದೇಶಭಕ್ತರ ತ್ಯಾಗ, ಅವರು ಪಟ್ಟ ಕಷ್ಟಗಳು ಇಡೀ ದೇಶಕ್ಕೆ ತಿಳಿಯಿತು. ಪುರುಷರಂತೆ ಮಹಿಳೆಯರು ಕರನಿರಾಕರಣ ಚಳವಳಿಯಲ್ಲಿ ಭಾಗವಹಿಸಿದರು. ಕನ್ನಳ್ಳಿಯಲ್ಲಿ ಮಹಾದೇವಮ್ಮ ಮಂಜಯ್ಯ ಹೆಗ್ಡೆಯವರು ಸರಕಾರಕ್ಕೆ ಕರ ಕೊಡಲು ನಿರಾಕರಿಸಿದ್ದರಿಂದ ಪೋಲಿಸರು ಮಹಾದೇವಮ್ಮನವರ ಮನೆಯನ್ನು ಜಪ್ತಿಮಾಡಿ ಭಾರಿ ಸಾಮಾನುಗಳನ್ನು ಒಯ್ದರು.

ಸಿದ್ದಾಪುರ ತಾಲೂಕಿನ ಮಹಿಳೆಯರು ಖಾತೆದಾರರಾಗಿದ್ದು, ತಾಲೂಕಿನಾದ್ಯಂತ ನಡೆದ ಕರನಿರಾಕರಣ ಪ್ರತಿಜ್ಞಾ ಪತ್ರಕ್ಕೆ ಸಹಿ ಹಾಕಿದರು. ಅಲ್ಲದೆ ಎಂತಹ ಪ್ರಸಂಗ ಬಂದರೂ ತೀರ್ವೆಯನ್ನು ತುಂಬುವುದಿಲ್ಲ ಎಂದು ನಿರ್ಧರಿಸಿದರು. ಕರಬಂಧಿ ಚಳವಳಿಯಲ್ಲಿ ಸಿದ್ದಾಪುರ ತಾಲೂಕಿನ ಮಹಿಳೆಯರು ವಹಿಸಿದ ಪಾತ್ರ ನಿಜವಾಗಿಯೂ ಬೆರಗುಗೊಳಿಸುವಂತಹ ದಾಗಿತ್ತು. ಒಬ್ಬಳಂತೂ ಆರೂವರೆ ಆಣೆ ತೀರ್ವೆಯನ್ನು ತುಂಬಲು ನಿರಾಕರಿಸಿ ಮನೆ ಮಠಗಳನ್ನೆಲ್ಲ ಕಳೆದುಕೊಂಡಳು. ದುಗ್ಗಮ್ಮ ಆರ್. ಹೆಗ್ಡೆ ಹೂವಿನಮನೆಯವರ ಆಸ್ತಿ-ಪಾಸ್ತಿಗಳು ಜಪ್ತಿಯಾದವು.

ಉತ್ತರಕನ್ನಡ ಜಿಲ್ಲೆಯಲ್ಲಿ ನಡೆದ ಕರನಿರಾಕರಣ ಚಳವಳಿಯಲ್ಲಿ ಮಹಿಳೆಯರು ಸರಕಾರದೊಡನೆ ನೇರ ಹೋರಾಟಕ್ಕಿಳಿಯದಿದ್ದರೂ ಪುರುಷ ಹೋರಾಟಗಾರರಿಗೆ ಸಹಾಯ ಮಾಡಲು ಟೊಂಕಕಟ್ಟಿ ನಿಂತರು. ಒಂದು ಪ್ರಸಂಗದಲ್ಲಿ ಇಡಕಲ ಗದ್ದೆ ಮಂಜಯ್ಯ ಹೆಗ್ಡೆಯವರು ಸರಕಾರಕ್ಕೆ ಕಂದಾಯ ಕೊಡುವ ಕುರಿತು ವಿಚಾರಿಸಿದರು. ಏಕೆಂದರೆ ಅವರು ಸರಕಾರಕ್ಕೆ ಕಂದಾಯವನ್ನು ಕೊಡದೆ ತಮ್ಮಲ್ಲಿದ್ದ 200 ಪವನಗಳನ್ನು ಮನೆಯಲ್ಲಿ ಹೂತು ಹೊರಹೋಗಿದ್ದರು. ಪೋಲಿಸರು ಮಂಜಪ್ಪನವರ ಮನೆಯನ್ನು ಅಗೆಯಲು ಪ್ರಾರಂಭಿಸಿದಾಗ, ಹೆದರಿದ ಮಂಜಪ್ಪ ಸರಕಾರಕ್ಕೆ ಕಂದಾಯ ಕೊಡುವ ಕುರಿತು ತಮ್ಮ ಪತ್ನಿಗೆ ಕೇಳಿದನು. ಆಗ ಆ ವೀರ ಮಹಿಳೆ "ಈ ಸಂಗ್ರಾಮದಲ್ಲಿ ನಮ್ಮದೆಲ್ಲ ಸುಟ್ಟು ಸೂರೆಯಾಗಲಿ, ಆದರೆ ಸ್ವೀಕರಿಸಿದ ಸತ್ಯದ ಮಾರ್ಗ ತ್ಯಜಿಸುವುದು ಬೇಡ, ಸತ್ಯವೇ ನಮ್ಮನ್ನು ಉಳಿಸೈತಿ" ಎಂದು ಗುಡುಗಿದಳು. ಪೋಲಿಸರು ಪೂರ್ಣ ಮನೆಯನ್ನು ಅಗೆದರೂ ಯಾವ ನಿಕ್ಷೇಪವೂ ದೊರೆಯದೆ ನಿರಾಶರಾದರು. ಆಗ ಮಂಜಪ್ಪನವರು 'ನಿನ್ನ ಸತ್ಯ ನನ್ನನ್ನು ಉಳಿಸಿತು' ಎಂದು ಪತ್ನಿಗೆ ಹೇಳಿದರು.

1932ರ ನವೆಂಬರ್ ತಿಂಗಳಲ್ಲಿ ಹುಲಿಮನೆಯಲ್ಲಿ ಮಹಿಳಾ ಪರಿಷತ್ತು ನಡೆಯಿತು. ಅದಕ್ಕೆ ತಾರಾಬಾಯಿ ಆರ್. ಪೈ. ಅಧ್ಯಕ್ಷರು ಹಾಗೂ ಮಳ್ಳಿಮನೆ ಮಹಾದೇವಿ ಸ್ವಾಗತಾಧ್ಯಕ್ಷರಾಗಿದ್ದರು. ಸಭೆಯ ನಂತರ ಮೆರವಣಿಗೆಯಲ್ಲಿ ಬೀಳಗಿಗೆ ಬರುತ್ತಿದ್ದಾಗ ಹರುನ್ ಎಂಬ ಪೋಲಿಸನು ಈ ಮಹಿಳೆಯರಿಗೆ ಹೊಡೆದು ಹಣ್ಣುಗಾಯಿ ನೀರುಗಾಯಿ ಮಾಡಿದನು.

ಸಿದ್ದಾಪುರ ತಾಲೂಕಿನ ವಿಧವೆಯರಾದ ಹೊಸಕೆರೆ ಹೊನ್ನಮ್ಮ ಬೀರಣ್ಣ, ಶೆಟಗೆರಿ ಸಣ್ಣಮ್ಮ ಬೊಮ್ಮಯ್ಯ, ಸಾಂತಮ್ಮ ವೆಂಕಣ್ಣ ಹಾಗೂ ಶಿಳ್ಳಾದ ದೇವಮ್ಮ ವೆಂಕಣ್ಣರಂತಹ ವೀರ ಮಹಿಳೆಯರ ಖಾತೆಗಳು ತಮ್ಮ ಹೆಸರಿನಲ್ಲಿದ್ದವು. 1933ರಲ್ಲಿ ಕರಬಂದಿ ಚಳವಳಿಯಲ್ಲಿ ದುಮುಕಿ, ತಮ್ಮ ಭೂಮಿಯನ್ನು ಕಳೆದುಕೊಂಡರು. ಈ ಪ್ರತಿಯೊಬ್ಬ ವಿಧವೆಯರಿಗೂ 2-3 ವರ್ಷ ವಯಸ್ಸಿನ ಅಪ್ರಾಪ್ತ ಮಕ್ಕಳಿದ್ದರು. ಸಣ್ಣಮ್ಮ ಹಾಗೂ ಸಾಂತಮ್ಮರ ಪೂರ್ಣ ಆಸ್ತಿ ಜಪ್ತಿ ಮಾಡಿ ಅವರನ್ನು ಜೈಲಿಗೆ ಹಾಕಿದರು. ಬಿಡುಗಡೆಯ ನಂತರ ಧೃತಿಗೆಡದ ಈ ಮಹಿಳೆಯರು ತಮ್ಮ ಮೈಮೇಲಿನ ಒಡವೆ, ಮನೆಯಲ್ಲಿನ ಕಂಚು, ತಾಮ್ರ ವಸ್ತುಗಳನ್ನು ಮಾರಿ ಉಪಜೀವನ ನಡೆಸಿದರು.

ಅಂಕೋಲೆ ಕರಬಂದಿ ಚಳವಳಿಯಲ್ಲಿ ಗೋಕರ್ಣದ ಪಾತ್ರ ಹಿರಿದಾಗಿತ್ತು. ವಿಶೇಷವಾಗಿ ತುಂಗಾಬಾಯಿ ಪನ್ನಿ ಹಾಗೂ ಸರಸ್ವತಿಬಾಯಿ ಭಟ್ಟ ಅವರು ಕರಪತ್ರ ಮುದ್ರಣ ಹಾಗೂ ಅವುಗಳನ್ನು ಸಕಾಲಕ್ಕೆ ಅಂಕೋಲೆ ಮುಖ್ಯ ಕಛೇರಿಗೆ ಗುಪ್ತವಾಗಿ ತಲುಪಿಸುವ ಕಾರ್ಯವನ್ನು ಯಶಸ್ವಿಯಾಗಿ ಮಾಡಿದರು. ಕೃಷ್ಣಾಬಾಯಿ ಪನ್ನಿಯವರ ಮನೆಯು ಕರಪತ್ರ ಮುದ್ರಣ ಹಾಗೂ ಇತರ ಚಟುವಟಿಕೆಗಳ ಕೇಂದ್ರವಾಗಿದ್ದಿತು. ಅದರಂತೆ ಸಿದ್ದಾಪುರ ತಾಲೂಕಿನ ಹಳ್ಳಿಗಳ ಸುದ್ದಿಗಳನ್ನು ಗುಪ್ತವಾಗಿ ತಡಗಳಲೆಗೆ ಮುಟ್ಟಿಸುವ ಕಾರ್ಯವನ್ನು ಕಲ್ಲಾಳದ ಕಾವೇರಮ್ಮ, ಹಣಜಿಬೈಲು ದುಗ್ಗಮ್ಮ, ಹರಿಗೆ ಸರಸ್ವತಮ್ಮ, ದೊಡ್ಮನೆ ಮಹಾದೇವಮ್ಮನವರು ಮಾಡುತ್ತಿದ್ದರು.

**ಬೀಗ ಮುದ್ರೆಗಳ ಸಂಹಾರ :** ಕರನಿರಾಕರಣ ಚಳವಳಿಯ ಪರಿಣಾಮವಾಗಿ ಸರಕಾರ ತಾನು ವಶಪಡಿಸಿಕೊಂಡ ಮನೆಗಳಿಗೆ ಬೀಗ ಮುದ್ರೆ ಹಾಕಿಸಿತು. ಇದರಿಂದ ಚಳವಳಿಗಾರರು ಬೀಗ ಮುದ್ರೆಗಳನ್ನು ಒಡೆಯುವ ಯೋಜನೆ ಹಾಕಿದರು. ಪುರುಷರಂತೆ ಮಹಿಳೆಯರು ಈ ಬೀಗ ಮುದ್ರೆಗಳನ್ನು ಸಂಹಾರ ಮಾಡುವ ಕಾರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿದರು. 2–3–1932ರಂದು ಪ್ರಾಂತಸಾಹೇಬರು, ಅಧಿಕಾರಿಗಳು ಹಾಗು 40 ಪೋಲಿಸರು ಶಿರಗುಂಜಿ, ವಾಸರಕುದ್ರಿ ಹಾಗೂ ವಾಸರೆಯ ಮನೆಗಳ ಮೇಲೆ ದಾಳಿ ಮಾಡಿ ಮನೆಗಳಲ್ಲಿ ವಸ್ತುಗಳನ್ನು ಜಪ್ತಿ ಮಾಡಿ, ಅವುಗಳಿಗೆ ಬೀಗಮುದ್ರೆ ಹಾಕಿ ಪೋಲಿಸ್ ಕಾವಲಿಟ್ಟರು. ಬೀಗ ಮುದ್ರೆ ಒಡೆಯುವ ಕಾರ್ಯಕ್ರಮದಂತೆ ಕಣಗಿಲದ ಮೊಣುದೇವಿಯು ವಾಸರಕುದ್ರಿಯ ಮಹಿಳೆಯರ ಸಹಾಯದಿಂದ 13–8–1932 ರಂದು ಬೀಗದ ಸೀಲು ಒಡೆಯುವಾಗ ಪೋಲಿಸರು ಅವಳನ್ನು ಹೊರಹಾಕಿದರು. ಆದರು ಮತ್ತೆ ಮತ್ತೆ ಮನೆಗೆ ನುಗ್ಗಿ, ಪೋಲಿಸರ ಎಳೆತಕ್ಕೆ ಹಾಗೂ ಹೊಡೆತಕ್ಕೆ ಎಚ್ಚರ ತಪ್ಪಿ ಬಿದ್ದಳು. ಮೊಣುದೇವಿ ಸತ್ತಳೆಂದು ತಿಳಿದು ಆಸ್ಪತ್ರೆಗೆ ಸಾಗಿಸಲಾಯಿತು. ಉಪಚರಿಸಿದ ನಂತರ ಅವಳು ಎಚ್ಚೆತ್ತಳು.

ಅದರಂತೆ ಬೊಳೆ ಗ್ರಾಮದಲ್ಲಿ ಸೀಲು ಒಡೆಯುವ ಕಾರ್ಯದಲ್ಲಿ ಜಂಬಗೊಂಡ ಸಾಂತಮ್ಮ ಮುಂಚೂಣಿಯಲ್ಲಿದ್ದಳು. ಅಲ್ಲದೆ ಬೇಲೇಕರೆ ದಾಕಮ್ಮ ರಾಮನಾಯ್ಕ ಶೆಟಗೆರೆ, ದೇವು ಬೊಮ್ಮನಾಯ್ಕ, ಬೊಳೆ ಹನಮು ಹೊನ್ನಪ್ಪ ನಾಯಕ, ಹೊಸಕೇರಿ ಬೊಕ್ಕಮ್ಮ ರಾಮ ನಾಯಕ ಮೊದಲಾದವರು ಸರಕಾರ ಮನೆಗಳಿಗೆ ಹಾಕಿದ ಬೀಗ ಮುದ್ರೆಗಳನ್ನು ಒಡೆಯುವ ಕಾರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿದರು.

ಕೆಳಗಿನಮನೆ ನಾಗೇಶ ಹೆಗ್ಡೆಯವರು ಸರಕಾರಕ್ಕೆ ಕಂದಾಯ ಕೊಡಲಿಲ್ಲವಾದ್ದರಿಂದ ಅವರ ಮನೆಯನ್ನು ವಶಪಡಿಸಿಕೊಂಡು ಬೀಗ ಮುದ್ರೆ ಹಾಕಲಾಯಿತು. ಬೀಗ ಮುದ್ರೆ ಒಡೆಯುವ ಕಾರ್ಯಕ್ರಮದಂತೆ 28–11–1932ರಂದು ತಿಮ್ಮಮ್ಮ ಜಿ. ಹೆಗ್ಡೆ, ಮಹಾದೇವಿ ಎನ್. ಹೆಗ್ಡೆ, ದಾಸನಹುಡ್ಲಿ ಸಾವಿತ್ರಿ ವಿ. ಭಟ್ಟ, ಬಿಜ್ಜಾಳ ಯಮುನಾ ಜಿ. ಹೆಗ್ಡೆ, ಮಂಡಸುರ ಲಕ್ಷ್ಮಮ್ಮಾ ಡಿ. ಹೆಗ್ಡೆ, ಹರಿಗೆ ಮಾಹಾದೇವಿ ಎನ್. ಹೆಗ್ಡೆ ಹಾಗೂ ಗುಡ್ಡೆಕೊಪ್ಪ ಸರಸ್ವತಿ ಪಿ. ಭಟ್ಟರವರು ಪೋಲಿಸರ ಎದುರಿಗೆ ಮನೆಯ ಬೀಗ ಮುದ್ರೆಯನ್ನು ಒಡೆದು ಒಳ ಪ್ರವೇಶಿಸಿದರು. ಮರುದಿನವೇ ಒಂಬತ್ತು ಮಹಿಳೆಯರ ಬಂಧನವಾಗಿ 7–12–1932ರಂದು ತಲಾ ಒಂದು ವರ್ಷ ಕಠಿಣ ಶಿಕ್ಷೆಯನ್ನು ವಿಧಿಸಲಾಯಿತು. ಹೀಗೆ ಬೀಗ ಮುದ್ರೆ ಒಡೆಯುವ ಕಾರ್ಯದಲ್ಲಿ ವೀರ ಮಹಿಳೆಯರು ತಮ್ಮ ಶೌರ್ಯವನ್ನು ಪ್ರದರ್ಶಿಸಿದರು.

**ಸತ್ಯಾಗ್ರಹ :** 1932ರಲ್ಲಿ ಪ್ರಾರಂಭವಾದ ಕರನಿರಾಕರಣೆ ಚಳವಳಿ ಪರಿಣಾಮವಾಗಿ ಸರಕಾರ ಕರನಿರಾಕರಿಸಿದವರ ಮೇಲೆ ಉಗ್ರ ಕ್ರಮ ಕೈಗೊಂಡಿತು. ಸತ್ಯಾಗ್ರಹಿಗಳು ಭೂಕಂದಾಯ ಕೊಡಲು ನಿರಾಕರಿಸಿದ್ದರಿಂದ ಅವರ ಮನೆಗಳನ್ನು ಜಪ್ತಿ ಮಾಡಿ, ಕಂದಾಯವನ್ನು ಭರಿಸಿಕೊಳ್ಳಲು ಸರಕಾರಿ ಅಧಿಕಾರಿಗಳು ಮುಂದಾದರು. ಆದರೆ ದೃಢನಿರ್ಧಾರ ಮಾಡಿದ ಉತ್ತರ ಕನ್ನಡ ಜಿಲ್ಲೆಯ ಸತ್ಯಾಗ್ರಹಿಗಳು ಫೆಬ್ರವರಿ ತಿಂಗಳ ಕೊನೆಯವರೆಗೆ ಒಂದಾಣೆ ಕಂದಾಯವನ್ನೂ ತುಂಬಲಿಲ್ಲ. ಇದರಿಂದ ಕಂಗೆಟ್ಟ ಸರಕಾರ ಚಿತ್ರಹಿಂಸೆಯ ಮೂಲಕ ಸತ್ಯಾಗ್ರಹಿಗಳ ಮನೆ ಮಠಗಳನ್ನು ಜಪ್ತಿ ಮಾಡಿ, ದನಕರುಗಳನ್ನು, ವಸ್ತುವಡವೆಗಳನ್ನು ಹರಾಜಿಗೆ ಇಟ್ಟಿತು. ಅದನ್ನು ತಡೆದು ಸರಕಾರಕ್ಕೆ ಹಾಗೂ ಹರಾಜಿನಲ್ಲಿ ಜಾನುವಾರುಗಳನ್ನು ಪಡೆದವರ ಮನೆಯ ಮುಂದೆ ಚಳವಳಿ ನಡೆಸಿರುವ ವೃತ್ತಾಂತವೇ ಉತ್ತರ ಕನ್ನಡ ಜಿಲ್ಲೆಯ ವೀರ ಮಹಿಳೆಯರ ಉಪವಾಸ ಸತ್ಯಾಗ್ರಹ.

4–3–1932ರಂದು ಸಿದ್ದಾಪುರದಲ್ಲಿ 'ಮಹಾತ್ಮ ಗಾಂಧೀಜಿಯವರ ಬಂಧನದ ದಿನ' ಆಚರಿಸುವ ನಿಮಿತ್ತ ಸುತ್ತಮುತ್ತಲ ಗ್ರಾಮಗಳಿಂದ ಸಾವಿರಾರು ಜನರು ದೊಡ್ಮನೆ ರಾಮನಾಥ ಹೆಗ್ಡೆ ಹಾಗೂ ಅವರ ಧರ್ಮಪತ್ನಿ ಲಕ್ಷ್ಮಮ್ಮರ ನಾಯಕತ್ವದಲ್ಲಿ ಮೆರವಣಿಗೆ ಹೊರಡಿಸಿದರು. ಅಂದು ಪ್ರಾತಃಕಾಲ ಮೊದಲ ಮೆರವಣಿಗೆಯು ಯಾವ ಆತಂಕವಿಲ್ಲದೆ ನಡೆಯಿತು. ಮಧ್ಯಾಹ್ನದ ವೇಳೆಗೆ ಎರಡನೇ ಮೆರವಣಿಗೆಯು ಹೊರಡುತ್ತಲೇ ಎಲ್ಲರ ಬಂಧನವಾಯಿತು. ಜನರಾಶಿಯ ಗದ್ದಲವನ್ನು ಮೀರಿ 'ಮಹಾತ್ಮ ಗಾಂಧೀಕೀ ಜೈ' ಎಂಬ ಘೋಷಣೆ ಮೊಳಗಿತು. ಪೋಲಿಸರಿಗೆ ದಿಗ್ಭ್ರಮೆಯುಂಟಾಯಿತು. ಹುಚ್ಚೆದ್ದು ಲಾಠೀಪ್ರಹಾರ ಪ್ರಾರಂಭಿಸಿದರು. ಜನರು ದಿಕ್ಕೆಟ್ಟು ಓಡಲು ಪ್ರಾರಂಭಿಸಿದರು. ಆ ಭಯಾನಕವಾದ ದಿವಸದಂದು ದೊಡ್ಮನೆ ರಾಮನಾಥ ಹೆಗ್ದೆಯವರನ್ನು ಹಣ್ಣುಗಾಯಿ ನೀರುಗಾಯಿ ಮಾಡಲಾಯಿತು. ಸಾವಿರಾರು ಜನರನ್ನು ಬಂಧಿಸಲಾಯಿತು. ದೊಡ್ಮನೆ ಮಹಾದೇವಿತಾಯಿ ಮುಂತಾದ ನೂರಾರು ಮಹಿಳೆಯರು ಮರುದಿನ ಸತ್ಯಾಗ್ರಹ ಮಾಡುವವರೆಂಬ ಸುದ್ದಿ ಬಲವಾಗಿ ಹರಡಿದ್ದರಿಂದ, ಬೆದರಿಕೆಗೆ ಜಗ್ಗಿ ಮಾಫಿ ಬೇಡಲು ಹೊರಟ ಕೆಲವು ನಿಷ್ಕಪಟ ಹಳ್ಳಿಯ ರೈತರು ಶೌರ್ಯ ತಳೆದು ಮಾಫಿ ಪತ್ರಕ್ಕೆ ಸಹಿ ಹಾಕಲು ನಿರಾಕರಿಸಿದರು.

ಈ ಮಧ್ಯೆ ಪುರುಷ ಹೋರಾಟಗಾರರು ಚಳವಳಿಯಲ್ಲಿ ಭಾಗವಹಿಸಲು ಹಿಂಜರಿದರು. ಆಗ ಮಹಿಳೆಯರು ಗುಂಪು ಗುಂಪಾಗಿ ಹೋರಾಟಕ್ಕೆ ಬಂದಿಳಿದರು. ತಮ್ಮ ಮನೆಗಳ ಏಕಾಂತದಲ್ಲಿ ಗಂಡಸರಿಗಾದ ಬವಣೆಯ ಆಕ್ರಂದನವನ್ನು ಕೇಳಿ, ಹೀನಾಯಗೊಂಡು, ಹೇಡಿಗಳಿಗೆ ಛೀಮಾರಿ ಹಾಕಲೂ, ಸೊಕ್ಕಿನಿಂದ ವಿಜೃಂಭಿಸುತ್ತಿದ್ದ ಸರಕಾರದ ಹೇಡಿ ನೌಕರರನ್ನು ಎದುರಿಸಲೂ ಈ ಕೋಮಲಾಂಗಿಯರು ಮುನ್ನುಗ್ಗಿ ಬಂದರು. ಹವ್ಯಕ ಮಹಿಳೆಯರು, ದಾಕ್ಷೀಕವಂತೆಯರು. ಐತಿಹಾಸಿಕ ಸವಿನಯ ಕಾನೂನುಭಂಗ ಚಳವಳಿಯ ಹಲವು ಸಂದರ್ಭಗಳಲ್ಲಿ ಈ ಧೀರ ಸೋದರಿಯರು, ಗಂಡಸರನ್ನು ಮೂದಲಿಕೆಯಿಂದಲೂ, ಸ್ಫೂರ್ತಿದಾಯಕವಾದ ತಮ್ಮ ಸ್ವಂತ ಮೇಲ್ಪಂಕ್ತಿಯಿಂದಲೂ ಹುರಿದುಂಬಿಸಿದರು.

ಒಟ್ಟಿನಲ್ಲಿ ಈ ಮಹಿಳೆಯರು ತೋರಿದ ಧೈರ್ಯ, ಸತ್ಯಾಗ್ರಹದ ಯಶಸ್ವಿಗಾಗಿ ಮಾಡಿಕೊಂಡ ದೈಹಿಕ ಹಾಗೂ ಮಾನಸಿಕ ದಂಡನೆಗಳು ಸುವರ್ಣಾಕ್ಷರಗಳಲ್ಲಿ ಬರೆಯಬೇಕಾದವುಗಳಾಗಿವೆ.

■ **ಗಾಂಧಿ ಜಯಂತಿಯ ಸಂದರ್ಭದಲ್ಲಿ ಡಾ. ಜಿ.ಎ. ಬಿರಾದಾರ ಅವರ 'ಮುಂಬಯಿ ಕರ್ನಾಟಕದಲ್ಲಿ' ಎಂಬ ಪುಸ್ತಕದಿಂದ ಆಯ್ದ ಭಾಗ**

# ಬಿಳಿಮಲೆ ಅವರ "ಬಹುರೂಪ"



ಜಾನಪದ ವಿದ್ವಾಂಸ, ಸಾಹಿತಿ, ಲೇಖಕ, ವಿಮರ್ಶಕ ಡಾ. ಪುರುಷೋತ್ತಮ ಬಿಳಿಮಲೆ ಅವರ 'ಬಹುರೂಪ' ಅಂಕಣವು ಕನ್ನಡದ ಜನಪ್ರಿಯ ದಿನಪತ್ರಿಕೆ 'ವಿಜಯ ಕರ್ನಾಟಕ'ದಲ್ಲಿ ಇತ್ತೀಚೆಗೆ ಆರಂಭವಾಗಿದೆ. ಡಾ. ಪುರುಷೋತ್ತಮ ಬಿಳಿಮಲೆ ಅವರು ಸಮಕಾಲೀನ ಕನ್ನಡದ ಸಂದರ್ಭದಲ್ಲಿ ಪ್ರಚಲಿತದಲ್ಲಿರುವ ಕೆಲವೇ ಕೆಲವು ಪ್ರಮುಖ ಬರಹಗಾರರಲ್ಲಿ ಒಬ್ಬರು. ಇವರ ಬರಹಗಳಲ್ಲಿರುವ ವಿಶಿಷ್ಟತೆಯೆಂದರೆ ಸಾಹಿತ್ಯದ ಓದುಗರನ್ನು ಹೊಸ ಹೊಸ ಶೋಧನೆಗೆ ತೊಡಗಿಸಬಲ್ಲ ಒಳವುಗಳನ್ನು ಹೊಂದಿರುವಂತಹವುಗಳಾಗಿವೆ. ಲೇಖನಕ್ಕೆ ಆಯ್ಕೆ ಮಾಡಿಕೊಂಡ ವಿಷಯದಲ್ಲಿ ಅದಾಗಲೇ ರೂಢಿಯಲ್ಲಿರುವ ಚಿಂತನಾಕ್ರಮಕ್ಕೆ ಪರ್ಯಾಯವಾದ ಬೇರೊಂದು ಚಿಂತನಾ ಕ್ರಮವನ್ನು ಶೋಧಿಸಿಕೊಳ್ಳುತ್ತಾ ಹೋಗುವ ಡಾ. ಬಿಳಿಮಲೆ ಅವರ ಶೈಲಿಯೇ ಸಾಹಿತ್ಯಾಸಕ್ತರನ್ನು ಆಕರ್ಷಿಸಬಲ್ಲ ಶಕ್ತಿಯಾಗಿದೆ. ಸಮಕಾಲೀನ ಜಗತ್ತಿನ ಆಗು–ಹೋಗುಗಳನ್ನೆಲ್ಲ ಅತ್ಯಂತ ಸೂಕ್ಷ್ಮವಾಗಿ ಚಿಂತನೆಗೊಳಪಡಿಸುತ್ತಲೇ ನಾಳಿನ ಸಾಹಿತ್ಯ ಸಂಶೋಧಕರನ್ನು ರೂಪಿಸಬಲ್ಲ ಇವರನ್ನು ಅಂಕಣಕಾರರನ್ನಾಗಿ ಗುರುತಿಸುವ ಮೂಲಕ ಕನ್ನಡ ನಾಡಿನ ಪ್ರಮುಖ ಜನಪ್ರಿಯ ದಿನಪತ್ರಿಕೆ 'ವಿಜಯ ಕರ್ನಾಟಕ'ವು ಕನ್ನಡದ ಓದುಗರಿಗೆ 2011 ರ ಕನ್ನಡ ರಾಜ್ಯೋತ್ಸವದ ಮುಂಗಡ ಕೊಡುಗೆಯನ್ನು ನೀಡಿದೆ ಎಂದರೆ ಅತಿಶಯೋಕ್ತಿ ಆಗಲಾರದು.

**ಹೊರನಾಡ ಕನ್ನಡಿಗರ ರಾಯಭಾರಿ 'ಬಹುರೂಪಿ' ಬಿಳಿಮಲೆ ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳು.**

## ಗುರ್‌ಗಾಂವ್ ಕನ್ನಡ ಸಂಘ



ಪ್ರತಿ ವರ್ಷದಂತೆ ಈ ಬಾರಿಯೂ ಕೂಡ ಗುರ್‌ಗಾಂವ್ ಕನ್ನಡ ಸಂಘದವರು ಸೆಪ್ಟಂಬರ್ 1ರಿಂದ ಸೆಪ್ಟಂಬರ್ 4ರವರೆಗೆ ಗುರ್‌ಗಾಂವ್‌ನ ರಾಧಾಕೃಷ್ಣ ಹಾಲ್‌ನಲ್ಲಿ ಗಣೇಶೋತ್ಸವವನ್ನು ಆಚರಿಸಿದರು. ಸೆಪ್ಟೆಂಬರ್ 1 ರಂದು ರಾಘವೇಂದ್ರ ಭಟ್ಟರ ನೇತೃತ್ವದಲ್ಲಿ ವಿಧಿವತ್ತಾದ ಪೂಜಾ ವಿಧಾನಗಳಿಂದ ಗಣೇಶನನ್ನು ಪ್ರತಿಷ್ಠಾಪಿಸಲಾಯಿತು. ನಂತರ ಮೂರು ದಿನಗಳ ಕಾಲ ಬೆಳಿಗ್ಗೆ ಹಾಗೂ ಸಂಜೆ ಪೂಜೆ ಮತ್ತು ಭಜನಾ ಕಾರ್ಯಕ್ರಮವನ್ನು ಗುರ್‌ಗಾಂವ್ ಕನ್ನಡಿಗರೆಲ್ಲರೂ ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿ ನೆರವೇರಿಸಿದರು. ಸೆಪ್ಟಂಬರ್ 4, ಭಾನುವಾರದಂದು ಮೆರವಣಿಗೆಯಲ್ಲಿ ಗಣೇಶನನ್ನು ಕೊಂಡೊಯ್ದು ಧಮಧಮ ಕೆರೆಯಲ್ಲಿ ವಿಸರ್ಜಿಸಲಾಯಿತು. ಹೀರೋ ಹೊಂಡ ಯುವಕರು ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ನೆರವಾದರು.

**▪ ದಯಾನಂದ ಎಂ., ಗುರ್‌ಗಾಂವ್**

## ಗೌಡ ಸಾರಸ್ವತ ಸಮಾಜ



ಪ್ರತಿ ವರ್ಷದಂತೆ, ಈ ಸಲವು ನವದೆಹಲಿಯ ಗೌಡ ಸಾರಸ್ವತ ಸಮಾಜದ ಗಣೇಶೋತ್ಸವವನ್ನು ಸೆಪ್ಟಂಬರ್ 1 ರಿಂದ 5 ರವರೆಗೆ ನ್ಯೂ ರಾಜೇಂದ್ರನಗರದ ಗೌಡ ಸಾರಸ್ವತ ಭವನದ ಸಾಂಸ್ಕೃತಿಕ ಕಲಾಮಂದಿರದಲ್ಲಿ ಸಂಭ್ರಮ ವೈಭವದಿಂದ ಆಚರಿಸಲಾಯಿತು. ಸಮಾರಂಭದಲ್ಲಿ ಶ್ರೀಯುತ ಎಲ್.ಕೆ. ಅದ್ವಾನಿಯವರು ಸೇರಿದಂತೆ, ದೆಹಲಿಯ ಅನೇಕಾನೇಕ ಗಣ್ಯರು, ಮಹನೀಯರು, ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು ಭಾಗವಹಿಸಿ, ಪೂಜೆ-ಪ್ರಸಾದ ಭೋಜನ ಸ್ವೀಕರಿಸಿದರು. ಇದು ದೆಹಲಿಯ ಕೊಂಕಣಿ ಸಮಾಜದ 36ನೇ ಗಣೇಶ ಉತ್ಸವ. ವರ್ಷದಿಂದ ವರ್ಷಕ್ಕೆ ಇದರ ಭಕ್ತರ ಸಂಖ್ಯೆ ಹೆಚ್ಚುತ್ತಿರುವುದಕ್ಕೆ ಇದರ ಜನಪ್ರಿಯತೆಯೇ ಕಾರಣ. ಭವ್ಯ ಮೆರವಣಿಗೆಯಲ್ಲಿ ಸಾಂಪ್ರದಾಯಿಕವಾಗಿ ಕೊನೆಯ ದಿನ ಯಮುನಾ ನದಿ ತೀರದಲ್ಲಿ ಗಣೇಶನನ್ನು ವಿಸರ್ಜಿಸಲಾಯಿತು.

**▪ ನಂದಿನಿ ಮಲ್ಯ**

## ದ್ವಾರಕ ಕನ್ನಡ ಕೂಟ



ಸೆಪ್ಟಂಬರ್ 3ರಂದು ದ್ವಾರಕದಲ್ಲಿರುವ ಕನ್ನಡಿಗರು ಗಣೇಶೋತ್ಸವವನ್ನು ಸೆಕ್ಟರ್ 4ರಲ್ಲಿರುವ ಅನಂತ ಅಪಾರ್ಟ್‌ಮೆಂಟ್‌ನಲ್ಲಿ ಬಹಳ ಅದ್ದೂರಿಯಾಗಿ ಆಚರಿಸಿದರು. ಬೆಳಿಗ್ಗೆ ಗಣಹೋಮ, ಮಧ್ಯಾಹ್ನ ಪೂಜೆ, ಭೋಜನ ಹಾಗೂ ಸಾಯಂಕಾಲ ವಿಸರ್ಜನೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು. ಈ ಮಧ್ಯೆ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮ, ಭರತನಾಟ್ಯ, ಸಂಗೀತ ಕಾರ್ಯಕ್ರಮ ನಡೆಯಿತು. ಪೂಜಾ ಕಾರ್ಯಕ್ರಮಗಳನ್ನು ಪೇಜಾವರ ಮಠದ ಶ್ರೀ ದೇವಿಪ್ರಸಾದ್ ಅವರ ನೇತೃತ್ವದಲ್ಲಿ ನಡೆಸಲಾಯಿತು.

**▪ಅಮೃತೇಶ್ ರಾವ್**

## ಜನಕಪುರಿ ಕನ್ನಡ ಕೂಟ




ಜನಕಪುರಿ ಕನ್ನಡ ಕೂಟವು ಪ್ರತಿ ವರ್ಷದಂತೆ ಈ ಬಾರಿಯು ಸಿ-3, ರಾಮಮಂದಿರದಲ್ಲಿ ಗಣೇಶೋತ್ಸವವನ್ನು ಸಂಭ್ರಮದಿಂದ ಆಚರಿಸಿತು. ಕೂಟದ ಸದಸ್ಯ ಪ್ರಕಾಶ್ ದಂಪತಿಗಳು ಹನುಮಂತಾಚಾರ್ಯರ ನೇತೃತ್ವದಲ್ಲಿ ಗಣೇಶನನ್ನು ಪ್ರತಿಷ್ಠಾಪಿಸಿ ಪೂಜಾ ಕಾರ್ಯಗಳನ್ನು ವಿಧಿವತ್ತಾಗಿ ನೆರವೇರಿಸಿದರು. ನಂತರ ಜನಕಪುರಿ ಮಹಿಳಾ ಮಂಡಳಿಯ ಸದಸ್ಯೆಯರಿಂದ ಭಜನೆ ಹಾಗೂ ಅಪೂರ್ವ ಕಲಾವೃಂದದವರಿಂದ ಭರತನಾಟ್ಯ ಕಾರ್ಯಕ್ರಮ ಜರುಗಿತು. ಮಧ್ಯಾಹ್ನದ ಭೋಜನದ ನಂತರ ಕೂಟದ ಅಧ್ಯಕ್ಷ ಬಿ.ಎಸ್. ರಾಮಕೃಷ್ಣ ಹಾಗೂ ಕೂಟದ ಎಲ್ಲ ಸದಸ್ಯರು ಜೊತೆಗೂಡಿ ಯಮುನಾ ನದಿಯಲ್ಲಿ ಗಣಪತಿಯನ್ನು ಭಕ್ತಿಪೂರ್ವಕವಾಗಿ ವಿಸರ್ಜಿಸಿದರು.

**▪ಶ್ರೀನಾಥ್ ಎನ್.ಆರ್.**

## ತುಳಸಾ ಕಲುಮಂಗಿ ಅವರಿಗೆ ಬೆನಕ ಕಥಾ ಸ್ಪರ್ಧೆಯಲ್ಲಿ ಬಹುಮಾನ



ದಿ.ಶರ್ವಾಣಿ ಅವರ ಸವಿ ನೆನಪಿನಲ್ಲಿ ನಡೆದ "ಬೆನಕ ಸಾಹಿತ್ಯ ಸ್ಪರ್ಧೆ -2011" (ಅನುವಾದಿತ ಕಥಾ ಸ್ಪರ್ಧೆ ) ರಲ್ಲಿ ಶ್ರೀಮತಿ ತುಳಸಾ ಕಲುಮಂಗಿ ಅವರಿಗೆ 'ಅಮ್ಮ' ಎಂಬ ಕತೆಗಾಗಿ ದ್ವಿತೀಯ ಬಹುಮಾನ ದೊರೆತಿದೆ. ತುಳಸಾ ಕಲುಮಂಗಿ ಅವರು ಬಹುಮಾನವಾಗಿ ಎರಡು ಸಾವಿರ ರೂಪಾಯಿಗಳು ಮತ್ತು ಪ್ರಶಂಸಾ ಪತ್ರವನ್ನು ಸ್ವೀಕರಿಸುವವರಿದ್ದಾರೆ. ಈ ಸ್ಪರ್ಧೆಯಲ್ಲಿ ತುಳಸಾ ಕಲುಮಂಗಿಯವರಿಗೆ ಹಲವಾರು ಬಾರಿ ಬಹುಮಾನಗಳು ದೊರೆತಿವೆ.

"ಅಮ್ಮ" ಕಥೆಯು ಶ್ರೀ ಚೋಡಿಸೆಟ್ಟಿ ಶ್ರೀನಿವಾಸರಾವುಗಾರು (ಕಾಕಿನಾಡ) ಅವರು ತೆಲುಗಿನಲ್ಲಿ 1985 ರಲ್ಲಿ ಬರೆದು ತುಂಬಾ ಪ್ರಸಿದ್ಧಿಯಾಗಿರುವ "ವೃದ್ಧಾಪ್ಯಂ ನೇರಮಾ" ಎಂಬ ಕಥೆಯ ಕನ್ನಡ ಅನುವಾದವಾಗಿದೆ. ಒಬ್ಬ ಅಸಹಾಯಕಳಾದ ತಾಯಿಯ ಪಾತ್ರದ ಸುತ್ತ ಹೆಣೆಯಲಾಗಿದೆ. ಇಂದಿಗೂ ಪ್ರಸ್ತುತವಾಗಿರುವ ಈ ಕಥಾ ವಸ್ತುವು ತೆಲುಗು ಪತ್ರಿಕೆಗಳಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತಿದೆ.

ದಿ. ಶ್ರೀಮತಿ ಶರ್ವಾಣಿ ಅವರು ತಮ್ಮ ಜೀವಿತ ಕಾಲದಲ್ಲಿ ತೆಲುಗು ಮತ್ತು ಕನ್ನಡ ಭಾಷೆಗಳ ಆದಾನ ಪ್ರದಾನ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದು ಎರಡೂ ಭಾಷೆಗಳ ಒಳ್ಳೆಯ ಕೃತಿಗಳನ್ನು ಅನುವಾದ ಮಾಡಿ ಶ್ರೇಷ್ಠ ಅನುವಾದಕಿಯೆಂಬ ಹೆಸರು ಪಡೆದಿದ್ದರು. ತುಳಸಾ ಕಲುಮಂಗಿ ಅವರು ದೆಹಲಿ ಕರ್ನಾಟಕ ಸಂಘದ ಅಜೀವ ಸದಸ್ಯರಾಗಿದ್ದು ನಾಟಕ, ಸಂಗೀತ, ಸಾಂಸ್ಕೃತಿಕ ಕಾರ್ಯಕ್ರಮಗಳು, ಸಾಹಿತ್ಯ ಸಂಜೆ ಹೀಗೆ ಸಂಘದ ಅನೇಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿರುತ್ತಾರೆ. ಅವರು ಜನಕಪುರಿ ಕನ್ನಡ ಕೂಟದ ಮಹಿಳಾ ವಿಭಾಗದ ಸದಸ್ಯರು ಮತ್ತು ಕೂಟದ ಕಾರ್ಯಕ್ರಮಗಳಲ್ಲಿ ಆಸಕ್ತಿಯಿಂದ ಭಾಗವಹಿಸುತ್ತಾರೆ.

ಪ್ರಸ್ತುತ ಸಂಘದ ಸಾಹಿತ್ಯ ಉಪಸಮಿತಿಯ ಸದಸ್ಯರೂ ಆಗಿರುವ ತುಳಸಾ ಕಲುಂಗಿ ಅವರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳು.

## ದೆಹಲಿ ಪೋಲೀಸ್ ಕನ್ನಡಿಗರ ಕಲ್ಯಾಣ ಸಮಿತಿಯ ನೂತನ ಕಾರ್ಯಕಾರಿ ಸಮಿತಿ



ಅಧ್ಯಕ್ಷ : ಶ್ರೀ ಸಿದ್ದಲಿಂಗಪ್ಪ

ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿಯ ವಾರ್ಷಿಕ ಸಭೆಯು ದಿನಾಂಕ 25.09.2011ರಂದು ನೆರವೇರಿತು. 2011–12ರ ಸಾಲಿನ ನೂತನ ಕಾರ್ಯಕಾರಿ ಸಮಿತಿಯನ್ನು ಈ ಕೆಳಗಿನಂತೆ ಆಯ್ಕೆ ಮಾಡಲಾಯಿತು.

ಅಧ್ಯಕ್ಷ : ಶ್ರೀ ಸಿದ್ದಲಿಂಗಪ್ಪ, ಉಪಾಧ್ಯಕ್ಷ : ಶ್ರೀ ಕೆ. ವಿಜಯಕುಮಾರ್, ಕಾರ್ಯದರ್ಶಿ : ಜಗನ್ನಾಥ್ ಕೆ., ಜಂಟಿ ಕಾರ್ಯದರ್ಶಿ : ಶ್ರೀ ಮಂಜುನಾಥ್ ಎಚ್.ಕೆ., ಖಜಾಂಚಿ : ಶ್ರೀ ಜಯರಾಮ್.

■ ಕೆ. ಜಗನ್ನಾಥ್

## ಎಸ್.ಎಲ್. ಭಂಡಾರ್‌ಕರ್ ಅವರಿಗೆ 'ಶಿಕ್ಷಾ ರತ್ನ ಪುರಸ್ಕಾರ'



ದೆಹಲಿ ಕನ್ನಡಿಗರಾಗಿದ್ದ ಮತ್ತು ಇದೀಗ ಗುಲಬರ್ಗಾದಲ್ಲಿರುವ ಕರ್ನಾಟಕ ಕೇಂದ್ರಿಯ ವಿಶ್ವವಿದ್ಯಾಲಯದ ಉಪ ಕುಲಸಚಿವರಾಗಿರುವ ಶಿವಾಜಿ ಭಂಡಾರ್‌ಕರ್ ಅವರಿಗೆ ನವದೆಹಲಿಯ ಪ್ರತಿಷ್ಠಿತ ಇಂಡಿಯಾ ಇಂಟರ್‌ನ್ಯಾಷನಲ್ ಫ್ರೆಂಡ್‌ಶಿಪ್ ಸೊಸೈಟಿಯ 'ಶಿಕ್ಷಾ ರತ್ನ ಪುರಸ್ಕಾರ' ಲಭಿಸಿದೆ.

ನವದೆಹಲಿಯ ಅಕ್ಟೋಬರ್ 12ರಂದು ನಡೆಯಲಿರುವ ಸಮಾರಂಭದಲ್ಲಿ ಈ ಪ್ರಶಸ್ತಿಯನ್ನು ಅವರಿಗೆ ಪುರಸ್ಕಾರ ಮಾಡಲಾಗುತ್ತಿದೆ. ಭಂಡಾರ್‌ಕರ್ ಅವರು ಒಂದು ದಶಕದ ಕಾಲ ದೆಹಲಿಯಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಅದಕ್ಕೂ ಮೊದಲು ಅವರು ಕರ್ನಾಟಕ ಮತ್ತು ಮಹಾರಾಷ್ಟ್ರಗಳಲ್ಲಿ ಸೇವೆ ಸಲ್ಲಿಸಿದ್ದರು. ಇದೀಗ ಗುಲಬರ್ಗಾದ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಉಪ ಕುಲಸಚಿವರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಶಿಕ್ಷಣ, ಬೋಧನೆ, ಮತ್ತು ಸಂಶೋಧನೆಗಳಲ್ಲಿ ಅತೀವ ಆಸಕ್ತಿ ಹೊಂದಿರುವ ಇವರು ಪರಿಸರ ವಿಜ್ಞಾನ ಮತ್ತು ಇಂಜಿನಿಯರಿಂಗ್ ಸ್ನಾತಕೋತ್ತರ ಪದವೀಧರರು. ಹಾಗೆಯೇ ಎಂ.ಬಿ.ಎ. ಪದವಿಯನ್ನೂ ಇವರು ಹೊಂದಿದ್ದಾರೆ. 2005ರಲ್ಲಿ 'ವೆಹಿಕಲ್ ಟ್ರಾನ್ಸ್‌ಪೋರ್ಟ್ ಮ್ಯಾನೇಜ್‌ಮೆಂಟ್' ಎಂಬ ಅತ್ಯುಪಯುಕ್ತ ಪುಸ್ತಕ ಪ್ರಕಟಿಸಿದ್ದು, ಇವರ ಹಲವಾರು ಸಂಶೋಧನಾ ಪ್ರಬಂಧಗಳು ನಾಡಿನ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ.

ಜನಕಪುರಿ ಕನ್ನಡ ಕೂಟದ ಪದಾಧಿಕಾರಿಯಾಗಿ, ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಹಾಗೂ ಅಭಿಮತದ ಜಂಟಿ ಪ್ರಧಾನ ಸಂಪಾದಕರಾಗಿ ಸೇವೆ ಸಲ್ಲಿಸಿರುವ ಭಂಡಾರ್‌ಕರ್ ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳು.

## ಮಂಜುನಾಥ್ ಮೋಹನ್ ಗೋಸಾಲ್ ಅವರಿಗೆ ಡಾಕ್ಟರೇಟ್ ಪದವಿ



ಮಂಜುನಾಥ್ ಮೋಹನ್ ಗೋಸಾಲ್ ಅವರು ದೆಹಲಿಯ ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿಗೆ ಸಲ್ಲಿಸಿದ್ದ "Experimental Studies on the Improved Utilization of Compressed Natural Gas (CNG) In Spark Ignited Engine" ಪ್ರಬಂಧಕ್ಕೆ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಗಿದೆ. ಹುಬ್ಬಳ್ಳಿಯಿಂದ ಪದವೀಧರರಾದ ಡಾ. ಎಂ.ಎಂ. ಗೋಸಾಲ್ ಅವರು 1998ರಿಂದ ದೆಹಲಿಯ ಪೋಲಿಸ್ ಸಂಶೋಧನಾ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಪ್ರಸ್ತುತ ದೆಹಲಿಯ ಕೇಂದ್ರ ಪತ್ತೇದಾರಿ ತರಬೇತಿ ಶಾಲೆಯ ಡೆಪ್ಯುಟಿ ಸೂಪರಿಂಟೆಂಡೆಂಟ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾದ ಗೋಸಾಲ್ ಅವರಿಗೆ ಸಂಘದ ಪರವಾಗಿ ಹಾರ್ದಿಕ ಅಭಿನಂದನೆಗಳು.

## ದೆಹಲಿ ಪೋಲೀಸ್ ಕನ್ನಡಿಗರ ಕಲ್ಯಾಣ ಸಮಿತಿಯಿಂದ ಗಣೇಶೋತ್ಸವ





ಸೆಪ್ಟಂಬರ್ 1 ರಿಂದ 4 ರವರೆಗೆ ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿಯಿಂದ ಅಶೋಕವಿಹಾರ್ ಕಮ್ಯುನಿಟಿ ಹಾಲ್, ಪೋಲಿಸ್ ಕಾಲೋನಿಯಲ್ಲಿ ಪ್ರತಿವರ್ಷದಂತೆ ಈ ವರ್ಷವೂ ಕೂಡ ವಿಜೃಂಭಣೆಯಿಂದ ಗಣೇಶೋತ್ಸವ ಹಾಗೂ ವಾರ್ಷಿಕೋತ್ಸವವನ್ನು ಆಚರಿಸಲಾಯಿತು. ಸೆಪ್ಟಂಬರ್ 1 ರಂದು ಗಣೇಶ ಮೂರ್ತಿಯನ್ನು ಸ್ಥಾಪನೆ ಮಾಡಿ ದೈನಂದಿನ ಪೂಜೆ ಹಾಗೂ ಭಜನೆ ಕಾರ್ಯಕ್ರಮವನ್ನು ನೆರವೇರಿಸಲಾಯಿತು. ಸೆಪ್ಟಂಬರ್ 4 ರಂದು ದೆಹಲಿ ಪೋಲಿಸ್ ಕನ್ನಡಿಗರ ಎಲ್ಲಾ ಕುಟುಂಬದವರ ಉಪಸ್ಥಿತಿಯಲ್ಲಿ ಪೂಜೆ ಹಾಗೂ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಸಲಾಯಿತು. ಇದೇ ಸಂದರ್ಭದಲ್ಲಿ ಶ್ರೀ ಬಸವರಾಜ್‌ಗಾಣಿಗರ್, ಶ್ರೀ ಪರಯ್ಯ ಸ್ವಾಮಿ, ಶ್ರೀ ನಾಗಪ್ಪನವರ ಸೇವಾ ನಿವೃತ್ತಿ ಸನ್ಮಾನ ಕಾರ್ಯಕ್ರಮ ವಿಶಿಷ್ಟವಾಗಿತ್ತು. ಮಧ್ಯಾಹ್ನದ ಸ್ವಾದಿಷ್ಟ ಭೋಜನದ ನಂತರ ಸಾಂಪ್ರದಾಯಿಕವಾಗಿ ಸಂಜೆ ಗಣೇಶ ಮೂರ್ತಿಯನ್ನು ಡೋಲು–ನಗಾರಿ, ಪಟಾಕಿ–ನೃತ್ಯದ ಜೊತೆ ವಿಜೃಂಭಣೆಯಾಗಿ ರೋಹಿಣಿ, ಸೆಕ್ಟರ್–15, ಹೈದರ್‌ಪುರ್, ಕಾಲುವೆಯಲ್ಲಿ ವಿಸರ್ಜನೆ ಮಾಡಲಾಯಿತು.

■ ಎ.ಟಿ. ಶ್ರೀನಿವಾಸ್

## ದಕ್ಷಿಣ ಭಾರತದ ಅಪ್ಪಟ ಕಾಟನ್ ಸೀರೆಗಳು
## ಕಾಟನ್ ಸಲ್ವಾರ್–ಕಮೀಜ್, ಮೈಸೂರು ಸಿಲ್ಕ್
## ಕಾಂಜೀವರಂ ಸಿಲ್ಕ್, ಮದುರೈ ಸ್ಪೆಶಲ್ ಕಾಟನ್ ಸೀರೆ,
## ಬೆಂಗಳೂರು ಕಾಟನ್ ಶರ್ಟ್‌ಗಳು
## ಹಾಗೂ

ಮಂಗಳೂರು ಧೋತರಗಳು, ಮೈಸೂರು ಅಗರಬತ್ತಿ, ಮೈಸೂರು ಸ್ಯಾಂಡಲ್ ಸೋಪ್

ಆಕರ್ಷಕ ಬೆಲೆಗಳಲ್ಲಿ

## ಮಾರಾಟ ಅಕ್ಟೋಬರ್ 15 ರಿಂದ ನವೆಂಬರ್ 15 ರವರೆಗೆ

## ದೀಪಾವಳಿ ಹಬ್ಬದ ಶುಭಾಶಯಗಳು

## 10 ರಿಂದ 30% ರಿಯಾಯಿತಿ




ಸ್ಥಳ

## ಪವಿತ್ರ ಸಿಲ್ಕ್ಸ್ ಆಂಡ್ ಫ್ಯಾಬ್ರಿಕ್ಸ್

ದೆಹಲಿ ಕರ್ನಾಟಕ ಸಂಘ, ರಾವ್ ತುಲಾರಾಂ ಮಾರ್ಗ

ಸೆಕ್ಟರ್–12, ಆರ್.ಕೆ.ಪುರಂ, ಹೊಸದೆಹಲಿ–110022

011–32429667, 9313869163, 931022273

ಸಮಯ : ಬೆಳಗ್ಗೆ 10.30ರಿಂದ ರಾತ್ರಿ 9.00ಗಂಟೆಯ ತನಕ